Adjournment Motion

re: *Police Firing at Gangavathi, Raichur District.*

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇನೆ.

ಅಧ್ಯಕ್ಷರು.—ತಾವು ಮತ್ತು ಇನ್ನು ಅನೇಕ ಸದಸ್ಯರುಗಳು ನಿಲುವಳಿ ಸೂಚನೆಯನ್ನು ಕಳುಹಿಸಿದ್ದಾರೆ. ಯಾರು ಯಾರು ನಿಲುವಳಿ ಸೂಚನೆಯನ್ನು ಕಳುಹಿಸಿದ್ದಾರೆ ಎಂಬುದನ್ನು ಹೇಳುತ್ತೇನೆ. ಶ್ರೀಯುತರುಗಳಾದ :—

೧) ಜಿ.ಎಸ್. ಶಿವನಂಜಪ್ಪ, ೨) ರಮೇಶ್ ಕುಮಾರ್, ೩) ಎಂ.ಸಿ. ನಾಣಯ್ಯ, ೪) ಜೆ.ಎಚ್. ಪಟೇಲ್, ೫) ಮೊಹಿದ್ದೀನ್, ೬) ಬಿ ಸುಬ್ಬಯ್ಯ ಶೆಟ್ಟಿ, ೭) ಚಂದ್ರಶೇಖರ್ ರವರು ಮತ್ತು ಎ. ಲಕ್ಷ್ಮೀಸಾಗರ್ ರವರು ಕಳುಹಿಸಿದ್ದಾರೆ. ಮತ್ತೆ ಶ್ರೀ ಯಾದವ್‌ರಾವ್ ರವರು ೩೧೨ರ ಕೆಳಗೆ ಕಳುಹಿಸಿದ್ದಾರೆ.

ಶ್ರೀ ಯು. ಬಿ. ಬೋರ್ಕರ್.—ಸ್ವಾಮಿ, ನಾನು ಎದ್ದು ನಿಂತು ಮಾತನಾಡುತ್ತಿರುವುದು ತಮ್ಮ ನಜರಿಗೇ ಬರುತ್ತಿಲ್ಲವಲ್ಲಾ ? ನಾನು ೮ ದಿವಸಗಳ ಕೆಳಗೇ ಪತ್ರ ಬರೆದು ಕಳುಹಿಸಿದ್ದೆ. ಆ ಕಾಗದ ನಿಮ್ಮ ಹತ್ತಿರ ಇದೆಯೋ ಇಲ್ಲವೋ ಗೊತ್ತಾಗಲಿಲ್ಲ. ಬಾಗಲಕೋಟೆ ವಿಷಯ ಮೊನ್ನೆ ನಾನು ಪ್ರಸ್ತಾಪ ಮಾಡುವುದಕ್ಕೆ ಹೋದಾಗ ತಾವು ಈಗ ಬೇಡ ಕುಳಿತುಕೊಳ್ಳಿ ಎಂದಿದಕ್ಕೆ ಕೂತುಕೊಂಡಿದ್ದೆ. ಬಾಗಲಕೋಟೆ ಘಟನೆಯ ಬಗ್ಗೆ ನಾನು ಕೆಲವು ವಿಷಯಗಳನ್ನು ಹೇಳಬೇಕಾಗಿದೆ.

ಅಧ್ಯಕ್ಷರು.—ನಿಮಗೂ ಅವಕಾಶ ಕೊಡುತ್ತೇನೆ ಆವಾಗ ಎಷ್ಟು ಬೇಕಾದರೂ ಮಾತನಾಡುವಿರಂತೆ ಕುಳಿತುಕೊಳ್ಳಿ.

ಶ್ರೀ ಎಸ್.ಆರ್. ಬೊಮ್ಮಾಯಿ.—ಅಧ್ಯಕ್ಷರೇ, ಕಳೆದ ಒಂದು ವಾರದಿಂದ ನರಗುಂದ, ಮತ್ತು ನವಲಗುಂದ ಭಾಗದ ರೈತರು ಚಳುವಳಿ ಮಾಡಿದಾಗ ಅವರ ಮೇಲೆ ಪೋಲೀಸಿನವರು ಗೋಲಿಬಾರು ಮತ್ತು ದಬ್ಬಾಳಿಕೆಯನ್ನು ಮಾಡಿದ ಮೇಲೆ ನಾವು ಈ ಸಭೆಯಲ್ಲಿ......

ಅಧ್ಯಕ್ಷರು.—ಈಗ ನನ್ನದೊಂದು ಸಲಹೆ ಏನೆಂದರೆ ಇವತ್ತು ಮತ್ತು ನಾಳೆ ಮಾತ್ರ ಡಿಮ್ಯಾಂಡ್ಸ್ ಮೇಲೆ ಮಾತನಾಡಲು ಟೈಮ್ ಇರುವುದು. ಡಿಮ್ಯಾಂಡ್ ಬಂದಾಗ ಬೇಕಾದರೆ ದೀರ್ಘವಾಗಿ ಮಾತನಾಡಬಹುದು. ಆದುದರಿಂದ ಈಗ ಸಹಿ ಮಾಡಿರುವವರು ಆದಷ್ಟು ಕಡಿಮೆ ಟೈಮ್‌ನಲ್ಲಿ ಹೇಳಿದರೆ ಸಮಯ ಸಹ ಉಳಿತಾಯವಾಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೇ, ಇದು ಡಿಮ್ಯಾಂಡ್‌ನ ಮೇಲೆ ಮಾತನಾಡತಕ್ಕ ವಿಚಾರವಾಗಿಲ್ಲ ಬಹಳ ಗಂಭೀರವಾಗಿರತಕ್ಕ ವಿಚಾರವಾಗಿದೆ. ರಾಜ್ಯದ ಜನತೆಯ ಜೀವನಮರಣದ ಸಮಸ್ಯೆಯಾಗಿದೆ. ಆದುದರಿಂದ ನಾವು ಇಲ್ಲಿ ಚರ್ಚೆ ಮಾಡುವುದಿಲ್ಲ, ಪ್ರಾಸ್ತಾವಿಕವಾಗಿ ಏನು ಹೇಳಬೇಕೋ ಅಷ್ಟನ್ನು ಮಾತ್ರ ಹೇಳುತ್ತೇನೆ.

ಅಧ್ಯಕ್ಷರು.—ತಮಗೇ ಸಮಯ ಸಿಕ್ಕುವುದಿಲ್ಲ ಎನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ.

ಶ್ರೀ ಎಂ. ಸಿ. ನಾಣಯ್ಯ.—ಅಧ್ಯಕ್ಷರೇ, ನಿಲುವಳಿ ಸೂಚನೆಯನ್ನು ನಾವು ತಂದಿದ್ದೇವೆ, ಈಗ ಮಾನ್ಯ ಮುಖ್ಯ ಮಂತ್ರಿಗಳವರ ಸುಮಾರು ಬೇಡಿಕೆಗಳು ಇವೆ......

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೇ, ನನ್ನದೊಂದು ಸಲಹೆ, ತಾವು ನಿಲುವಳಿ ಸೂಚನೆಯಾಗಿ ಇಲ್ಲಿ ಚರ್ಚೆ ಮಾಡುವುದಕ್ಕೆ ಈಗಲೇ ಅವಕಾಶ ಮಾಡಿಕೊಟ್ಟು ಬಿಟ್ಟರೆ, ಸಮಯ ಕೂಡ ಕಡಿಮೆಯಾಗುತ್ತದೆ.

ಶ್ರೀ ಎಂ. ಸಿ. ನಾಣಯ್ಯ.—ನಾವು ನಿಲುವಳಿ ಸೂಚನೆಯನ್ನು ಕೊಟ್ಟಿರತಕ್ಕ ವಿಷಯ ಏನಿದೆ ಅದನ್ನು ಬೇಡಿಕೆಗಳ ಮೇಲೆ ಮಾತನಾಡುವಾಗ ಮಾತನಾಡಿ ಎಂದರೆ, ಅದು ಬೇಡಿಕೆಯ ಮೇಲೆ ಚರ್ಚೆ ಮಾಡತಕ್ಕ ವಿಷಯ ಅಲ್ಲ. ಅದು ಬಹಳ ಗಂಭೀರವಾದ ಸಮಸ್ಯೆಯಾಗಿದೆ. ಅದನ್ನು ೩ ದಿನಗಳ ಕೆಳಗೆ ರೂಲ್ ೫೯ರ ಕೆಳಗೆ ಚರ್ಚೆಗೆ ತರಲಾಗಿತ್ತು. ಆಗ ಮಾನ್ಯ ದೇವೇಗೌಡರು ಹೇಳಿದರು, ಈ ಸದನದಲ್ಲಿ ಇಂಥ ಸಮಸ್ಯೆ ಚರ್ಚೆಯಾಗುತ್ತಿರುವುದು ಇದೇ ಮೊದಲು ಎಂದು. ತಾವು ಇದಕ್ಕೆ ಅವಕಾಶ ಕೊಟ್ಟರೆ

ಚರ್ಚೆ ಬಹಳ ಸುಲಭದಲ್ಲಿ ಆಗುತ್ತದೆ ನಂತರ ಮಾನ್ಯ ಮುಖ್ಯ ಮಂತ್ರಿಗಳ ಬೇಡಿಕೆಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶವಾಗುತ್ತದೆ.

ಶ್ರೀ ಆರ್. ಗುಂಡೂರಾವ್.—ಚರ್ಚೆ ಯಾವುದರ ಬಗ್ಗೆ ?

ಶ್ರೀ ಎಂ. ಸಿ. ನಾಣಯ್ಯ.—ಗಂಗಾವತಿ ಪ್ರಕರಣದ ಬಗ್ಗೆ. ಅಲ್ಲಿ ೪ ಜನರು ಸತ್ತಿದ್ದಾರೆ.

ಶ್ರೀ ಆರ್. ಗುಂಡೂರಾವ್.—ಲೂಟಿ ಮಾಡುವುದಕ್ಕೆ ಹೋಗಿದ್ದರು, ಅದಕ್ಕೆ ಸತ್ತಿದ್ದಾರೆ. ಇಂಥ ದ್ದೆಲ್ಲ ರಾಜ್ಯದಲ್ಲಿ ನಡೆಯತಕ್ಕದ್ದು ಹೊಸದೇನಲ್ಲ.

Sri Ramesh Kumar.—You shoot us. Is it the intention of the Government ?

ಅಧ್ಯಕ್ಷರು.—ಪ್ರೊಸೀಜರ್ ಪ್ರಕಾರ ಮಾತನಾಡಿದರೆ ಚರ್ಚೆಗೆ ಅವಕಾಶ ಕೊಡುತ್ತೇನೆ.

ಶ್ರೀ ಪಂಪಾಪತಿ.—ಸರ್ಕಾರದವರು ಕನಿಕರ ಭಾವನೆ ತೋರಿಸದಿದ್ದರೆ ಹೇಗೆ ?........

ಅಧ್ಯಕ್ಷರು.—ನಿಮಗೆ ಸೌಜನ್ಯ ಗೊತ್ತಿಲ್ಲವೆ ? ಈಗ ಮಾನ್ಯ ಮುಖ್ಯ ಮಂತ್ರಿಗಳು ಮಾತನಾಡುವು ದಕ್ಕೆ ನಿಂತಿದ್ದಾರೆ. ಅವರ ಮಧ್ಯದಲ್ಲಿ ನೀವು ಮಾತನಾಡುತ್ತೀರಲ್ಲ. ಈ ತರಹ ಮಾತನಾಡಿದರೆ ಏನು ಪ್ರಯೋಜನವಾಗುವುದಿಲ್ಲ. ಸಭಾಧ್ಯಕ್ಷರಿಗೆ ಗೌರವ ಕೊಡುವುದಕ್ಕೆ ತಯಾರಿಲ್ಲದಿದ್ದರೆ ಸಭೆಯನ್ನು ನಡೆಸುವುದಾದರೂ ಹೇಗೆ ?

ಶ್ರೀ ಪಂಪಾಪತಿ.—ಸ್ವಾಮೀ......

ಅಧ್ಯಕ್ಷರು.—ನೀವು ಅನುಮತಿ ಪಡೆಯದೆ ಮಾತನಾಡುತ್ತಿರುವುದರಿಂದ ಅದು ರೆಕಾರ್ಡ್ ಆಗುವುದಿಲ್ಲ. ರೆಕಾರ್ಡ್ ಮಾಡಬೇಡಿ.

ಶ್ರೀ ಆರ್. ಗುಂಡೂರಾವ್.—ಮಾನ್ಯ ಬೊಮ್ಮಾಯಿಯವರು ಮಾತನಾಡಲು ನಿಂತಾಗ, ನೀವು ಹೇಳುವುದಕ್ಕೆ ಮೊದಲು ನಾನು ಎರಡು ಮಾತುಗಳನ್ನು ಹೇಳುತ್ತೇನೆಂದು ನಿಂತೆ. ಅದಕ್ಕೆ ಮಾನ್ಯ ರಮೇಶ್ ಕುಮಾರ್ ರವರು ಬಹಳವಾಗಿ temper lose ಮಾಡಿಕೊಂಡು ಮಾತನಾಡಿದರು. ಏನು ವಿಷಯವನ್ನು ಹೇಳಬೇಕೋ ಅದನ್ನು ಸಮಾಧಾನದಿಂದ ಹೇಳಬಹುದು ; ಅದಕ್ಕೆ ತಾವು ಅವಕಾಶ ಕೊಡುತ್ತೀರಿ. ಯಾವತ್ತೂ ಅವರು temper lose ಮಾಡಿಕೊಳ್ಳುವವರಲ್ಲ. ಅದೇನೋ ಇವತ್ತು...

ಶ್ರೀ ಬಿ. ಬಸವಲಿಂಗಪ್ಪ.—ನಿಮ್ಮನ್ನು ನೋಡಿ ಹಾಗೆ ಮಾಡುತ್ತಾರೆ.

ಶ್ರೀ ಆರ್. ಗುಂಡೂರಾವ್.—ಅದಕ್ಕೆ ನಾನೂ temper lose ಮಾಡಿಕೊಂಡು ಮಾತನಾಡ ಬೇಕೆಂದು ಅಲ್ಲ. ನನಗೇನು ಗೊತ್ತಿಲ್ಲವೆಂದು ಅಲ್ಲ ; ಆದರೆ ನಾನು ಅದಕ್ಕೆ ಹೋಗುವುದಿಲ್ಲ. ನನಗೂ ಒಂದೊಂದು ಸಾರಿ ಆಗುತ್ತದೆ ; ಆದರೆ ಅದರಲ್ಲಿ ಏನು ಹೆಚ್ಚುಗಾರಿಕೆ ಇಲ್ಲ. ಯಾವ ವಿಷಯದ ಬಗ್ಗೆ ಏನು ಹೇಳಬೇಕೆನ್ನುತ್ತಾರೋ ಅದಕ್ಕೆ ತಾವು ಅಪ್ಪಣೆ ಕೊಟ್ಟರೆ ಹೇಳಲಿ. ಗಂಟೆಗಟ್ಟಲೆ ಹೇಳಿದರೂ ನಾನು ಕೇಳುವುದಕ್ಕೆ ತಯಾರಿದ್ದೇನೆ. ಮಾನ್ಯ ನಾಣಯ್ಯನವರು ಏನೋ ಹೇಳಿದರು. ಅದಕ್ಕೆ ನಾನು ಹೊಸದು ಏನು ಇದೆ ಎಂದೆ. ಅದಕ್ಕೆ ನನ್ನ ಕಡೆ ಹೇಳಿಕೆ ಸಿದ್ಧವಾಗಿದೆ. ನಾನು ಈಗ ಮಾತನಾಡಿದ ಕೂಡಲೇ ಬೇಕೆಂದರೂ ಹೇಳಿಕೆ ಕೊಡುತ್ತೇನೆ. ಅದಕ್ಕೆ ಅಷ್ಟು ಜೋರಾಗಿ ಮಾತನಾಡುವುದು ಏಕೆ ಎಂಬುದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಆರ್. ಎಸ್. ಪಾಟೀಲ್.—ಮಾನ್ಯ ಪಂಪಾಪತಿಯವರು, ದೇಶದಲ್ಲಿ ನಡೆದ ಘಟನೆಗಳ ಬಗ್ಗೆ ಮನಸ್ಸಿಗೆ ನೋವಾಗಿ ಆವೇಶದಲ್ಲಿ ಮಾತನಾಡಿದರೇ ವಿನಹ ತಮಗೆ ಅಗೌರವ ತೋರಿಸಬೇಕೆಂದಾಗಲೀ ಅಥವಾ ತಮ್ಮನ್ನು ರೇಗಿಸಬೇಕೆಂದಾಗಲಿ ಮಾತನಾಡಲಿಲ್ಲ.

(ಸಭೆಯಲ್ಲಿ ಗೊಂದಲ)

ಶ್ರೀ ಬಿ. ವಿ. ಕಕ್ಕಿಲಾಯ.—ಸದನದ ಒಳಗೂ ಇದೇ ಮಾಡುತ್ತೀರಾ ?

ಅಧ್ಯಕ್ಷರು.—ರೆಕಾರ್ಡ್ ಮಾಡಬೇಡಿ.

** ** **

* As ordered by the chair the matter was not recorded

ಶ್ರೀ ಕೆ, ಭಾಸ್ಕರ ನಾಯ್ಡು.—ಮೊನ್ನೆ ವಿರೋಧ ಪಕ್ಷದವರು ಚನ್ನಾಗಿ ಸಹಕಾರ ನೀಡಿದರು; ಅದೇ ರೀತಿ ನಮ್ಮ ಕಡೆಯುವರು ಮಾಡಿದರು. Sir, ryots have got all the benefits which they have not seen so far, because I know Members have taken interest regarding agriculturists and remedies are being made. We are also co-operating with the Opposition. Of course, I am not wise to tell you, but, I will tell you my feelings. There seems to be some amount of talk amongst people all over the places, that whatever they do they think there are some people who are going to support them. With that presumption they go on doing some chaos and confusion. For that we should not give room. Of course, we are with you. They should not take it for granted that to whatever they do, they will get our support. Thereby we are creating some kind of chaos in this place. That feeling is there. There cannot be anybody as good as we, to co-operate with the Opposition.

12-00 Noon

My feeling is that sir, let the Leader of the House and the Opposition leaders meet and......

SRI RAMESH KUMAR.—This time, we do not want to leave it to Leaders. We will leave it to this House only

SRI K. BHASKAR NAIDU.—Sri Ramesh Kumar, best of things are decided by a few people only. We all cannot decide anything. Later on we will decide and if it is good, we will take it, if it is bad, we will leave it, for what has happened in the country, there are people who are supporting such ideas.

ಶ್ರೀ ಪಂಪಾಪತಿ.—ಅವರು ಏನು ಹೇಳುತ್ತಾರೋ ನಮಗೆ ಗೊತ್ತಾಗುವುದಿಲ್ಲ. ದಯವಿಟ್ಟು ಕನ್ನಡದಲ್ಲಿ ಮಾತನಾಡಲಿ.

ಶ್ರೀ ಬಿ. ವಿ. ಕಕ್ಕಿಲಾಯ.—ನಮಗೂ ಜವಾಬ್ದಾರಿ ಗೊತ್ತಿದೆ. ಅನಾಹುತವಾಗಬೇಕು ಎಂಬುದು ನಮ್ಮ ಅಭಿಪ್ರಾಯವೂ ಅಲ್ಲ, ಆಸೆಯೂ ಅಲ್ಲ.

ಶ್ರೀ ಕೆ. ಭಾಸ್ಕರ ನಾಯಿಡು.—ನಾನು ಕನ್ನಡದಲ್ಲಿ ಮಾತನಾಡುತ್ತೇನೆ. ಆದರೆ ಅದರಲ್ಲಿ ಏನಾದರೂ ತಪ್ಪಿದ್ದರೆ ಕ್ಷಮಿಸಬೇಕು ನಾನು ಹೇಳುವುದೇನೆಂದರೆ ನಮ್ಮ ನಾಯಕರೂ ಹೋಗಿದ್ದಾರೆ. ನಿಮ್ಮ ಕಡೆಯುವರೂ ಹೋಗಿದ್ದಾರೆ. ನಾವು ಸಹಕರಿಸುವುದಕ್ಕೆ ೧೦೦ ಪರ್ಸೆಂಟ್ ಒಪ್ಪಿಗೆ ಕೊಡುತ್ತೇವೆ. ಇದುವರೆಗೂ ಯಾವ ಮುಖ್ಯಮಂತ್ರಿಯೂ ಹೋಗಿ ಮಾಡದಂಥ ಕೆಲಸವನ್ನು ನಮ್ಮ ಮುಖ್ಯಮಂತ್ರಿಗಳು ಮಾಡುತ್ತಿದ್ದಾರೆ. ಏನಾದರೂ ತಪ್ಪಾಗಿದ್ದರೆ ಅದನ್ನು ತಿಳಿಸಿ, ಒಪ್ಪಿಕೊಳ್ಳುತ್ತೇನೆ. ಇವತ್ತು ದೇಶದಲ್ಲಿ in the Legislative Assembly and in the Council there are people who are supporting such things. ಕೆಲವರು ಈ ವಿಷಯವನ್ನು ದೊಡ್ಡದನ್ನಾಗಿ ಮಾಡಿ ಏನಾದರೂ ಮಾಡಬಹುದು ಎಂಬ ದೃಷ್ಟಿಯಿಂದ ಹೇಳುತ್ತಿದ್ದೇನೆ. ಮುಗ್ಧ ಜನರು ಸಾಯುತ್ತಿದ್ದಾರೆ, ಅದನ್ನು ತಪ್ಪಿಸಬೇಕು. ಬಳ್ಳಾರಿಯಲ್ಲಿ ಬಂದ್ ಆಗಿದೆ, ಅಲ್ಲೂ ಕೂಡ ಚಳುವಳಿ ಪ್ರಾರಂಭವಾಗಿದೆ.

SRI NAZIR AHMED SIDDIQUI.—Don't you think, on the other side, you are encouraging the police like this ? Let them not hurt the feelings......

Sri K. Bhaskar Naidu.—I am the last man to encourage the police to do mis-deeds or to take law into their own hands, but we must also know that the police have come always at last. Do you expect police to be silent victims ?

Sri B.V. Kakkilaya.—Mr. Spaker sir, kindly permit Sri Bommai to move this Adjournment motion.

† ಶ್ರೀ ಎಸ್. ಆರ್ ಬೊಮ್ಮಾಯಿ (ಹುಬ್ಬಳ್ಳಿ).—ಮಾನ್ಯ ಅಧ್ಯಕ್ಷರೇ, ಈ ವಿಚಾರವಾಗಿ ನಿಲುವಳಿಸೂಚನೆಯನ್ನು ಈ ಕಡೆ ಸದಸ್ಯರು ಕೊಡಬೇಕಾದರೆ ಇದರ ಹಿಂದೆ ಇರತಕ್ಕ ಭಾವನೆಗಳನ್ನು ತಾವು ಮತ್ತು ಮನೆಯ ಸದಸ್ಯರು ಮತ್ತು ಸರ್ಕಾರ ತಿಳಿದುಕೊಳ್ಳಬೇಕೆಂಬ ಪ್ರಾರ್ಥನೆಯನ್ನು ಪ್ರಥಮದಲ್ಲಿ ಮಾಡಿಕೊಳ್ಳುತ್ತೇನೆ. ಇವತ್ತು ಈ ಪ್ರಶ್ನೆಯನ್ನು ಎತ್ತುವುದಕ್ಕೆ ಪ್ರಾರಂಭ ಮಾಡಿದಾಗಲೇ ಆ ಕಡೆಯ ಸದಸ್ಯರು ಎದ್ದು ಒಂದು ರೀತಿಯಿಂದ ಇದು ಚರ್ಚೆಯಾಗಬೇಕು ಎಂಬ ಬಗ್ಗೆ ಬೆಂಬಲ ಕೊಟ್ಟಿದ್ದಾರೆ. ಶ್ರೀಮಾನ್ ಭಾಸ್ಕರ ನಾಯಿಡು ಅವರೂ ಕೂಡ ಹೇಳಿದ್ದಾರೆ. ನಾನು ಆ ವಿಚಾರ ಪ್ರಸ್ತಾಪ ಮಾಡುವುದಿಲ್ಲ ೨೧ನೇ ತಾರೀಖು ನವಲಗುಂದ, ನರಗುಂದ ರೈತರ ಮೇಲೆ ನಡೆದ ಗೋಲೀಬಾರ್ ಮತ್ತು ರೈತರ, ಪೋಲೀಸರ, ಕೊಲೆ ಅದರ ಬಗ್ಗೆ ಚರ್ಚೆ ಮಾಡಿದ್ದೇವೆ. ಅಂದಿನಿಂದ ಇಂದಿನವರೆಗೂ ಒಂದು ವಾರ ಪ್ರತಿದಿನ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಆ ಬಗ್ಗೆ ಪ್ರತಿಭಟನೆ ನಡೆದಿದೆ. ಬೆಲೆ ಏರಿಕೆ ವಿರುದ್ಧ ಅನೇಕ ನಗರಗಳಲ್ಲಿ ರಾಜ್ಯದ ತುಂಬೆಲ್ಲಾ ಬಂದ್‌ಗಳಾಗಿವೆ ಮೆರವಣಿಗೆಗಳಾಗಿವೆ. ಜನತೆ ತಮ್ಮ ತೀವ್ರವಾದ ಅಸಂತೋಷವನ್ನು ಬೆಲೆ ಏರಿಕೆ ವಿರುದ್ಧ, ಸರ್ಕಾರದ ಕಾರ್ಯಕ್ರಮದ ವಿರುದ್ಧ ವ್ಯಕ್ತಪಡಿಸಿ ಪ್ರತಿಭಟನೆ ಮಾಡುತ್ತಿದೆ. ಇದು ಒಂದು ಭಾಗ. ಇದರ ಜೊತೆಗೆ ಕೆಲವು ಕಡೆ ಲೂಟಿ, ದಂಗೆಗಳು ಕೂಡ ಆಗಿವೆ. ಪ್ರತಿದಿನ ನಾವು ಇದನ್ನು ಪತ್ರಿಕೆಗಳಲ್ಲಿ ನೋಡುತ್ತಿದ್ದೇವೆ. ಈ ವಾರದಲ್ಲಿ ಗುಂಡೂರಾಯರ ಸರ್ಕಾರ ಪ್ರತಿದಿನ ಗುಂಡು ಹಾರಿಸುತ್ತಿದೆ. ಗುಂಡೂರಾಯರ ಸರ್ಕಾರ ಗುಂಡಿನ ಸರ್ಕಾರವಾಗಿ ಪರಿಣಮಿಸಿದೆ. ಇದು ಮುಖ್ಯವಾಗಿ ಚರ್ಚೆ ಮಾಡುವಂಥ ವಿಚಾರ, ನಾನು ಈ ವಿಚಾರವನ್ನು ಪ್ರಸ್ತಾಪ ಮಾಡುವಾಗ ಸ್ಪಷ್ಟವಾಗಿ ಹೇಳುತ್ತಿದ್ದೇನೆ, ಸರ್ಕಾರ ಈ ರೀತಿ ಗುಂಡು ಹಾರಿಸುತ್ತಿದ್ದರೆ ಪೋಲೀಸರ ದಬ್ಬಾಳಿಕೆಯಿಂದ......

Sri K. Bhaskar Naidu.—They are shooting not for pleasure, but to maintain law and order.

ಶ್ರೀ ಎಸ್. ಆರ್. ಬೊಮ್ಮಾಯಿ.—ಇದರಲ್ಲಿ ಯಾರಿಗೂ ಸಂತೋಷ ಇಲ್ಲ. ಅದನ್ನು ನೀವು ಹೇಳಬೇಕಾಗಿಲ್ಲ. ಪ್ರತಿದಿನ ಜನರ ಮೇಲೆ ಗುಂಡು ಹಾರಿಸುತ್ತಿದ್ದಾರೆ. ಯಾರೂ ಕೂಡ ಮೋಜಿಗಾಗಿ ಗುಂಡು ಹಾರಿಸುವುದಿಲ್ಲ. ಅದರಿಂದ ಸಂತೋಷವೂ ಯಾರಿಗೂ ಇರುವುದಿಲ್ಲ unless he is a dictator, a man who wants to have a tyrannical rule. ಕೆಲವರಿಗೆ ಇದರಲ್ಲಿ ಸಂತೋಷ ಇದೆ, ಇಲ್ಲ ಎಂದು ತಿಳಿದುಕೊಳ್ಳಬೇಡಿ. ಸರ್ವಾಧಿಕಾರಿಗಳು ರಕ್ತ ನೋಡಿ ಸಂತೋಷ ಪಡುತ್ತಾರೆ ಅಂಥವರೂ ಇರುತ್ತಾರೆ. ಇದು ಪ್ರಜಾಪ್ರಭುತ್ವ ಆದ್ದರಿಂದ ಹೇಳುತ್ತಿದ್ದೇನೆ, ಈ ರೀತಿ ಮಾಡುವುದು ನಿಜವಾಗಿ ಸರ್ಕಾರಕ್ಕೆ ಶೋಭೆಯಲ್ಲ. ಇದರ ಹಿನ್ನೆಲೆ ಬಗ್ಗೆ ಪುನಃ ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ ಈ ಮನೆಯಲ್ಲಿ ಚರ್ಚೆ ಮಾಡಿದ್ದೇವೆ. ಚರ್ಚೆ ಮಾಡಿದಮೇಲೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಉತ್ತರ ಕೊಟ್ಟನಂತರವೂ ರಾಜ್ಯದಲ್ಲಿ ಎಲ್ಲೆಲ್ಲಿ ಏನೇನು ನಡೆಯುತ್ತಿದೆ. ಎಂಬುದರ ಬಗ್ಗೆ ಫೋನ್ ಕರೆಗಳು, ತಂತಿಗಳು ಬರುತ್ತಿವೆ. ಪೊಲೀಸರು ಯಾವ ರೀತಿ ನಡೆದುಕೊಳ್ಳುತ್ತಿದ್ದಾರೆ ಎಂಬುದನ್ನು ತಿಳಿಸುತ್ತಿದ್ದಾರೆ. ಇದು ಬಹಳ ಮಹತ್ತರವಾದ ವಿಚಾರ. ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವಾಗ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದರು. ಆ ಉತ್ತರದ ಧಾಟಿ ಮಾತ್ರ ಜನತೆಗೆ ಸಮಾಧಾನ ತಂದಿಲ್ಲ ಎಂದು ಸ್ಪಷ್ಟವಾಗಿ ಹೇಳುತ್ತೇನೆ, ಇವತ್ತು ರೈತರ ಚಳುವಳಿ ಬಗ್ಗೆ ರೈತನಾಯಕರು ಪ್ರತಿಕ್ರಿಯೆ ವ್ಯಕ್ತ ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆ ಬಗ್ಗೆ ಪ್ರತಿಕ್ರಿಯೆ ವ್ಯಕ್ತ ಮಾಡಿದ್ದಾರೆಂಬುದನ್ನು ಅರಿತುಕೊಳ್ಳಬೇಕು. ಮಾನ್ಯ ಮುಖ್ಯಮಂತ್ರಿಗಳು ಆಶ್ವಾಸನೆ ಕೊಡುತ್ತಿರುವುದರಿಂದ ಎಲ್ಲಾ ಸರಿಹೋಗುತ್ತದೆ, ಮುಂದೆ ಏನೂ ಆಗುವುದಿಲ್ಲ ಎಂದು ನಾವು ಭಾವಿಸಿಕೊಂಡಿದ್ದೆವು ನಾವು ಯಾರು ಕೂಡ ಹಿಂಸಾಚಾರವನ್ನು ಸಮರ್ಥನೆ

ಮಾಡುವುದಿಲ್ಲ. ಎಲ್ಲರೂ ಹಿಂಸಾಚಾರವನ್ನು ಖಂಡಿಸುತ್ತೇವೆ. ಆದರೆ ಶಾಂತಿಯುತವಾಗಿ ಅಹಿಂಸಾ ಮಾರ್ಗವಾಗಿ ರೈತರು, ಕೂಲಿಕಾರರು, ಮಧ್ಯಮವರ್ಗದವರು, ಬಡವರು ತಮ್ಮ ಸಮಸ್ಯೆಗಳನ್ನೂ ಪರಿಹಾರ ಮಾಡಿಕೊಳ್ಳುವುದಕ್ಕೆ ಚಳುವಳಿ ಮಾಡಿ ಮೆರವಣಿಗೆ ಮಾಡಿದರೆ ಬಂದ್ ಮಾಡಿದರೆ ಕಾನೂನಿಗೆ ಅನುಗುಣವಾಗಿ ನಡೆಯತಕ್ಕ ಚಳುವಳಿಯನ್ನು ಹತ್ತಿಕ್ಕುವುದಕ್ಕೆ ಪ್ರಯತ್ನ ಮಾಡಿದರೆ ಅವನ್ನು ಖಂಡಿಸಲೇಬೇಕು, ತಡೆಯಲೇಬೇಕು.

ಶ್ರೀ ಮುತ್ತಿನ ಪೆಂಡಿಮಠ್.—ಹಿಂಸಾಚಾರ ಮಾಡುವವರ ಮೇಲೆ ಕ್ರಮ ಕೈಗೊಂಡಿದ್ದಾರೆಯೇ ಹೊರತು ಶಾಂತಿಯುತವಾಗಿ ಮಾಡುವವರ ವಿರುದ್ಧ ಕ್ರಮ ಕೈಗೊಂಡಿಲ್ಲ.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಈ ನಿಲುವಳಿ ಸೂಚನೆ ಮಂಡಿಸಲು ತಮ್ಮ ಒಪ್ಪಿಗೆ ಪಡೆಯುವುದಕ್ಕಾಗಿ ಕೆಲವೇ ವಿಚಾರಗಳನ್ನು ಹೇಳುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಆಶ್ವಾಸನೆ ಕೊಟ್ಟಮೇಲೂ ನವಲಗುಂದ, ನರಗುಂದ ಭಾಗಗಳಲ್ಲಿ ಸುಮಾರು ೩೦೦ ಜನರನ್ನು ಪೋಲೀಸರು ಮನಬಂದಂತೆ ಸಿಕ್ಕಿದವರಿಗೆಲ್ಲಾ ಹೊಡೆದಿದ್ದಾರೆ. ಏನಾದರೂ ತಪ್ಪು ಮಾಡಿರುವುದು ಕಂಡುಬಂದರೆ ಹೊಡೆಯಲಿ, ಅರೆಸ್ಟ್ ಮಾಡಲಿ, ಅರೆಸ್ಟ್ ಮಾಡುವುದು ಬೇಡ ಎಂದು ನಾನು ಹೇಳುವುದಿಲ್ಲ. ಆದರೆ ಅವರು ಸಿಕ್ಕಿದವರನ್ನು ತೆಗೆದುಕೊಂಡುಹೋಗಿ ಮನಬಂದಂತೆ ಬಡಿಯುತ್ತಿದ್ದಾರೆ. ೨೧ನೇ ತಾರೀಖಿನಿಂದ ಪ್ರತಿದಿನ ೩೦೦ ಜನರನ್ನು ಸೆರೆಹಿಡಿದು ಹಾಕುತ್ತಿದ್ದಾರೆ. ಸಂಶಯ ಬಂದರೆ ಸರ್ಕಾರಕ್ಕೆ ಸೆರೆ ಹಿಡಿಯುವುದಕ್ಕೆ ಅಧಿಕಾರ ಇದೆ. ಆದರೆ ಸುಮ್ಮನೆ ಸಿಕ್ಕಿದವರನ್ನೆಲ್ಲ ಸೆರೆ ಹಿಡಿಯುವುದಕ್ಕೆ ಪೋಲೀಸಿನವರಿಗೆ ಯಾರು ಅಧಿಕಾರ ಕೊಟ್ಟಿದ್ದಾರೆ ? ಸಿಕ್ಕಿದ ಜನರನ್ನು ಒಳಕ್ಕೆ ಹಾಕಿ, ಊಟ ನೀರು ಕೊಡದೆ, ಮಲ ವಿಸರ್ಜನೆ ಮಾಡುವುದಕ್ಕೂ ಬಿಡದೆ ಥಳಿಸುವುದಕ್ಕೆ ಅಧಿಕಾರ ಕೊಟ್ಟವರು ಯಾರು ? ನಿಮ್ಮ ಸರ್ಕಾರ ಇಂತಹ ಅಧಿಕಾರವನ್ನು ಪೋಲೀಸರಿಗೆ ಕೊಟ್ಟಿದೆಯೆ ? ಸರ್ಕಾರ ಕಣ್ಣು ತೆರೆದು ನೋಡಬೇಕು. ಜನ ನಡುಗಿ ಹೋಗಿದ್ದಾರೆ. ನಿರಪರಾಧಿಗಳ ಮೇಲೆ ಅತ್ಯಾಚಾರ ನಡೆಯುತ್ತಿದೆ. ರೈತರ ಚಳವಳಿಯನ್ನು ಸಂಪೂರ್ಣವಾಗಿ ಹತ್ತಿಕ್ಕಬೇಕೆಂಬ ಭಾವನೆಯಿಂದ ಈ ರೀತಿ ಮಾಡಲಾಗುತ್ತಿದೆ. ಮೂರು ಜನ ಪೋಲೀಸ್ ಅಧಿಕಾರಿಗಳ ಸಾವಿಗೆ ಕಾರಣರಾದವರ ಮೇಲೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳುವುದಕ್ಕೆ ನಾವು ಅಡ್ಡ ಬರುವುದಿಲ್ಲ. ಆದರೆ, ಆ ನೆಪದಲ್ಲಿ ರಾಜ್ಯಾದ್ಯಂತ ಹಬ್ಬುತ್ತಿರುವ ರೈತರ ಚಳವಳಿಯನ್ನು ತಡೆಗಟ್ಟಲಿಕ್ಕೆ ಒಂದು ಉಪಾಯವನ್ನು ತಾವು ಕಾಣುತ್ತಿದ್ದೀರೆಂದು ನಾನು ತಿಳಿದುಕೊಂಡಿದ್ದೇನೆ. ಆ ಭಾಗದ ಜನರನ್ನು ಅತ್ಯಂತ ಹೀನವಾದ ದೌರ್ಜನ್ಯಕ್ಕೊಳಪಡಿಸಿ ರೈತರ ಚಳವಳಿ ರಾಜ್ಯದ ಬೇರೆ ಭಾಗಗಳಿಗೆ ಪಸರಿಸದಂತೆ ನೋಡಿಕೊಳ್ಳಬೇಕೆಂಬ ಭಾವನೆಯಿಂದ ಹೀಗೆಲ್ಲ ಮಾಡಲಾಗುತ್ತಿದೆ. ಆದುದರಿಂದ, ನಾನು ಸರ್ಕಾರಕ್ಕೆ ಎಚ್ಚರಿಕೆ ಕೊಡುತ್ತೇನೆ ಇದೇ ರೀತಿ ಮುಂದುವರೆದರೆ ರೈತರ ಚಳವಳಿ ನಿಲ್ಲುವುದಿಲ್ಲ ; ಇನ್ನೂ ಹೆಚ್ಚಾಗುತ್ತದೆ. ಚಳವಳಿ ಮಾಡುತ್ತಿರುವ ರೈತರ ಪ್ರತಿ ಕುಟುಂಬಕ್ಕೂ ಸ್ಥಳೀಯ ಪೋಲೀಸರು ಬೆದರಿಕೆ ಹಾಕುತ್ತಿದ್ದಾರೆ ; ರೈತರನ್ನು ಚಳವಳಿಯಲ್ಲಿ ಭಾಗವಹಿಸಲು ಬಿಡಬೇಡಿ ಎಂದು ಹೇಳುತ್ತಿದ್ದಾರೆ. ನರಗುಂದ ಮತ್ತು ನವಲಗುಂದ ರೈತರಿಗೆ ಬೆಂಬಲ ಮತ್ತು ಸಹಾನುಭೂತಿಯನ್ನು ವ್ಯಕ್ತ ಮಾಡುವುದು ಬೇಡವೆ ? ಬಳ್ಳಾರಿ ರೈತ ಸಂಘದ ಅಧ್ಯಕ್ಷರಿಗೆ ಪೋಲೀಸರು ಬೆದರಿಕೆ ಹಾಕುತ್ತಿದ್ದಾರೆ ಏತಕ್ಕೆ ? ರೈತರು ಏತಕ್ಕೆ ಸಂಘಟನೆಯಾಗಬಾರದು ? ರೈತ ಸಮುದಾಯಕ್ಕೆ ಸಹಾನುಭೂತಿ ತೋರಿಸಬಾರದು ಮತ್ತು ಸರ್ಕಾರದ ಕೃತಿ ಬಗ್ಗೆ ಪ್ರತಿಭಟನೆ ಮಾಡಬಾರದೆನ್ನುವ ಭಾವನೆ ಪೋಲೀಸರಲ್ಲಿರಬೇಕೆಂದು ಸರ್ಕಾರ ಹೇಳಿದೆಯೆ ? ರೈತರ ಚಳವಳಿಯಲ್ಲಿ ಯಾವುದೇ ರಾಜಕೀಯ ಪಕ್ಷಗಳ ಪ್ರೇರಣೆ ಇಲ್ಲ. ಅವರೇ ಸ್ವಯಂಸ್ಫೂರ್ತಿಯಿಂದ ಕಳೆದ ಒಂದು ವರ್ಷದಿಂದ ಬೆಲೆ ಏರಿಕೆ ವಿರುದ್ಧ ಮತ್ತು ಅವರಿಗಾಗುತ್ತಿರುವ ಅನ್ಯಾಯದ ವಿರುದ್ಧ ಚಳವಳಿಯ ಒಂದು ಅಂಗವಾಗಿ ಅನೇಕ ನಗರಗಳಲ್ಲಿ ಬಂದ್ ಆಚರಿಸಲಾಗುತ್ತಿದೆ. ಈ ದಿವಸವೂ ರಾಜ್ಯದ ಸುಮಾರು ರಾಜ್ಯಗಳಲ್ಲಿ ಬಂದ್ ಆಚರಿಸಲು ಕರೆ ಕೊಡಲಾಗಿದೆ. ನಾಗರೀಕರಿಗೆ ಜೀವನ ನಡೆಸಲು ಸಾಧ್ಯವಾಗದ ರೀತಿಯಲ್ಲಿ ಬೆಲೆಗಳು ಏರಿಕೆಯಾದಾಗ, ಮನೆಯ ಮಕ್ಕಳಿಗೆ ಒಂದು ಮುಷ್ಟಿ ಅನ್ನ ಕೊಡುವುದಕ್ಕೆ ಕಷ್ಟವಾದಾಗ, ಬೆಲೆ ಏರಿಕೆ ವಿರುದ್ಧ ಪ್ರತಿಭಟನೆ ಮಾಡುವುದು ಸಹಜ. ಬೆಲೆ ಏರಿಕೆ ಇಡೀ ರಾಷ್ಟ್ರದ ಸಮಸ್ಯೆ ; ನಮ್ಮ ರಾಜ್ಯದಲ್ಲಿ ಏತಕ್ಕೆ ಚಳವಳಿ ಮಾಡಬೇಕೆಂದು ಕೇಳಿದರೆ, ಮತ್ತೆ ಚಳವಳಿ ಎಲ್ಲಿಂದ ಪ್ರಾರಂಭವಾಗಬೇಕು ? ಸುದೈವದಿಂದ, ಚಳವಳಿ ಮಾಡುವುದರಲ್ಲಿ ಕರ್ನಾಟಕವೇ ಮುಂದಗತಿಯಿಂದ ಸಾಗಿದೆ. ಬೆಲೆ ಏರಿಕೆ ಇಳಿಸಲು ಈ ಸರ್ಕಾರ ಯಾವುದೇ ಕ್ರಮ ತೆಗೆದುಕೊಳ್ಳುತ್ತಿಲ್ಲ. ಆಹಾರ ಮತ್ತು ನಾಗರೀಕ ಸಂಬರಾಜು ಇಲಾಖೆ ಬೇಡಿಕೆ ಮೇಲೆ ಚರ್ಚೆ ಮಾಡಿದ್ದೇವೆ ; ಪ್ರಶ್ನೆ ಕೇಳಿದ್ದೇವೆ ; ಬೆಲೆ

ಗಳನ್ನು ಹಿಡಿತದಲ್ಲಿಟ್ಟುಕೊಳ್ಳಬೇಕೆಂದು ಸಲಹೆ ಮಾಡಿದ್ದೇವೆ. ಆದರೆ, ಬೆಲೆಗಳು ಕಡಿಮೆಯಾಗಿವೆಯೆ ? ಬೆಲೆಗಳು ಕಡಿಮೆಯಾಗುವುದು ಗುಂಡಿನಿಂದಲ್ಲ. ಕಾನೂನು ಕ್ರಮಗಳಿಂದ ಬೆಲೆ ಏರಿಕೆ ತಡೆಗಟ್ಟಲು ಸರ್ಕಾರ ಯಾವ ಕ್ರಮ ತೆಗೆದುಕೊಳ್ಳುತ್ತಿಲ್ಲ. ನಾವು ಇದನ್ನು ತಿಳಿದುಕೊಳ್ಳಬೇಕಾಗಿದೆ.

ಶ್ರೀ ಜಿ. ಕೆ. ತಕ್ಕೇಡ್.—ರಾಜಕೀಯ ಕೈವಾಡವಿಲ್ಲವೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಇಲ್ಲ.

ಶ್ರೀ ಎಂ. ಚಂದ್ರಶೇಖರ್.—ರಾಜಕೀಯ ಕೈವಾಡವಿಲ್ಲವೆಂದು ಮಾನ್ಯ ಮುಖ್ಯ ಮಂತ್ರಿಗಳೇ ಹೇಳಿದ್ದಾರೆ. ಅಸ್ಸಾಂ ಮಾದರಿ ಚಳವಳಿ ಪ್ರಾರಂಭವಾಗಿದೆ ಎಂದರೆ, ಅಲ್ಲಿ ರಾಜಕೀಯ ಕೈವಾಡ ಇತ್ತೇ ಎಂದು ನೋಡಬೇಕು. ಅಲ್ಲೂ ರಾಜಕೀಯ ಕೈವಾಡವಿರಲಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಜನರು ತಮ್ಮಷ್ಟಕ್ಕೆ ತಾವೇ ಸಂಘಟಿತರಾಗಿದ್ದಾರೆ ; ಚಳವಳಿ ಮಾಡುತ್ತಿದ್ದಾರೆ ಅಲ್ಲಿ ಲೂಟಿ ನಡೆಯುತ್ತಿದೆ. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಆಲೋಚನೆ ಮಾಡಬೇಕು. ಅನೇಕ ಸಂದರ್ಭಗಳಲ್ಲಿ ಪರಾಪು ಅಂಗಡಿಗಳನ್ನು ಲೂಟಿ ಮಾಡುತ್ತಾರೆ. ಆದರೆ, ಇಲ್ಲಿ ಪರಾಪು ಅಂಗಡಿಗಳನ್ನು ಲೂಟಿ ಮಾಡುತ್ತಿದ್ದಾರೆಯೆ ? ಜೀವನಕ್ಕೆ ದಿನನಿತ್ಯ ಬೇಕಾದ ಅಗತ್ಯ ವಸ್ತುಗಳನ್ನಿಟ್ಟುಕೊಂಡು ಬಡವರ ರಕ್ತ ಹೀರುತ್ತಿರುವ ಕಾಳಸಂತೆಕೋರರ ಅಂಗಡಿಗಳನ್ನು ಲೂಟಿ ಮಾಡಿದ್ದಾರೆ.

ಶ್ರೀ ಮಹಾಜನ ಶೆಟ್ಟಿ.—ಬ್ಯಾಂಕನ್ನು ದರೋಡೆ ಮಾಡಿದ್ದಾರೆ ; ಪೆಟ್ರೋಲ್ ಬಂಕ್‌ಗಳಿಗೆ ಬೆಂಕಿ ಹಚ್ಚಲಾಗಿದೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಬ್ಯಾಂಕ್ ದರೋಡೆ ಮಾಡುವವರು ಮತ್ತು ಪೆಟ್ರೋಲ್ ಬಂಕ್‌ಗಳಿಗೆ ಬೆಂಕಿ ಹಚ್ಚುವವರು ಯಾರು ?

ಶ್ರೀ ಎಸ್. ಆರ್. ಬೊಮ್ಮಾಯಿ.—ರೈತರು ಉಪಯೋಗಿಸುವ ಡೀಸಲ್ ಬೆಲೆ ಒಂದಕ್ಕೆ ನಾಲ್ಕರಷ್ಟು ಏರಿದೆ. ಈ ವಿಚಾರವನ್ನು ನಾನು ಜಿಲ್ಲಾಧಿಕಾರಿಯವರಿಗೂ ಹೇಳಿದೆ ರೈತರು ಹತ್ತು-ಇಪ್ಪತ್ತು ಮೈಲಿಗಳಿಂದ ಟ್ರಾಕ್ಟರುಗಳನ್ನು ತೆಗೆದುಕೊಂಡು ಬಂದು ಪೆಟ್ರೋಲ್ ಬಂಕ್‌ಗಳ ಮುಂದೆ ನಿಲ್ಲಿಸಿರುತ್ತಾರೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಪೆಟ್ರೋಲ್ ಬಂಕಿನ ಸುತ್ತಮುತ್ತ ಸಾವಿರಾರು ಸಂಸಾರಗಳಿರುತ್ತವೆ. ಅಂತಹಕಡೆ ಬೆಂಕಿ ಹಚ್ಚಿದರೆ, ಅವರ ಗತಿ ಏನು ? ಅದರ ಪ್ರಜ್ಞೆ ಇದೆಯೆ ?

ಶ್ರೀ ರಮೇಶ್ ಕುಮಾರ್—ನೀವು ಹೋಗಿ, ರಕ್ಷಣೆ ಮಾಡಿ.

ಶ್ರೀ ಕೆ. ಹೆಚ್. ಹನುಮೇಗೌಡ.—ನಮ್ಮ ಜವಾಬ್ದಾರಿ ನಮಗೆ ಗೊತ್ತಿದೆ. ಮಗುವನ್ನೂ ತೂಗುತ್ತೀರಿ ; ಮತ್ತು ಚಿವುಟುತ್ತೀರಿ !

(ಗೊಂದಲ)

ಅಧ್ಯಕ್ಷರು.—ಮಾನ್ಯ ಸದಸ್ಯರೆಲ್ಲರೂ ದಯವಿಟ್ಟು ಸಮ್ಮನೆ ಕುಳಿತುಕೊಳ್ಳಬೇಕು,

ಶ್ರೀ ಬಿ. ವಿ. ಕಕ್ಕಿಲಾಯ.—ಮಾನ್ಯ ಬೊಮ್ಮಾಯಿಯವರು ಮಾತನಾಡುವಾಗ ಆ ಕಡೆಯ ಸದಸ್ಯರು ಏತಕ್ಕೆ ಮಧ್ಯೆ ಮಾತನಾಡಬೇಕು ?

ಅಧ್ಯಕ್ಷರು.—ಎಲ್ಲ ಸದಸ್ಯರೂ ಒಟ್ಟಿಗೆ ಎದ್ದು ನಿಂತು ಮಾತನಾಡುತ್ತಿದ್ದರೆ ಸಭೆ ಚೆನ್ನಾಗಿ ನಡೆಯುತ್ತದೆ ಎಂದು ಯಾರೂ ತಿಳಿದುಕೊಳ್ಳಬೇಡಿ. ಸಂಸದೀಯ ಕಾರ್ಯಕಲಾಪಗಳ ವಿಧಿ ನಿಯಮಗಳಿಗನುಸಾರವಾಗಿ ಒಬ್ಬರು ಮಾನ್ಯ ಸದಸ್ಯರು ಮಾತನಾಡುತ್ತಿರುವಾಗ ಇನ್ನೊಬ್ಬ ಸದಸ್ಯರು ಮಧ್ಯೆ ಪ್ರವೇಶ ಮಾಡಬೇಕಾಗಿ ಬಂದರೆ, ಅಧ್ಯಕ್ಷರ ಅಪ್ಪಣೆ ಪಡೆದು ಮಾತನಾಡಬೇಕಾಗುತ್ತದೆ. ನಾನು ಅನೇಕ ಸಾರಿ ಹೇಳಿದ್ದೇನೆ. ಕೂಗಾಡುವುದರಿಂದ ನಮ್ಮ ಸಮಸ್ಯೆಗಳು ಬಗೆಹರಿಯುವುದಿಲ್ಲ. ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ ವಿಷಯಗಳ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ ಆದುದರಿಂದ, ಎಲ್ಲ ಮಾನ್ಯ ಸದಸ್ಯರೂ ಈಗ ಶಾಂತಿಯುತವಾಗಿ ಮಾನ್ಯ ಸದಸ್ಯರ ಭಾಷಣವನ್ನು ಕೇಳಬೇಕೆಂದು ಕೋರುತ್ತೇನೆ.

ಶ್ರೀ ಗಟ್ಟಿ ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ಹಿಂದೆ ಅಧ್ಯಕ್ಷರಾಗಿದ್ದಂತ ಶ್ರೀಮತಿ ನಾಗರತ್ನಮ್ಮನವರು ಶಾಸಕರುಗಳು ಸಭೆಯಲ್ಲಿ ಯಾವರೀತಿ ವರ್ತಿಸಬೇಕು; ಸಮಯಕ್ಕೆ ಸರಿಯಾಗಿ ಯಾವರೀತಿ ಮಾತನಾಡಬೇಕು ಎನ್ನುವ ಬಗ್ಗೆ ಕ್ಲಾಸ್ ಇಟ್ಟುಕೊಂಡಿದ್ದರು. ತಾವು ಎರಡು ತಿಂಗಳಿಂದ ಮಾಡಲಿಲ್ಲ. ತಾವು ಕೂಡ ಶಾಸಕರುಗಳಿಗೆ ಕ್ಲಾಸ್ ಇಟ್ಟುಕೊಳ್ಳುವುದು ಒಳ್ಳೆಯದೆಂದು ತಿಳಿಸುತ್ತೇನೆ. ಶ್ರೀಮತಿ ಇಂದಿರಾಗಾಂಧಿಯವರು ಅರೆಸ್ಟ್ ಆದಾಗ ಲೂಟಿ, ಸುಲಿಗೆ ನಡೆದಾಗ ಗುಂಡುಹಾರಿಸಲಾಯಿತು. ಆಗ ಕೇಂದ್ರದಲ್ಲಿ ಜನತಾ ಸರ್ಕಾರ ಅಧಿಕಾರದಲ್ಲಿತ್ತು. ಆಗ ಕರ್ನಾಟಕದಲ್ಲಿ ದೇವರಾಜ ಅರಸು ಅವರು: ಬಸವಲಿಂಗಪ್ಪನವರು, ಆರ್.ಎಸ್. ಪಾಟೀಲರು, ಸುಬ್ಬಯ ಶೆಟ್ಟರೂ ಅಧಿಕಾರದಲ್ಲಿದ್ದರು.

ಶ್ರೀ ಎಸ್. ಆರ್. ಬೊಮ್ಮಾಯಿ.—ಗುಂಡೂರಾಯರು ಇದ್ದರು.

ಶ್ರೀ ಗಟ್ಟಿ ಚಂದ್ರಶೇಖರ್.—ಹೌದು, ಗುಂಡೂರಾಯರು ಇದ್ದರು. ಆಗಲೂ ಕೂಡ ಪೋಲೀಸಿನವರೇ ಗುಂಡು ಹಾರಿಸಿದರು. ಯಾವ ಸರ್ಕಾರ ಬಂದರೂ ಪೋಲೀಸಿನವರೇ ಗುಂಡು ಹಾರಿಸುವುದು. ಬೆಂಕಿ ಒಂದು ಬೀದಿಗೆ ಹಬ್ಬಿಕೊಂಡರೆ ಒಬ್ಬರ ಮನೆ ಹೋಗುವುದಿಲ್ಲ; ನಿಮ್ಮ ಮನೆ ನಮ್ಮ ಮನೆ ಹೋಗುತ್ತವೆ. ಇದರಲ್ಲಿ ಎಲ್ಲರ ಜವಾಬ್ದಾರಿ ಇದೆ ಎಂಬುದನ್ನು ತಿಳಿದುಕೊಳ್ಳಬೇಕು. ಜನತೆಗೆ ಒಳ್ಳೆಯ ರೀತಿಯಲ್ಲಿ ಈ ಸಭೆಯ ಮೂಲಕ ಹೇಳಿಕೆ ಕೊಡಿರಿ ಎಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ. —ನಿಮಗೆ ಹೇಳುವುದಕ್ಕೆ ಬಾಯಿ ಇಲ್ಲ.

ಶ್ರೀ ಗಟ್ಟಿ ಚಂದ್ರಶೇಖರ್.—ಬಾಯಿ ಇಲ್ಲವೆ? ಬಾಯಿ ಇದೆ; ಹೃದಯ ಇದೆ; ಅನುಕಂಪ ಇದೆ. ಬಾಯಲ್ಲಿ ಮಾತನಾಡಿದರೆ ಏನೂ ಪ್ರಯೋಜನ ಇಲ್ಲ.

ಶ್ರೀ ಕೆ. ಭಾಸ್ಕರ ನಾಯ್ಡು.—ಗುಂಡೂರಾಯರ ಸರ್ಕಾರ ಬಂದಮೇಲೆ ಬಾಯಿನೂ ಇದೆ; ಗಟ್ಟಿಯಾಗಿ ಮಾತನಾಡುವುದಕ್ಕೆ ಸಿದ್ಧರೂ ಇದ್ದೇವೆ.

ಶ್ರೀ ಎಸ್. ಆರ್ ಬೊಮ್ಮಾಯಿ.—ಹನುಮೇಗೌಡರು ರೈತರ ಬಗ್ಗೆ ರೈತರ ಚಳುವಳಿಯ ಬಗ್ಗೆ ಬೆಂಬಲ ಇದೆ. ಲೂಟಿ ಮಾಡಿರುವವರ ಬಗ್ಗೆ, ಸಮಾಜಘಾತುಕ ಶಕ್ತಿಗಳ ಬಗ್ಗೆ ನಮ್ಮ ಬೆಂಬಲ ಇಲ್ಲವೆಂದು ಹೇಳಿದರು. ನಾವು ಕೂಡ ನಿಮಗಿಂತ ಹೆಚ್ಚು ಇಲ್ಲದಿದ್ದರೂ ನಿಮ್ಮಷ್ಟೇ ಉಗ್ರವಾಗಿ ಖಂಡನೆ ಮಾಡುತ್ತೇವೆ. ಇದರ ಹಿನ್ನಲೆಯನ್ನು ಅರ್ಥ ಮಾಡಿಕೊಳ್ಳಬೇಕು ಇವತ್ತು ಜನರ ಕೋಪ ಯಾರ ಮೇಲೆ ಹೋಗಿದೆ; ಪೆಟ್ರೋಲ್ ಬಂಕ್ ಲೂಟಿ ಮಾಡಿದ್ದಾರೆ, ಪೆಟ್ರೋಲ್ ಬಂಕ್‌ನವರು ರೈತರಿಗೆ ಕೊಟ್ಟಂತ ತೊಂದರೆಯನ್ನು ಬೇರೆ ಯಾರೂ ಕೊಟ್ಟಿಲ್ಲ. ಬೆಂಕಿ ಹಾಕತಕ್ಕಂಥ ವಾತಾವರಣವನ್ನು ನಿರ್ಮಾಣ ಮಾಡಿದ್ದಾರೆ. ಬ್ಲಾಕ್ ಮಾರ್ಕೆಟ್ಸ್ ನಿರ್ಮಾಣ ಮಾಡಿದ್ದಾರೆ.

ಶ್ರೀ ಎಸ್. ಎಸ್. ಮಹಾಜನ ಶೆಟ್ಟಿ.—ಬ್ಯಾಂಕ್ ಲೂಟಿ ಮಾಡಿದ್ದಾರಲ್ಲ; ಇದರ ಬಗ್ಗೆ ಏನು ಹೇಳುತ್ತೀರಿ?

ಶ್ರೀ ಎಸ್ ಆರ್. ಬೊಮ್ಮಾಯಿ.—ಬ್ಯಾಂಕ್‌ನವರ ಮೇಲೂ ಜನ ಇವತ್ತು ಸಿಟ್ಟಿಗೆದ್ದಿದಾರೆ. ಪಟ್ಟಣದವರು ಹೋದರೆ ಚಹಾಕೊಟ್ಟು ಸಾಲಕೊಟ್ಟು ಕಳುಹಿಸುತ್ತಾರೆ. ಬಡ ರೈತರು ಹೋದರೆ ಬ್ಯಾಂಕ್ ಅಧಿಕಾರಿಗಳು ಸಾಲ ಕೊಡುವುದಿಲ್ಲ. ಆದ್ದರಿಂದ ಬ್ಯಾಂಕ್ ಅಧಿಕಾರಿಗಳ ಮೇಲೂ ಇವತ್ತು ಜನ ಕೋಪಗೊಂಡಿದ್ದಾರೆ. ಅದಕ್ಕೆ ನಾನು ಬೆಂಬಲ ಕೊಡುತ್ತೇನೆ.ಇವತ್ತು ಸಕ್ಕರೆ ಬೆಲ್ಲದ ಬೆಲೆ ಯಾವ ಮಟ್ಟದಲ್ಲಿದೆ? ಲೂಟಿಯಾಗಿರುವುದು ಎಲ್ಲಿ ? ಇವತ್ತು ಪೋಲೀಸಿನವರು ಗುಂಡು ಹಾರಿಸಿರುವುದು ಎಲ್ಲಿ ? ಪಟ್ಟಣಗಳಲ್ಲಿ ಗುಂಡು ಹಾರಿಸಿಲ್ಲ. ನರಗುಂದ ನರೇಗಲ್ಲಿನಲ್ಲಿ ಹರಿಜನರ ಕೇರಿಯಲ್ಲಿ ಗುಂಡುಹಾರಿಸಿದ್ದಾರೆ. ಮುಸಲ್ಮಾನರು ಇರತಕ್ಕ ಕೇರಿಗಳಲ್ಲಿ ಗುಂಡು ಹಾರಿಸಿದ್ದಾರೆ.

ಶ್ರೀ ವಿ.ಎ. ಮತ್ತಿಕಟ್ಟಿ.—ನರೇಗಲ್‌ನಲ್ಲಿ ಪೋಲೀಸ್ ಠಾಣೆ ಎದುರಿಗೆ ಗುಂಡು ಹಾರಿಸಿದ್ದಾರೆ.

ಶ್ರೀ ಪಿ. ಎನ್. ರೆಡ್ಡಿ.—ಹರಿಜನರು, ಮುಸಲ್ಮಾನರು ಅಂತ ಜಾತೀಯ ಹೆಸರುಗಳನ್ನು ಏತಕ್ಕೆ ಹೇಳುತ್ತೀರಿ?

ಶ್ರೀ ಎಸ್. ಆರ್. ಬೊಮ್ಮಾಯಿ.—ಇವತ್ತು ಹರಿಜನರು ಸತ್ತಿದ್ದಾರೆ;ಮುಸಲ್ಮಾನರು ಸತ್ತಿದ್ದಾರೆ ಎಂಬುದನ್ನು ತಿಳಿಯಬೇಕಾದರೆ. ನಾನು ಮುಖ್ಯಮಂತ್ರಿಗಳಿಗೆ ಸ್ಪಷ್ಟವಾಗಿ ಹೇಳಿದೆ; ಕೂಡಲೇ ನ್ಯಾಯಾಂಗ ವಿಚಾರಣೆಗೆ ಒಪ್ಪಿಕೊಳ್ಳಿ; ನಿರಪರಾಧಿ ರೈತ ಮುಖಂಡರುಗಳನ್ನು ಬಿಡುಗಡೆ ಮಾಡಿ, ರೈತರು

ತಮ್ಮ ಬೇಡಿಕೆಗಳನ್ನು ಏನು ಸರ್ಕಾರದ ಮುಂದಿಟ್ಟಿದ್ದಾರೆ. ಅದನ್ನು ಕೂಡಲೇ ಈಡೇರಿಸುವ ಪ್ರಯತ್ನ ಮಾಡಿ.

MR SPEAKER —Please convince me about the Rule you have quoted. You have to refer to a subject and it should be a definite matter of public importance. Please prove that it is a definite matter.

† ಶ್ರೀ ಎಸ್. ಆರ್. ಬೊಮ್ಮಾಯಿ.—ರಾಜ್ಯದಲ್ಲಿ ರೈತರ ಬೇಡಿಕೆಗಳ ಬಗ್ಗೆ, ಕೂಡಲೇ ಬೇರೆ ರಾಜ್ಯಗಳಲ್ಲಿ ಅಲ್ಲಿಯ ಸರ್ಕಾರಗಳು ಯಾವರೀತಿಯಲ್ಲಿ ರಿಲೀಫ್ ಕೊಟ್ಟಿದ್ದಾರೆಯೋ, ರೈತರ ಸಾಲಗಳ ಬಗ್ಗೆಯಾಗಲೀ, ಬೆಲೆ ಏರಿಕೆ ಬಗ್ಗೆಯಾಗಲೀ ದಿನನಿತ್ಯದ ಅವಶ್ಯಕ ವಸ್ತುಗಳ ಬಗ್ಗೆಯಾಗಲೀ ಇಲ್ಲಿನ ಸರ್ಕಾರ ಅಂಥ ಒಂದು ರಿಲೀಫ್ ಕೊಡತಕ್ಕಂಥ ಪ್ರಯತ್ನ ಮಾಡಿಲ್ಲ. ಇವತ್ತು ರೈತರ ಚಳುವಳಿಯನ್ನು ಪೋಲೀಸಿನ ಒಂದು ಸಹಾಯದಿಂದ ತುಳಿದು ಹತ್ತಿಕ್ಕಂಥ ಕೆಲಸ ಮಾಡುತ್ತಿರುವುದರಿಂದ ಇದರ ಒಂದು ಉಗ್ರವಾದ ಜ್ವಾಲೆ ರಾಜ್ಯದ ಎಲ್ಲಾಕಡೆ ಹರಡುತ್ತದೆ. ಇದು ಮಹತ್ವದ ವಿಚಾರವಾಗಿದೆ. ಸರ್ಕಾರದಲ್ಲಿ ಜನರಿಗೆ ವಿಶ್ವಾಸ ಬರಬೇಕಾದರೆ, ರಾಜ್ಯದಲ್ಲಿ ಶಾಂತಿ ನೆಲಸಬೇಕಾದರೆ ಜನತೆಯ ಮನೋಭಾವನೆಗಳನ್ನು ಅರ್ಥಮಾಡಿಕೊಂಡು ತಕ್ಷಣವೇ ಪರಿಹಾರವನ್ನು ಕಂಡುಹಿಡಿಯಬೇಕು. ಅದನ್ನು ಬಿಟ್ಟು ಸರ್ಕಾರ ಪ್ರತಿಷ್ಠತೆಯ ಪ್ರಶ್ನೆಯಾಗಿ ಮಾಡಿಕೊಳ್ಳುವುದರಿಂದ ಜನತೆಯ ಚಳುವಳಿಯನ್ನು ನಿಲ್ಲಿಸುವುದಕ್ಕಾಗುವುದಿಲ್ಲ. ಸರ್ಕಾರ ನ್ಯಾಯಾಂಗ ವಿಚಾರಣೆ ಮಾಡುವುದರ ಬಗ್ಗೆ ಕೂಡಲೇ ಘೋಷಿಸಬೇಕು. ರಾಜ್ಯದಲ್ಲಿ ಶಾಂತಿ ನೆಲಸಬೇಕೆನ್ನುವ ಆಸೆ ಇದ್ದರೆ ? ರೈತರು ತಮ್ಮ ೧೭ ಬೇಡಿಕೆಗಳನ್ನು ಏನು ಇಟ್ಟಿದ್ದಾರೆ ; ಎಲ್ಲಿ ಪ್ರವಾಹ ಬಂದಿದೆ ; ಎಲ್ಲಿ ಬರಗಾಲ ಬಂದಿದೆ. ಎಲ್ಲೆಲ್ಲಿ ರೈತ ಕಂಗಾಲಾಗಿದ್ದಾನೆ; ಅಂತ ಕಡೆಗಳಲ್ಲಿ ಕೂಡಲೇ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ ; ಏನೇನು ಸಹಾಯ ಮಾಡಬೇಕೋ ಅದನ್ನು ಮಾಡಬೇಕೆಂದು ಒತ್ತಾಯ ಪೂರ್ವಕವಾಗಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ನಮ್ಮ ಭಾಗದ ರೈತರು ಬೆಟರ್‌ಮೆಂಟ್ ಲೆವಿ ನೀರು ಗಂದಾಯ ಮತ್ತು ತಕಾವಿ ಇನ್ನಿತರ ಸಾಲಸೋಲ ಗಳಿಂದ ತತ್ತರಿಸಿ ಹೋಗಿದ್ದಾರೆ. ಇವತ್ತು ಸರ್ಕಾರ ಇವುಗಳಿಗೆ ಪರಿಹಾರ ಕೊಡದೇಹೋದರೆ ರೈತರ ಚಳುವಳಿ ನಿಲ್ಲುವುದಿಲ್ಲ. ಇದು ಈ ರಾಜ್ಯದ ರೈತರ; ಕೂಲಿಗಾರರ, ಬಡವರ ಹಾಗೂ ಹಿಂದುಳಿದವರ ಸಮಸ್ಯೆ ಇದು. ಸರ್ಕಾರ ಇದರ ಬಗ್ಗೆ ತೀವ್ರಕ್ರಮ ಕೈಗೊಳ್ಳುವ ವಿಷಯದಲ್ಲಿ ಇಲ್ಲಿ ಚರ್ಚೆ ಮಾಡಬೇಕಾಗಿದೆ. ಇವತ್ತು ರೈತ ಬೆಳೆದಂತ ಪದಾರ್ಥಗಳಿಗೆ ಬೆಲೆ ಇಲ್ಲದೆ ರೈತ ಕಂಗಾಲಾಗಿದ್ದಾನೆ. ಸಪೋರ್ಟ್ ಬೆಲೆ ಕೂಡ ಆತನಿಗೆ ಸಿಗುತ್ತಿಲ್ಲ. ಮಧ್ಯವರ್ತಿ ವ್ಯಾಪಾರಿಗಳು ಆಹಾರ ಪದಾರ್ಥಗಳನ್ನು ಶೇಖರಿಸಿಕೊಂಡು ಳ ಪಟ್ಟು ಹೆಚ್ಚಿನ ಲಾಭಕ್ಕೆ ಗ್ರಾಹಕರಿಗೆ ಮಾರಾಟ ಮಾಡುತ್ತಿದ್ದಾರೆ.

SRI V. V. PATTAR.—Sir, I rise to a point of order. Now, the motion is under rule 50. It is subject to certain clauses under Rule 52 of the Rules of Procedure. I am opposing this move on two grounds. One is that this matter is already discussed in this House previously. Secondly, the matter which is anticipated by this motion can be taken up immediately in the general discussion on the subject which is before us Demands. In this connection, I wish to read two clauses under Rule 52 namely clause No. (v) and (vi):

'(v) the motion shall not revive discussion on a matter which has been discussed in the same session.

12-30 P. M.

(vi) the motion shall not anticipate a matter which has previously appointed for consideration. In determining whether a discussion is out of order on the ground of anticipation, regard shall be had by the Speaker to the probability

of the matter anticipated being brough before the Assembly within a reasonable time."

So, Sir the demand regarding the Police, law and order General Administration is just now going on before the House. So, this matter can be taken up in that. The Oppos tion can talk about all these matters in the general discussion. This is one thing. The second thing is the matter regarding the problem of the ryots having already been discussed and certain reliefs are given, the matter cannot be taken under Rule 50 of the Rules of Procedure.

ಶ್ರೀ ಬಿ. ವಿ. ಕಕ್ಕಿಲಾಯ.—ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಪತ್ತಾರ್ ಅವರು ಏನು ಕ್ರಿಯಾಲೋಪ ಎತ್ತಿದ್ದಾರೆ ಅದು ಸಾಧುವಾದದು ಅಲ್ಲ. ಈಗ ಮಾನ್ಯ ಸದಸ್ಯರಾದ ಬೊಮ್ಮಾಯಿಯವರು ಪ್ರತೇಕವಾದ ಸಮಸ್ಯೆಯ ಬಗ್ಗೆ ಹೇಳುತ್ತಿದ್ದಾರೆ. ಈಗ ಗಂಗಾವತಿಯಲ್ಲಿ ಏನು ನಡೆದಿದೆ ಅಂತ ಹೇಳುತಿದ್ದಾರೆ. ಇದರ ಬಗ್ಗೆ ಮೊನ್ನೆ ಚರ್ಚೆ ಮಾಡಿಲ್ಲ. ಆವರ ಭಾ ವಾದ ಗಂಗಾವತಿಯಲ್ಲಿ ಬೆಲೆ ಏರಿಕೆಯ ವಿರುದ್ಧ ಏನ ಚಳುವಳಿ ನಡೆಯುತ್ತಿದೆ ಆದನ್ನು ಹೇಳುತ್ತಿದ್ದಾರೆ. ಮಾನ್ಯ ಸ್ನೇಹಿತರು ಡಿಮ್ಯಾಂಡ್ ಮೇಲೆ ಮಾತನಾಡುವಾಗ ಈ ವಿಚಾರ ಹೇಳಬಹುದು ಅಂತ ಹೇಳಿದರು. ಆದರಲ್ಲಿ ಈ ಪ್ರಶ್ನೆ ಬರುವುದಿಲ್ಲ. ಇದು ಪ್ರತ್ಯೇಕವಾದ ಪ್ರಶ್ನೆ. ಈಗ ಮಾನ್ಯ ಸದಸ್ಯರು ನಿಲುವಳಿ ಸೂಚನೆ ಏನು ಕೇಳಿದ್ದಾರೆ ಅದು ನಮ್ಮ ರೂಲ್ಸ್‌ಗೆ ಅನುಕೂಲವಾಗುತ್ತದೆ. ಅವಕ್ಕೆ ಅನುಮತಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

SRI V. V. PATTAR.—I request for a ruling.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರಾದ ಪತ್ತಾರ್ ಅವರು ಹಿಂದೆಯೇ ನಾವು ಸೂಲ್ ೫೫ ರ ಕೆಳಗೆ ಚರ್ಚೆ ಮಾಡಿದ್ದೇವೆ ಅಂತ ಹೇಳಿದ್ದಾರೆ. ಆದು ಆದಮೇಲೆ ಅನೇಕ ಘಟನೆಗಳು ನಡೆದಿವೆ. ರಾಜ್ಯದ ಜನತೆಗೆ ಸಂಬಂಧಪಟ್ಟ ಹಾಗೆ ಹೊಸ ಹೊಸ ವಿಚಾರಗಳು ಇವೆ. It is a matter of great public importance. I would like to know from the Member. ಇದಕ್ಕಿಂತಲೂ ಮಹತ್ವವಾದ ವಿಚಾರ ಏನಾದರೂ ಇದೆಯೇ ? ಇವೊತ್ತು ಮಾನ್ಯ ಸದಸ್ಯರು ಜಮಖಂಡಿಗೆ ಹೋದರೆ ಗೊತ್ತಾಗುತ್ತದೆ. ಮಾನ್ಯ ಸದಸ್ಯರು ಬೆಂಗಳೂರಿನಲ್ಲಿ ಕುಳಿತು ಕೊಂಡಿರುವುದರಿಂದ ವಿಚಾರ ಗೊತ್ತಾಗುತ್ತಿಲ್ಲ. ಅನೇಕ ಮಹತ್ವವಾದ ವಿಚಾರಗಳನ್ನು ಹೇಳಬೇಕಾಗಿದೆ.

ಶ್ರೀ ಮೈಕೇಲ್ ಫರ್ನಾಂಡೀಸ್.— ಅಧ್ಯಕ್ಷರೆ. ಮಾನ್ಯ ಸದಸ್ಯರು ಹೇಳುವುದನ್ನು ಕೇಳಿದರೆ ನಾವು ಚರ್ಚೆ ಮಾಡಲಿಕ್ಕೆ ಆಗುವುದಿಲ್ಲ. ಇನ್ನು ಡಿಬೇಟ್ ಮೇಲೆ ಮಾತನಾಡಬಹುದು ಅಂತ ಹೇಳಿದ್ದಾರೆ. ಅನಂತರ ಡಿಬೇಟ್ ಮೇಲೆ ಮಾತನಾಡುವಾಗಲೂ ಇವರು ಪಾಯಿಂಟ್ ಆಫ್ ಆರ್ಡರ್ ಹೇಳಬಹುದು.

SRI V. V. PATTAR.—I press for the ruling on my point of order.

SPEAKER.—It is his right. Why do you come in his way ?

SRI V. V. PATTAR.—This is regarding motion under Rule 50.

MR. SPEAKER.—I have not given my ruling as to whether to give the consent or not about the adjournment motion on the notice by Sri S. R. Bommai. He is submitting preliminary facts for consideration of the Chair.

SRI V. V. PATTAR.—Even that is not allowed.

MR. SPEAKER.—Covering all the points I will give my ruling.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೇ, ಇವೊತ್ತಿನ ದಿವಸ ಸುಮಾರು ಅರ್ಧ ರಾಜ್ಯದಲ್ಲಿ ಸೆಕ್ಷನ್ ೧೪೪ ಇದೆ. ರಾಜ್ಯದಲ್ಲಿ ಇವೊತ್ತಿನ ದಿವಸ ಜನರು ತಮ್ಮ ನಾಗರೀಕ ಜೀವನವನ್ನು ನಡೆಸುತ್ತಿಲ್ಲ, ನಡೆಸಲಿಕ್ಕೆ ಸಾಧ್ಯವಾಗಿಲ್ಲ. ಆ ಒಂದು ವಾತಾವರಣ ಉಂಟಾಗಿದೆ. ಇವೊತ್ತು ಅನೇಕ ಕಡೆಗಳಲ್ಲಿ ಗೋಲಿಬಾರ್ ಆಗುತ್ತಿದೆ. ಸರ್ಕಾರ ಸೆಕ್ಷನ್ ೧೪೪, ೩೫ ಪೋಲೀಸ್ ಆ್ಯಕ್ಟ್ ಕೆಳಗೆ ನಿಷೇದಾಜ್ಞೆ ಹೊರಡಿಸ್ಸಿದೆ. ಇವೊತ್ತು ಅನೇಕ ಕಡೆ ಬಂದ್‌ಗಳು ಆಗುತ್ತಿರುವಾಗ ಈ ವಿಚಾರ ಚರ್ಚೆ ಮಾಡುವುದು ಬೇಡವೆ ? ಇವೊತ್ತು ಸರ್ಕಾರ ತಕ್ಕ ಕ್ರಮ ಕೈಗೊಳ್ಳದೇ ಹೋದರೆ ಮುಖ್ಯ ಮಂತ್ರಿಗಳಿಗೆ ರಕ್ಷಣೆ ಕೊಡುತ್ತೇವೆ ಅಂತ ಪೋಲೀಸರು ಇದೇ ರೀತಿ ಹೋದರೆ. ಇದೇ ರೀತಿ ಅಶಾಂತಿ ಹಬುತ್ತಾ ಹೋದರೆ, ಕೊನೆಗೆ ಪೋಲೀಸರ ಕೃತ್ಯದಿಂದಲೇ ನಿಮ್ಮ ಸರ್ಕಾರಕ್ಕೆ ದಕ್ಕೆ ಬರುತ್ತದೆ ಅಂತ ಈ ಸಂದರ್ಭದಲ್ಲಿ ಸರ್ಕಾರಕ್ಕೆ ಎಚ್ಚರಿಕೆ ಕೊಡುತ್ತೇನೆ. ತಾವು ಇವೊತ್ತು ಪೋಲೀಸರಿಗೆ ಕಂಡಲ್ಲಿ ಗುಂಡು ಹಾರಿಸಲು ನಿಮಗೆ ಏನು ಅವಕಾಶ ಇದೆಯೋ ಅದನ್ನು ಉಪಯೋಗಿಸಿ ಕ್ರಮ ಕೈಗೊಳ್ಳಿ ಅಂತ ಹೇಳಬಹುದು, ಮೊನ್ನೆ ದಿವಸ ಮಾನ್ಯ ಮುಖ್ಯ ಮಂತ್ರಿಗಳು ವಿರೋಧ ಪಕ್ಷದ ನಾಯಕರಾದ ದೇವರಾಜ ಅರಸ್ ಅವರ ಭಾಷಣವನ್ನು ಉದ್ಧರಿಸಿ ಹೇಳಿದರು. Even the Chief Minister has no right to interfere with the police functioning. ಮಾನ್ಯ ಸದಸ್ಯರಾದ ಭಾಸ್ಕರ್ ನಾಯ್ಡು ಅವರು, ಮಾನ್ಯ ಗಟ್ಟಿ ಚಂದ್ರಶೇಖರ್ ಅವರು ಡಿಸೆಂಬರ್ ತಿಂಗಳಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರ ಬಂಧನವಾದಾಗ ನಡೆದ ವಿಚಾರ ಹೇಳಿದರು. ಅವರೇ ಹೇಳಿರಬಹುದು, ನಾನು ಆಗಲೂ ಕೂಡ ಇದೇ ಸ್ಥಾನದಲ್ಲಿ ನಿಂತುಕೊಂಡು ಇದೇ ಮಾತನ್ನು ಹೇಳಿದ್ದೆ. ಸರ್ಕಾರ ಯೋಗ್ಯವಾದ ಕ್ರಮಗಳನ್ನು ಕೈಗೊಳ್ಳದೇ ಹೋದರೆ ದಂಗೆಗಳು ಆಗುತ್ತವೆ ಎಂದು ಹೇಳಿದ್ದೇನೆ.

ಶ್ರೀ ಗಟ್ಟಿ ಚಂದ್ರಶೇಖರ್.—ತಾವು ಅದೇ ಸ್ಥಾನದಲ್ಲಿ ಇದ್ದೀದಿರಾ, ಈ ಸ್ಥಾನವಲ್ಲಿ ಇದ್ದರೆ ಆ ತರಹ ಹೇಳುತ್ತಿರಲಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇವೊತ್ತು ಮಾನ್ಯ ದೇವರಾಜ್ ಅರಸ್ ಅವರೇ ಹೇಳಲಿ, ಮಾನ್ಯ ಗುಂಡೂರಾವ್ ಅವರೇ ಹೇಳಲಿ. ಅದು ಜನರು ಒಪ್ಪತಕ್ಕಂತಾದಾಗಿರಬೇಕು. ಇವೊತ್ತು ಪೋಲೀಸರಿಗೆ ಅಧಿಕಾರ ಕೊಡುವುದಾದರೆ, ಪ್ರಜಾಪ್ರಭುತ್ವ ಏತಕ್ಕೆ ಬೇಕು, ಗುಂಡೂರಾವ್ ಏತಕ್ಕೆ ಬೇಕು, ಮಂತ್ರಿಮಂಡಲ ಏತಕ್ಕೆ ಬೇಕು, ಮಂತ್ರಿಗಳು ಏತಕ್ಕೆ ಬೇಕು. ಹೋಮ್ ಕಮಿಷನರ್ ಇರುತ್ತಾರೆ ಅವರೇ ನೋಡಿಕೊಳ್ಳುತ್ತಾರೆ. ಇವೊತ್ತು ರಾಜಕೀಯವಾಗಿ ನಿರ್ಣಯ ತೆಗೆದ ಕೊಳ್ಳಬೇಕಾಗುತ್ತದೆ. ಇವೊತ್ತು ಮಾನ್ಯ ಮುಖ್ಯಮಂತ್ರಿಗಳು ಮೂರು ಕೋಟಿ ಜನರ ಸಂರಕ್ಷಣೆ ಮಾಡತಕ್ಕ ಜವಾಬ್ದಾರಿಯನ್ನು ಹೊತ್ತಿರುವುದರಿಂದ ಸರಿಯಾಗಿ ನಿಗಾ ವಹಿಸದೇ ಹೋದರೆ ಅಧಿಕಾರದಲ್ಲಿ ಮುಂದುವರೆಯುವುದಾಗಲಿ ಅಧಿಕಾರದಿಂದ ಹೊರ ಬರುವುದಾಗಲಿ ಆ ಪ್ರಶ್ನೆ ಉದ್ಭವವಾಗುತ್ತದೆ. ಆದ್ದರಿಂದ ತಾವು ಅಧಿಕಾರದಲ್ಲಿದ್ದಾಗ ಜನತೆಗೆ ಸಂರಕ್ಷಣೆ ಸಿಕ್ಕಲಿಲ್ಲ ಅಂತ ಆಗಬಾರದು, ಸತ್ಯವಂತರಾಗಿ ನಡೆದರು ಅಂತ ಹೆಸರು ತೆಗೆದುಕೊಳ್ಳಿ ಇದು ಅಲ್ಪ ಕಾಲದ ವಿಚಾರ. ತಾವು ಇವೊತ್ತಿನ ದಿವಸ ಪ್ರತಿಷ್ಠೆಗೆ ಬೀಳದೆ ಇರಬೇಕಾಗುತ್ತದೆ. ತಮಗೆ ಅಧಿಕಾರಿಗಳ ಬುದ್ಧಿವಾದ ಇರಬಹುದು ಅಧಿಕಾರಿಗಳದೇ ಒಂದು ದೃಷ್ಟಿ ಇರುತ್ತದೆ. ಜನಗಳದೇ ಒಂದು ದೃಷ್ಟಿ ಇರುತ್ತದೆ. ಆದ್ದರಿಂದ ಇದರ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ಇವೊತ್ತು ಅಶಾಂತಿ ಎಲ್ಲ ಕಡೆ ಆಗಬಾರದು. ರಾಜ್ಯದಲ್ಲಿ ಎಲ್ಲ ಕಡೆ ಶಾಂತಿ ನೆಲೆಸಬೇಕಾದರೆ ನ್ಯಾಯಾಂಗ ವಿಚಾರಣೆಗೆ ತಾವು ಒಪ್ಪಬೇಕಾಗುತ್ತದೆ. ರೈತರ ಬೇಡಿಕೆಗಳನ್ನು ಮುಂದೆ ಹಾಕದೆ ಅದರ ಬಗ್ಗೆ ನಿರ್ಣಯ ತೆಗೆದುಕೊಂಡು ಸಾರಬೇಕಾಗುತ್ತದೆ. ಇವೊತ್ತು ರೈತರ ನಾಯಕರನ್ನು ತಾವು ವಿಚಾರಣೆ ಮಾಡಿ ಬಿಡುಗಡೆ ಮಾಡಲಿಕ್ಕೆ ಹೇಳಿ. ನಿಮ್ಮ ರೆಕಾರ್ಡ್ಸ್ ಪ್ರಕಾರ, ನಿಮ್ಮ ಅಧಿಕಾರಿಗಳ ಹೇಳಿಕೆ ಪ್ರಕಾರ ಬೇರೆ ಬೇರೆ ವರ್ತಮಾನ ಬರುತ್ತಾ ಇರುತ್ತದೆ. ಯಾರು ಇವೊತ್ತು ನಿರಪರಾಧಿಗಳಾಗಿದ್ದಾರೆ ಅಂತಹ ರೈತರನ್ನು ಕೂಡಲೇ ಬಿಡುಗಡೆ ಮಾಡಿ ಬೆಂಗಳೂರಿಗೆ ಕರೆಸಿಕೊಂಡು ಚರ್ಚೆ ಮಾಡಿ. ರೈತರ ನಾಯಕರನ್ನು ಚಳುವಳಿ ನಾಯಕರನ್ನು ಅಥವಾ ಬೆಲೆ ಏರಿಕೆಯ ನಾಯಕರನ್ನು ಕೂಡಲೇ ಬೆಂಗಳೂರಿಗೆ ಕರೆಸಿ ಕೊಂಡು ಅವರ ಮನೋಭಾವವನ್ನು ತಿಳಿದುಕೊಳ್ಳಿ. ಅವರಿಂದ ತಿಳಿದುಕೊಂಡನಂತರ ಪರಿಹಾರ ಕೊಡುವ ವ್ಯವಸ್ಥೆ ಮಾಡಿ. ಈಗ ಈ ಮನೆಯ ಒಂದು ಸಮಿತಿ ಮಾಡಿ ರೈತರ ಪ್ರತಿನಿಧಿಗಳನ್ನು ಕರೆಸಿ ಮಾತನಾಡತಕ್ಕದ್ದು ಬೇಡ. ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಈ ರೈತ ಮುಖಂಡರು

ಗಳನ್ನು ಬಿಡುಗಡೆ ಮಾಡಿ ಬೆಂಗಳೂರು ನಗರಕ್ಕೆ ಕರೆಸಿಕೊಳ್ಳಿ, ಅವರು ಜೊತೆಯಲ್ಲಿ ಮಾತನಾಡಿ, ಅವರ ಬೇಡಿಕೆಗಳ ಬಗ್ಗೆ ಆಲೋಚನೆ ಮಾಡಿ ನಿರ್ಣಯ ತೆಗೆದು ಕೊಳ್ಳಿ. ಇದನ್ನು ಮಾಡದೆ ವಿರೋಧ ಪಕ್ಷದವರು ಹೇಳುತ್ತಿದ್ದಾರೆ, ಇದು ಪ್ರತಿಷ್ಠೆ ಪ್ರಶ್ನೆ ಇದೆ, ರಾಜಕೀಯ ಇದೆ, ಚಳುವಳಿ ಲಾಭ ತೆಗೆದುಕೊಳ್ಳಲಿಕ್ಕೆ ಹೊರಟ್ಟಿದ್ದಾರೆ. ಅಂತ ಹೇಳಿದರು. ಇದಕ್ಕೆ ಪರಿಹಾರ ಏನೆಂದರೆ ಸೂಕ್ತ ಕ್ರಮ ತೆಗೆದುಕೊಳ್ಳದಿದ್ದರೆ ನಾನು ಮೊನ್ನೆಯೇ ಹೇಳಿದ್ದೇನೆ, ಇವತ್ತೂ ಹೇಳುತ್ತಿದ್ದೇನೆ, ಸಧ್ಯಕ್ಕೆ ಈ ರೈತರ ಚಳುವಳಿ ನಿಲ್ಲುವುದಿಲ್ಲ. ಕೂಲಿಕಾರರ ಚಳುವಳಿ ನಿಲ್ಲುವುದಿಲ್ಲ.

SRI H. SIVAPPA.—Sir, I raise to a point of order. Hon. Member Sri Bommai is generalising the issue. He is not confining himself to the motion that is before us. We are unable to understand the scope of the issue. The Hon. Member is reviewing the whole issue which has already been discussed here threadbare the day before yesterday. So, if he wants to say something it must be a specific issue which the Chair has already observed

ಶ್ರೀ ಎಸ್. ಆರ್ ಬೊಮ್ಮಾಯಿ.—ನಾನು ನನ್ನ ಪ್ರಿಲಿಮಿನರಿ ಸಬ್‌ಮಿಷನನ್ನು ಮುಗಿಸುತ್ತಿದ್ದೇನೆ. ಇವತ್ತು ಈ ಕೆಲವು ವಿಚಾರಗಳನ್ನು ಸರ್ಕಾರ ಏನು ಮಾಡಬೇಕೆನ್ನುವುದರ ಬಗ್ಗೆ ನಾನು ಹೇಳಿದ್ದೇನ.

MR. SPEAKER.—There cannot be an adjournment motion on law and order problem. That apart, the ryots' grievances have already been seized by the Government.

ಶ್ರೀ ಎಸ್. ಆರ್. ಬೊಮ್ಮಾಯಿ.—ಲಾ ಅಂಡ್ ಆರ್ಡರ್ ಇಲ್ಲ. ಪೋಲಿಸಿನವರ ಫೈರಿಂಗ್ಸ್‌ನಿಂದ ಸಾವುಗಳಾಗಿವೆ ಗೋಲಿಬಾರ್‌ಗಳಾಗಿವೆ. ಈಗ ಅಲ್ಲಿ ಸೆಕ್ಷನ್ ಗಳನ್ನು ಜಾರಿ ಮಾಡಿದ್ದಾರೆ. ಇದರಿಂದಾಗಿ ಇಡೀ ರಾಜ್ಯದಲ್ಲೇ ಅಸಮಾಧಾನಕರವಾದ ಪರಿಸ್ಥಿತಿ ನಿರ್ಮಾಣವಾಗಿದೆ. ಅದನ್ನು ತಮ್ಮ ಮುಂದಿಟ್ಟಿದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುತ್ತಾ ಒಂದೆರಡು ಮಾತುಗಳನ್ನು ಹೇಳಿದ್ದಾರೆ. ಗಲಭೆ ನಡೆದಂತಹ ಸ್ಥಳಕ್ಕೆ ಭೇಟಿ ಕೊಟ್ಟಂತಹ ಪ್ರಥಮ ಮುಖ್ಯ ಮಂತ್ರಿ, ಅಂತ ಹೇಳಿದ್ದಾರೆ. ಅವರು ಹೋಗಿದ್ದಾರೆ ನಾನೂ ಒಪ್ಪಿಕೊಳ್ಳುತ್ತಿದ್ದೇನೆ. ಅದಕ್ಕಾಗಿ ಅಭಿನಂದನೆಗಳನ್ನು ಸಲ್ಲಿಸಲಿಲ್ಲವಲ್ಲ ಎಂಬುದಾಗಿ ಹೇಳಿದರು. ನಾನು ಅಭಿನಂದನೆಗಳನ್ನು ಸಲ್ಲಿಸಬೇಕೆಂದಿದ್ದೆ. ಆದರೆ ಏಕೆ ಸಲ್ಲಿಸಲಿಲ್ಲ ಎಂದರೆ ತಾವು ಅಲ್ಲಿಗೆ ಭೇಟಿಕೊಟ್ಟಂತಹ ಕಾಲದಲ್ಲಿ ಜನರ ಪ್ರತಿನಿಧಿಗಳನ್ನು ಭೇಟಿಮಾಡಲಿಲ್ಲ. ಮುಖ್ಯ ಮಂತ್ರಿಗಳಿಗೆ ಹೇಳಬಯಸುತ್ತಿದ್ದೇನೆ, ರೈತರಿಗೆ ಗುಂಡಿಟ್ಟು ಕೊಂದಿರತಕ್ಕಂತಹದ್ದು ಕೂಡ ಈ ರಾಜ್ಯದಲ್ಲಿ ಪ್ರಥಮ. ಇದನ್ನೂ ಕೂಡ ತಾವು ಆಲೋಚನೆ ಮಾಡಬೇಕು. ಸರ್ಕಾರ ಆ ರೈತರ ಯೋಗ್ಯವಾದ ಬೇಡಿಕೆಗಳ ಬಗ್ಗೆ ಕೂಡಲೆ ನಿರ್ಣಯ ತೆಗೆದುಕೊಂಡು ಈ ಬಗ್ಗೆ ತೀವ್ರ ಕ್ರಮ ಕೈಗೊಳ್ಳದಿದ್ದರೆ ರೈತರ ಚಳುವಳಿ ನಿಲ್ಲುವುದಿಲ್ಲ. ರೈತರ ಚಳುವಳಿ ಶಾಂತಿಯುತವಾಗಿ, ಅಹಿಂಸಾತ್ಮಕ ಮಾರ್ಗದಿಂದ ಎಲ್ಲ ಕಡೆಗೂ ಹರಡುತ್ತದೆ. ರೈತರು ಆಗಲಿ, ಕೂಲಿಕಾರರಾಗಲಿ ತಮ್ಮ ಬೇಡಿಕಗಳ ಬಗ್ಗೆ ತಮ್ಮ ಆಗು ಹೋಗುಗಳ ಬಗ್ಗೆ ಶಾಂತ ರೀತಿಯಿಂದ ಮಾಡತಕ್ಕಂತಹ ಚಳುವಳಿಯನ್ನು ಯಾವುದೇ ರೀತಿಯ ಬೆದರಿಕೆಗೆ ಅಂಜದೆ ಮುಂದುವರಿಸಿಕೊಂಡು ಹೋಗಬೇಕು. ಹೆದರಬೇಕಾದುದಿಲ್ಲ, ಮಂಡ್ಯ, ಬಳ್ಳಾರಿ, ಶಿವಮೊಗ್ಗ, ಬೆಳಗಾಂನಲ್ಲೂ ರೈತರು ಸಭೆಗಳಿಗೆ ಕರೆಕೊಟ್ಟಿದ್ದಾರೆ. ಇದನ್ನು ನಾನು ರಾಜಕೀಯ ದೃಷ್ಟಿಯಿಂದ ಹೇಳುತ್ತಿಲ್ಲ. ರೈತರು ಸಂಘಟನೆಯಾಗಿ ತಮ್ಮ ಕಷ್ಟನಷ್ಟಗಳನ್ನು ಸರ್ಕಾರದ ಮುಂದಿಡುವಂತಹ ಒಂದು ಕ್ರಮವನ್ನು ಕೈಗೊಂಡಿದ್ದಾರೆ ಅದಕ್ಕೆ ನಾವುಗಳೆಲ್ಲರೂ ಬೆಂಬಲ ಕೊಡಬೇಕಾಗುತ್ತದೆ. ಇವತ್ತು ಬೆಲೆ ಏರಿಕೆಯ ಬಗ್ಗೆಯೂ ಚಳುವಳಿ ಮಾಡುತ್ತಿದ್ದಾರೆ. ಇವತ್ತು ಬೆಲೆ ಏನಾಗಿದೆ ಎಂಬುದು ಎಲ್ಲರಿಗೂ ಗೊತ್ತಿದೆ. ಇದರ ಹಿನ್ನೆಲೆ ಏನು ಎಂಬುದನ್ನು ಅರ್ಥಮಾಡಿಕೊಂಡು ಅದರ ಬಗ್ಗೆ ಕ್ರಮ ಕೈಗೊಳ್ಳಬೇಕು. ಅವಶ್ಯಕ ಜೀವನಾವಶ್ಯಕ ವಸ್ತುಗಳು ಯೋಗ್ಯ ಬೆಲೆಗೆ ಸಿಗತಕ್ಕಂತಹ ವ್ಯವಸ್ಥೆ ಮಾಡಿದರೆ ಇದಕ್ಕೆ ಪರಿಹಾರ ಆದೀತು. ಅದನ್ನು ಯಾವ ರೀತಿ ಮಾಡಬೇಕೆಂಬುದನ್ನು ಹೇಳಬೇಕು. ಇದರ ಜೊತೆಗೆ ಒಂದು ಸಣ್ಣ ವಿಚಾರವನ್ನು ಹೇಳಬೇಕಾಗುತ್ತದೆ. ಮೊನ್ನೆ ದಿವಸ ಕೂಡ ಮಾನ್ಯ ಮುಖ್ಯ

ಮಂತ್ರಿಗಳು ಮಾತನಾಡಿದ ಮೇಲೆ ಕೆಲವು ವಿಚಾರಗಳನ್ನು ಅಲ್ಲೂ ಕೂಡ ಹೇಳಿದ್ದೆ. ಶಾಂತಿಯನ್ನು ಪರಿಪಾಲನೆ ಮಾಡುವುದರಲ್ಲಿ ಮುಖ್ಯ ಮಂತ್ರಿಗಳು ಜನತೆಗೆ ಮನವಿ ಮಾಡಿಕೊಂಡರು. ನಾನು ಕೂಡ ಕೇಳಿಕೊಂಡೆ. ಶಾಂತಿಯುತವಾದ ಚಳುವಳಿ ನಡೆಯಬೇಕು. ಯಾರೂ ಅದನ್ನು ಹತ್ತಿಕ್ಕಬಾರದು, ಶಾಂತಿಯುತವಾಗಿ ಚಳುವಳಿಯನ್ನು ಮುಂದುವರಿಸಿಕೊಂಡು ಹೋಗಬೇಕೆಂಬ ಮಾತನ್ನೂ ಹೇಳಿದ್ದೆ. ನನ್ನ ಭಾಷಣವೂ ರಿಪೋರ್ಟ್ ಆಗಿದೆ. ನಾನು ಹೇಳಿದ ವಿಚಾರಗಳನ್ನು ಬಿಟ್ಟು ವರದಿಯಾಗಿದೆ. "Mr. S.R. Bommai joined Chief Minister in appealing to the farmers to withdraw their agitation in view of the specific assurance given by he Government. Mr. Bommai promised full co-operation from the tOpposition in restoring law and order". ಶಾಂತಿ ಪರಿಪಾಲನೆ ಮಾಡುವುದಕ್ಕಾಗಿ ವಿರೋಧ ಪಕ್ಷದವರು ಸಂಪೂರ್ಣವಾಗಿ ಸಹಕಾರ ಕೊಡುತ್ತೇವೆ ಅಂತ ಹೇಳಿದರೆ ಹೊರತು ರೈತರು ತಮ್ಮ ಚಳುವಳಿಯನ್ನು ನಿಲ್ಲಿಸಬೇಕೆಂಬ ಮಾತನ್ನು ನಾನು ಹೇಳಲಿಲ್ಲ. ರೈತರು ನ್ಯಾಯ ಸಮ್ಮತವಾದ ೨೪ ಬೇಡಿಕೆಗಳನ್ನು ಏನು ಇಟ್ಟಿದ್ದಾರೆ ಅದನ್ನು ಸರ್ಕಾರ ಒಪ್ಪುವವರೆಗೂ, ಶಾಂತಿಯುತವಾಗಿ ಚಳುವಳಿಯನ್ನು ಮುಂದುವರಿಸಬೇಕೆಂಬ ಮಾತನ್ನು ಹೇಳಿದ್ದೇನೆ. ಇವತ್ತು ನಮ್ಮ ರೈತರು ನನಗೆ ಟೆಲಿಗ್ರಾಂ ಕೊಟ್ಟಿದ್ದಾರೆ. ನಮ್ಮ ಬೇಡಿಕೆಯ ಬಗ್ಗೆ ತಾವು ಏನನ್ನೂ ವಿಧಾನಸಭೆಯಲ್ಲಿ ಸರ್ಕಾರವನ್ನು ಕೇಳದೇ ಚಳುವಳಿಯನ್ನು ನಿಲ್ಲಿಸಿಬಿಡಿ ಎಂಬುದಾಗಿ ಕರೆಕೊಟ್ಟಿದ್ದೀರಾ ಎಂಬುದಾಗಿ ಕೇಳಿದ್ದಾರೆ. ನಾನು ಪತ್ರಿಕೆಯವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ನಾವು ಮಾತನಾಡಿದ್ದನ್ನು ಪತ್ರಿಕೆಯಲ್ಲಿ ಹಾಕದಿದ್ದರೂ ಒಳ್ಳೆಯದು, ಹಾಕುವುದಾದರೆ ಸರಿಯಾದ ರೀತಿಯಲ್ಲಿ ಹಾಕಿ. ಅದನ್ನು ಬಿಟ್ಟು ಅಪಾರ್ಥವಾಗುವ ರೀತಿಯಲ್ಲಿ ಹಾಕಿ ಒಬ್ಬ ವ್ಯಕ್ತಿಗೆ ಈ ರೀತಿಯಾಗಿ ರಾಜಕೀಯ ಚರಿತ್ರೆಯಲ್ಲಿ ವಧೆ ಮಾಡತಕ್ಕಂತಹ ರೀತಿಯಲ್ಲಿ ಹಾಕುವುದರಿಂದ ಯಾರಿಗೂ ಸಮಾಧಾನವಾಗುವುದಿಲ್ಲ. ನಾನು ಎಷ್ಟು ಜವಾಬ್ದಾರಿಯಿಂದ ಹೇಳಿದ್ದೇನೆಂದರೆ ಸರ್ಕಾರ ಎಲ್ಲಿಯವರೆಗೆ ನ್ಯಾಯಾಂಗ ವಿಚಾರಣೆಗೆ ಒಪ್ಪುವುದಿಲ್ಲವೋ ಅಲ್ಲಿಯವರಿಗೂ ಈ ಚಳುವಳಿ ಮುಂದುವರಿದುಕೊಂಡು ಹೋಗುತ್ತದೆ. ತಾವು ನ್ಯಾಯಾಂಗ ವಿಚಾರಣೆಯನ್ನು ಮಾಡುವುದಕ್ಕೆ ಒಪ್ಪದಿದ್ದರೆ ಹೊರಗಡೆ ಚಳುವಳಿಯಾಗುತ್ತಿರುತ್ತದೆ. ಇಲ್ಲಿ ನಾವು ಚಳುವಳಿ ಮಾಡಬೇಕಾಗುತ್ತದೆ ಎನ್ನುವ ಮಾತನ್ನು ಹೇಳುತ್ತಿದ್ದೇನೆ.

† ಶ್ರೀ ಬಿ. ಸುಬ್ಬಯ್ಯ ಶೆಟ್ಟಿ (ಮಂಗಳೂರು).—ಮಾನ್ಯ ಸಭಾಧ್ಯಕ್ಷರೆ, ನಾವೂ ಕೂಡ ಈ ಬಗ್ಗೆ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇವೆ. ಆ ನಿಲುವಳಿ ಸೂಚನೆಯಲ್ಲಿ ಏನು ಹೇಳಿದ್ದೇವೆಂದರೆ,—

> "Whereas Government have adopted repressive measures on innocent people in this State by resorting fire and killings which is camferage/failures in this/economic State and elsewhere......"

ಈ ಒಂದು ವಾರವನ್ನು ಕಳೆಯುವುದರಲ್ಲೇ ಇಷ್ಟೊಂದು ಗಲಭೆಯಾಗಿ ರೈತರು ದುರಂತಕ್ಕೆ ಈಡಾದುದನ್ನು ನೋಡಿದರೆ ಬಹುಶಃ ಭಾರತ ದೇಶದಲ್ಲೇ ನಮ್ಮ ರಾಜ್ಯ ಪ್ರಥಮ ಸ್ಥಾನ ಪಡೆಯುತ್ತದೆಂದು ನನ್ನ ಮನಸ್ಸಿಗೆ ಕಾಣುತ್ತದೆ. ನನಗೆ ಏನು ನೆನಪಾಗುತ್ತದೆ ಅಂತ ಹೇಳಿದರೆ, ನಮ್ಮ ಸರ್ಕಾರದ ಈ ಅಚಾತುರ್ಯ, ಈ ಒಂದು ಫೈರಿಂಗ್ ಬಗ್ಗೆ ನನಗೆ ಉಗಾಂಡಾದ ಆದಿಮಿಯ ಪರಿಸ್ಥಿತಿ ನನಗೆ ಜ್ಞಾಪಕಕ್ಕೆ ಬರುತ್ತದೆ. ಉಗಾಂಡದಲ್ಲಿ ಆರ್ಥಿಕ ಪರಿಸ್ಥಿತಿ ಬಹಳಷ್ಟು ಕೆಟ್ಟು ಅಧೋಗತಿಯಲ್ಲಿದ್ದಂತಹ ಪರಿಸ್ಥಿತಿಯಲ್ಲಿ ಆ ಒಂದು ಆರ್ಥಿಕ ಪರಿಸ್ಥಿತಿಯ ಬಗ್ಗೆ ಹೋರಾಟ ಮಾಡಿದಾಗ, ಜನಗಳು ಚಳುವಳಿ ಮಾಡುವುದು ಅಗತ್ಯ ಎಂಬುದಾಗಿ ಕಂಡುಬಂದು, ಅವರು ಮುಂದೆ ಬಂದು ಚಳುವಳಿ ಮಾಡಿದಾಗ ಉಗಾಂಡದ ಆದಿಮಿಯರವರು ಏನು ಮಾಡಿದರು ? ಮಾಡಿದ ಮೇಲೆ ಅದನ್ನು ಹೇಗೆ ಸಮರ್ಥನೆ ಮಾಡಿದರು ಎಂಬುದು ಚರಿತ್ರೆಯಲ್ಲಿ ನಮಗೆ ಗೊತ್ತಾಗಿದೆ. ಅದೇ ರೀತಿ ಇಂದು ನಮ್ಮ ಕರ್ನಾಟಕದಲ್ಲೂ ಕೂಡ ನಡೆಯುತ್ತಿದೆ, ಇದು ಬಹಳ ವಿಷಾದಕರವಾದ ಸಂಗತಿ. ಮೊನ್ನೆ ನರಗುಂದದಲ್ಲಿ ಗಲಾಟೆಯಾಗಿ ರೈತರು ಸತ್ತ ವಿಷಯವನ್ನು ಕೂಡ ಈ ಸದನದಲ್ಲಿ ಚರ್ಚೆ ಮಾಡಿದಾಗ ನಾವು ಅಷ್ಟೊಂದು ಕೆಟ್ಟ ಭಾಷೆಯನ್ನು ಪ್ರಯೋಗ ಮಾಡಲಿಲ್ಲ. ಆದರೆ ಈ ದಿವಸ ಅಂತಹ ಪದಗಳನ್ನು ಪ್ರಯೋಗ ಮಾಡದೇ ವಿಧಿಯಿಲ್ಲ

ಎಂಬುದಾಗಿ ನಾನು ತಿಳಿದುಕೊಂಡಿದ್ದೇನೆ. ಇದು ನನ್ನ ಮನಸ್ಸಿಗೆ ಬಂದಿದೆ. ಈ ನಿಮ್ಮ ಸರ್ಕಾರದ ಅಸ್ತಿತ್ವ ಯಾವ ರೀತಿ ಆಯಿತು, ಯಾರಿಂದ ಆಯಿತು ಎಂದರೆ, ೧೯೮೦ನೇ ಇಸವಿಯಲ್ಲಿ ಲೋಕಸಭಾಕ್ಕೆ ಚುನಾವಣೆಯಾಯಿತು. ಆ ಚುನಾವಣೆಯಾದನಂತರ ಈ ಸರ್ಕಾರದ ಅಸ್ತಿತ್ವ ಬಂತು. ನಾವು ಸರ್ಕಾರವನು ಬಿಟ್ಟುಕೊಟ್ಟಮೇಲೆ ಈ ಸರ್ಕಾರ ಅಸ್ತಿತ್ವಕ್ಕೆ ಬಂತು. ೧೯೮೦ನೇ ಇಸವಿಯಲ್ಲಿ ಲೋಕ ಸಭಾ ಚುನಾವಣೆಯಾಯಿತು. ಹೇಗೆ ಆಯಿತು ಎಂಬುದನ್ನು ನಾವು ನೆನಪು ಮಾಡಿಕೊಳ್ಳತಕ್ಕಂತಹದ್ದು ಅಗತ್ಯ ಎಂಬುದು ನನಗನ್ನಿಸುತ್ತದೆ. ಲೋಕಸಭಾ ಚುನಾವಣೆಯಲ್ಲಿ ಜನತೆಯ ಮುಂದೆ ಓಟು ಕೇಳು ವುದಕ್ಕೆ ಏನು ಇತ್ತು ಎಂದರೆ ಜನತಾ ಸರ್ಕಾರ ಕೇಂದ್ರದಲ್ಲಿ ಆಡಳಿತವನ್ನು ನಡೆಸುತ್ತಿರುವುದರಿಂದ ಎಲ್ಲ ರಾಜ್ಯದಲ್ಲೂ ಬೆಲೆ ಏರಿಕೆಯಾಗಿದೆ. ಸಕ್ಕರೆ ಬೆಲೆ ೪-೫ ರೂ ಗಳಾಗಿವೆ. ಕೇಂದ್ರಸರ್ಕಾರದ ಮಾತನ್ನು ಯಾರೂ ಕೇಳುತ್ತಿಲ್ಲ ಎಂಬುದಾಗಿ ಹೇಳಿಕೊಂಡು ಈ ಸರ್ಕಾರ ಜನತೆಯಲ್ಲಿ ಓಟು ಕೇಳಿತ್ತು. ಸಕ್ಕರೆ ಜಾಸ್ತಿಯಾಗಿದೆ ಈರುಳ್ಳಿ ಬೆಲೆ ಜಾಸ್ತಿಯಾಗಿದೆ ಸರ್ಕಾರ ಸರಿಯಾಗಿ ನಡೆಯುತ್ತಾ ಇಲ್ಲ ಎಂದು ಎಲ್ಲಾ ಒಂದು ನೆಪ ಮಾಡಿಕೊಂಡು ಜನರನ್ನು ನಂಬಿಸಿಬಿಟ್ಟು ಓಟನ್ನು ಪಡೆದು ಈ ಸರ್ಕಾರ ಅಸ್ತಿತ್ವಕ್ಕೆ ಬಂತು. ಈ ಚಳುವಳಿ ಏತಕ್ಕೆ ನಡೆಯುತ್ತಿದೆ ಎಂದು ನಾನು ಹೇಳುತ್ತಿದ್ದೇನೆ. ಇವತ್ತು ಯಾವ ಒಂದು ಆಶ್ವಾ ಸನೆಯನ್ನು ಕೊಟ್ಟು ಈ ಒಂದು ಸರ್ಕಾರ ಬಂದಿದೆಯೋ ಆ ಆಶ್ವಾಸನೆಗಳನ್ನು ಗಾಳಿಗೆ ತೂರಿ ಇವತ್ತು ಅಧಿಕಾರದಲ್ಲಿ ಇದೆ. ಆಗ ಸಕ್ಕರೆ ಬೆಲೆ ೪-೮೦ ಪೈಸೆ ಆದಾಗ ಆಡಳಿತ ಪಕ್ಷದ ಕಾರ್ಯಕರ್ತರು ನಮಗೆ ಸಕ್ಕರೆ ಕೊಡಿ ಸ್ವಾಮಿ, ಸಕ್ಕರೆ ಕೊಡಿ ಎಂದು ಕೇಳುತ್ತಿದ್ದರು, ಅದನ್ನು ಹೇಳಿ ಓಟುಗಳಿಸಿ ಬಂದು ಈ ಸರ್ಕಾರ ೯.೦೦ ರೂಪಾಯಿ ಸಕ್ಕರೆ ಬೆಲೆ ಮಾಡಿರುವಾಗ ಜನ ಏತಕ್ಕೆ ಕೇಳಬಾರದು ? ಅವತ್ತು ೪.೮೦ ರೂಪಾಯಿಯಾದಾಗ ಕಾರ್ಯಕರ್ತರು ಕೇಳುತ್ತಿದ್ದರು. ಇವತ್ತು ಜನರು ಕೇಳುತ್ತಿದ್ದಾರೆ.

ಶ್ರೀ ಬಿ.ವಿ. ಜನಾಲಿ.—ಸಕ್ಕರೆ ಬೆಲೆ ೪.೮೦ ಆಗಿದ್ದಾಗ ತಾವು ಯಾವ ಪಕ್ಷದಲ್ಲಿ ಇದ್ದಿರಿ?

ಶ್ರೀ ಬಿ. ಸುಬ್ಬಯ್ಯಶೆಟ್ಟಿ.—ಅದು ಪ್ರತ್ಯೇಕ ಪ್ರಶ್ನೆ. ಯಾವಾಗ ಆ ಪ್ರಶ್ನೆಯನ್ನು ಕೇಳುತ್ತಾ ಇದ್ದರೋ ಆಗ ನಾನು ಆ ಪಕ್ಷದ ಸದಸ್ಯನಾಗಿರಲಿಲ್ಲ.

ಮಾನ್ಯ ಅಧ್ಯಕ್ಷರು.—ತಾವು ನೋಟಿಸ್ ಕಳುಹಿಸಿರುವುದು ಗೋಲಿಬಾರ್ ಬಗ್ಗೆ. ತಾವು ಆ ಬಗ್ಗೆ ಮಾತನಾಡಬೇಕೆಂದು ವಿನಂತಿ.

SRI B. SUBBAIAH SHETTY.—My Motion is this, it is very clear. What my Motion says is :

> "Whereas the Government have adopted repressive measure like firing in Gangavathi and elsewhere and killings in the State, of innocent people just to camouflage the economic failures."

This is my Motion. That is what I am now starting and trying to convince the Chair. ಈಗ ಅದೇ ಒಂದು ಹಿನ್ನೆಲೆಯಲ್ಲಿ ಈ ದಿನ ಎಲ್ಲಾ ಕಡೆ ಬೆಲೆ ಏರಿಕೆಯ ವಿರುದ್ಧ ಹಾಗೂ ರೈತರು ತಮ್ಮ ಕಷ್ಟಗಳನ್ನು ತೋಡಿಕೊಳ್ಳಲು ಚಳುವಳಿ ಮಾಡುತ್ತಿದ್ದಾರೆ. ಇದನ್ನು ರಾಜಕೀಯವಾಗಿ ನೋಡಬಾರದು. ಇಲ್ಲಿ ಪೋಲೀಸ್ ಪಡೆಗಳನ್ನು ಛೂಬಿಟ್ಟು ಈ ರೀತಿ ಒಂದು ಕಷ್ಟವನ್ನು ಜನರು ಅನುಭವಿಸುವ ಹಾಗೆ ಮಾಡುತ್ತಿದ್ದಾರೆಂದು ಹೇಳುವುದಕ್ಕೆ ವಿಷಾದವೆನಿಸುತ್ತದೆ. ಈ ಬಗ್ಗೆ ಮಾನ್ಯ ಮುಖ್ಯ ಮಂತ್ರಿ ಗಳು ಒಂದು ವಿಚಾರವನ್ನು ಹೇಳಿದರು. ಅಸ್ಸಾಂ ತರಹ ಇಲ್ಲೂ ಗೂಂಡಾಗಳು ಚಳುವಳಿಯಲ್ಲಿ ಸೇರಿಕೊಂಡಿದ್ದಾರೆಂದು. ಅಸ್ಸಾಂನಲ್ಲಿ ನಡೆದ ಚಳುವಳಿ ಏನು ಸ್ವಾಮಿ, ಇಲ್ಲಿ ನಡೆಯು ತ್ತಿರುವ ಚಳುವಳಿ ಏನು ಸ್ವಾಮಿ ? To divert the attention of the people this argument has been put ಗಂಗಾವತಿಯಲ್ಲಿ ನಿನ್ನೆ ೧೫ ರಿಂದ ೨೦ ಸಾವಿರದವರೆಗೆ ಜನರು ಮೆರವಣಿಗೆ ಬಂದಿದ್ದರು. ಇವರೆಲ್ಲಾ ಗೂಂಡಾಗಳೇನು ಸ್ವಾಮಿ ? ಈ ೨೦,೦೦೦ ಜನರೂ ಗೂಂಡಾ ಗಳೇ ? ಪತ್ರಿಕೆಗಳಲ್ಲಿ ಐದೋ ಹತ್ತೋ ಸಾವಿರ ಜನರಿದ್ದರೆಂದು ಬಂದಿದೆ ಆದರೆ ನಮಗೆ ತಿಳಿದ ವರದಿಯ ಪ್ರಕಾರ ಅಲ್ಲಿ ಸುಮಾರು ೨೦ ೦೦೦ ಜನರು ಮೆರವಣಿಗೆಯಲ್ಲಿ ಭಾಗವಹಿಸಿದ್ದಾರೆ.

ಶ್ರೀ ಎಸ್. ಎಸ್. ಅಗಕೇರಿ.—ಇಲ್ಲಿ ತಾವು ಸರ್ಕಾರದ ವಿರುದ್ಧ ನಿಲುವಳಿ ಸೂಚನೆಯನ್ನು ಎತ್ತಿದ್ದೀರಿ. ರೈತರು ದೇಶದ ಬೆನ್ನೆಲುಬು ಎನ್ನತಕ್ಕದ್ದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಇಲ್ಲಿ

ದೇಶದ ರೈತರ ಜೊತೆ ಸೇರಿಕೊಂಡ ಗೂಂಡಾಗಳನ್ನು ಸರ್ಕಾರ ಶಿಕ್ಷಿಸಬೇಕಾಗುತ್ತದೆ. ಆದರೆ ರೈತರ ವಿರುದ್ಧ ಸರ್ಕಾರ ಕಾನೂನು ಕ್ರಮ ತೆಗೆದುಕೊಳ್ಳುವುದಿಲ್ಲವೆಂಬುದನ್ನು ಮಾನ್ಯ ಸದಸ್ಯರು ಗಮನಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ ಸುಬ್ಬಯ್ಯಶೆಟ್ಟಿ.—ರೈತರಿಗೆ ಹೆಚ್ಚು ಬೆಲೆಯನ್ನು ಕೊಡಬೇಕು ಹಾಗೂ ಗ್ರಾಹಕರಿಗೆ ಕಡಿಮೆ ಬೆಲೆಗೆ ಒದಗಿಸಬೇಕೆಂದು ಏನು ಹೇಳಿದ್ದೀರಿ ಆ ಒಂದು ಸಿದ್ಧಾಂತವನ್ನು ನಾನು ಒಪ್ಪುತ್ತೇನೆ. ಆ ಒಂದು ಸಿದ್ಧಾಂತದಂತೆ ತಾವು ಕೆಲಸ ಮಾಡುತ್ತಿಲ್ಲವೆಂದು ಈಗ ನಾನು ಹೇಳುತ್ತಿದ್ದೇನೆ. ಇವತ್ತು ತಾವು ಅಸ್ಸಾಂ ಚಳುವಳಿಯ ಗೂಂಡಾಗಳ ಬಗ್ಗೆ ಹೇಳಿದ್ದೀರಿ.

ಅಧ್ಯಕ್ಷರು.—ಅದಕ್ಕೂ ಇದಕ್ಕೂ ಕಲ್ಪಿಸಬಾರದು.

ಶ್ರೀ ಎಸ್.ಎಸ್. ಮಹಾಜನಶೆಟ್ಟಿ —ಇಲ್ಲಿ ಅಸ್ಸಾಂನಲ್ಲಿ ನಡೆದ ಚಳುವಳಿಯನ್ನು ಪ್ರಸ್ತಾಪಿಸುತ್ತಿದ್ದಾರೆ. ನಾನು ಇಲ್ಲಿ ರೈತರು ನಡೆಸುತ್ತಿರುವ ಚಳುವಳಿಯಲ್ಲಿ ಗೂಂಡಾ ಜನರೂ ಕೂಡ ಸೇರಿಕೊಂಡಿದ್ದಾರೆಂದು ಹೇಳುತ್ತಿದ್ದೇನೆ.

ಶ್ರೀ ಬಿ. ಸುಬ್ಬಯ್ಯಶೆಟ್ಟಿ.—ಅವರ ಅಭಿಪ್ರಾಯ ಹಾಗೆ ಇರಬಹುದು. ಆದರೆ ನನ್ನ ಅಭಿಪ್ರಾಯ ಅದಲ್ಲ ಸ್ವಾಮಿ. ನಮಗೆ ಸ್ವಾತಂತ್ರ್ಯ ಬರುವುದಕ್ಕೆ ಮುಂಚೆ ಬಿಳಿ ಜನರ ಆಡಳಿತ ತೊಲಗಿ ಆ ಆಡಳಿತ ಕಂದು ಜನರ ಕೈಗೆ ಬರಬೇಕೆಂದು ಹೇಳಲಾಗುತ್ತಿತ್ತು. ಇವತ್ತು ಕರ್ನಾಟಕದಲ್ಲಿ ಆ ಬಿಳಿ ಆಡಳಿತಗಾರರನ್ನು ಹೊರಗೆ ಕಳುಹಿಸಿದ್ದು ಅವರ ಒಂದು ಆಡಳಿತವನ್ನೇ ಈ ಕಂದು ಜನರೂ ಸಹ ಮುಂದುವರಿಸುತ್ತಿದ್ದಾರೆಂಬ ಸಂಶಯ ನನಗೆ ಬರುತ್ತಿದೆ. ಇದು ನಿಜವಾಗಿಯೂ ಬಹಳ ದುರದೃಷ್ಟಕರವಾದ ಸಂಗತಿ. ಈಗ ಏನು ಆಡಳಿತ ನಡೆಯುತ್ತಿದೆ ಅದರ ಬಗ್ಗೆ ಹೇಳಬೇಕೆಂದರೆ ಸರ್ಕಾರ ವೈಫಲ್ಯವಾಗಿದೆ. ಆಡಳಿತ ಒಂದು ಮಕ್ಕಳಾಟಿಕೆಯಂತೆ ನಡೆಯುತ್ತಿದೆಯೆಂದು ಕಾಣುತ್ತಿದೆ. ಒಂದು ಸೆನ್ಸಾರ್ ಮಾಡುವಂತಹ ಪರಿಸ್ಥಿತಿಗೆ ಆಡಳಿತ ಬಂದಿದೆ ಎಂದು ತಮ್ಮ ಮುಖಾಂತರ ಸಭೆಯ ಗಮನಕ್ಕೆ ತರಬಯಸುತ್ತೇನೆ. ಆದುದರಿಂದಲೇ ಇಂತಹ ಒಂದು ಗಂಭೀರವಾದ ಪರಿಸ್ಥಿತಿ ಇಲ್ಲಿ ಬಂದಿದೆ. ಈ ಬಗ್ಗೆ ಸರ್ಕಾರ ವೈಫಲ್ಯವಾಗಿದೆ. ಈ ಬಗ್ಗೆ ನ್ಯಾಯಾಂಗ ತನಿಖೆ ಆಗಿಲ್ಲ. ಇಲ್ಲಿ ನ್ಯಾಯಾಂಗ ತನಿಖೆ ಮಾಡುವುದು ಅಗತ್ಯ ಇದೆ. ಸರ್ಕಾರ ಜನರ ಕಷ್ಟಸುಖಗಳನ್ನು ಅರಿಯಬೇಕಾಗುತ್ತದೆ. ಈ ಬಗ್ಗೆ ವಿರೋಧ ಪಕ್ಷ ಸಹಕಾರ ಕೊಡುತ್ತದೆಂದು ಹೇಳಿದ್ದು ಜನರ ಮೇಲೆ ದಬ್ಬಾಳಿಕೆ ಮಾಡುವುದಕ್ಕೆ ಸಹಕಾರ ಕೊಡುತ್ತದೆಂದು ಹೇಳಲಿಲ್ಲ. ಆದ್ದರಿಂದ ಅಧ್ಯಕ್ಷರು ಈ ಒಂದು ನಿಲುವಳಿ ಸೂಚನೆಯ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಅನುಮತಿ ಕೊಡಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತಿದ್ದೇನೆ. ಇದು ಒಂದು ಗಂಭೀರವಾದ ವಿಷಯವಾದ್ದರಿಂದ ನ್ಯಾಯಾಂಗ ತನಿಖೆಗೆ ಅನುಮತಿ ಕೊಡುವಿರೆಂದು ನಂಬಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

MR. SPEAKER.—I can understand. Two or three members may submit the facts and merits of the case, so that I can consider the matter and take a dec sion after hearing the Chief Minister.

ಶ್ರೀ ಎ.ಬಿ. ಜಕನೂರ್.—ವಿರೋಧ ಪಕ್ಷದ ಸದಸ್ಯರು ಸಭೆಯ ಮುಂದೆ ನಿಲುವಳಿ ಸೂಚನೆಯನ್ನು ತಂದಿದ್ದಾರೆ. ಅವರು ಮುಖ್ಯವಾಗಿ ಪ್ರಸ್ತಾಪ ಮಾಡುವುದೇನೆಂದರೆ ಗಂಗಾವತಿಯಲ್ಲಿ ಪೋಲೀಸ್ ಫೈರಿಂಗ್ ಹಾಗೂ ಇತರ ವಿಷಯಗಳ ಬಗ್ಗೆ So, I want to know whether lathi charge and police firing which comes under the administration of law and order, forms the subject matter of adjournment motion? ಈ ಬಗ್ಗೆ ಮಾನ್ಯ ಅಧ್ಯಕ್ಷರು ನಿಲುವು ತೆಗೆದುಕೊಳ್ಳಬೇಕಾಗುತ್ತದೆ. ಈಗಾಗಲೇ ವಿರೋಧ ಪಕ್ಷದ ಒಬ್ಬ ಸದಸ್ಯರು ೪೫ ನಿಮಿಷ ಇನ್ನೊಬ್ಬರು ೧೫ ನಿಮಿಷ ಈ ಬಗ್ಗೆ ಮಾತನಾಡಿದ್ದಾರೆ ಈ ವಿಷಯವನ್ನು ನಿಲುವಳಿ ಸೂಚನೆಯ ಕೆಳಗೆ ಪ್ರಸ್ತಾಪ ಮಾಡಬೇಕೇ ಬೇಡವೇ ಎಂಬ ಬಗ್ಗೆ ಮಾನ್ಯ ಅಧ್ಯಕ್ಷರು ತಮ್ಮ ರೂಲಿಂಗನ್ನು ಕೊಡಬೇಕಾಗುತ್ತದೆ.

† SRI NAZIR AHMED SIDDIQUI (Raichur)Sir, we insist for the adjournment motion because we have not come here to attack the Government orcriticise. But we have taken this issue as an important issue because we feel that the situation is dangerous. After the Gangavathi incident, finally it is proved beyond doubt that the situation is going from bad to worse. There is no point in trying to accuse the police force. I am sure, in the police force, at the top level, there are competent, decent and intelligent officers. They should have taken a decision to difuse the entire situation. But, this is the basic failure of the Government. It is a very serious matter. When the matter was raised, the Chief Minister was smiling. When som people went to loot a shop the firing took place, with the result 10 people died. Is it the matter to be taken so lightly? The basic question is how to difuse the situation and situation prevailing there and how to avoid further untoward incidents. Otherwise, resentment may be further created among people. The Government should understand that these are the people who are politically more close to them. I would like to draw the attention of the Hon Chief Minister that these are the people who have voted his party to power. The owe their power to these people. Now, the police is in a confusion. I cannot vouch on behalf of my friends. In Kolar they have shown considerable restraint in firing. The Inspector was also attacked. It is possible that the Government should have taken action. The police will be in greater confusion if the Government doesn't understand the problem.

MR. SPEAKER.—Your suggestion is general in nature. The question is whether the adjournment motion is to be admitted or not You can speak about the admissibility.

SRI NAZIR AHMED SIDDIQUI.—The reason is we are caught in a. vicious circle Yesterday, 3 people have died. If they let lose without controlling the situation it may result in a greater agitation and it may rebound again. This is a very serious matter. The Government has failed to understand the situation. That is why I said that there is a great danger. The entire State is in the grip of fear and the Government in its anxiety to show and create an image that we have strong Government and if they allow the situation to prolong, it will strech to unimaginable extent. Everyday, there is no sign or symptom of the situation coming under control. Mr. Speaker Sir, it is a very serious matter. The Hon. Member Sri Gatti Chandrashekar just drew the attention of the House that during Indira Gandhi's arrest, though it was organised by the administration, some goonda elements have taken undue advantage of the situation in ths entire

State. Even though the resentment of the people was genuine some goonda elements might have participated.

MR. SPEAKER.—Your suggestions are general in nature. You can speak all these things at the time of discussion on the demands of Home Affiairs.

SRI NAZIR AHMED SIDDIQUI.—Sir, there is a danger. The whole situation is moving every hour towards that direction only. Sir, if this situation is not immediately corrected, again there will be danger tonight. There are lathi-charges, firing etc., that is why I request you to permit us to move this adjournment motion. This is the first time that this type of situation has arisen in the State of Karnataka. Section 144 is being imposed in large areas. It is not an ordinary situation. Unless we find some solution, and unless we discuss here I do not think it is safe to leave this subject to the Government. People have enraged. I am afraid, they are going to commit more mistakes. Again tomorrow you may justify, because ten thousand gathered, they wanted to loot a Marwadi for a food grain shop, that is why we have fired. Therefore, I request the Government to take action immediately to difuse the situation.

† ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸಿಪುರ).—ಮಾನ್ಯ ಸಭಾಧ್ಯಕ್ಷರೇ ಈಗಾಗಲೇ ಸಭೆಯು ಮುಂದಿರತಕ್ಕಂಥ ನಿಲುವಳಿ ಸೂಚನೆ ಏನು ಇದೆ ಅದಕ್ಕೆ ತಾವು ಒಪ್ಪಿಗೆ ಕೊಡತಕ್ಕಂಥ ಹಂತದಲ್ಲಿ, ಚರ್ಚೆಗೆ ಒಪ್ಪಿಗೆ ಕೊಡುವುದಕ್ಕೆ ಮುಂಚೆ ಪೂರ್ವಭಾವಿ ಒಪ್ಪಿಗೆಗೆ ತಾವು ತಮ್ಮ ಭಾಷಣದಲ್ಲಿ ವ್ಯಕ್ತಪಡಿಸಿ ಅವಕಾಶ ಕೊಟ್ಟಿದ್ದೀರಿ. ಇಪ್ಪತ್ತೊಂದನೇ ತಾರೀಖಿನ ದಿನ ನರಗುಂದದಲ್ಲಿ ನಡೆದಂಥ ರೈತರ ಚಳುವಳಿ ಆದಮೇಲೆ ಈವತ್ತಿನದಿವಸ ಗಂಗಾವತಿಯಲ್ಲಿ ನಾಲ್ಕು ಜನರನ್ನು ಆಹುತಿ ತೆಗೆದುಕೊಂಡಿದ್ದರೆ, ಒಂದುಕಡೆ ರೈತರ ಚಳುವಳಿಯಾದರೆ ಒಂದುಕಡೆ ಬೆಲೆಗಳ ಏರಿಕೆಯಬಗ್ಗೆ ಆಸ್ಫೋಟನೆಯಾಗುತ್ತಿರುವ ಸಂದರ್ಭದಲ್ಲಿ ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ನಾನು ಸರ್ಕಾರಕ್ಕೆ ಒಂದು ಮಾತನ್ನು ವಿನಂತಿಸಿಕೊಳ್ಳುತ್ತೇನೆ ಇಲ್ಲಿ ಲಾ ಅಂಡ್ ಆರ್ಡರ್ ಬಗ್ಗೆ ಅಡ್ಜರ್ನ್‌ಮೆಂಟ್ ಮೋಷನ್ ತರುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತಿದ್ದೀರಿ. ಅಲ್ಲಿ ನಡೆದಿರತಕ್ಕ ಗೋಲಿಬಾರ್‌ನಿಂದಾಗಿ ನಾಲ್ಕು ಜನ ಸತ್ತಿರುವುದರ ಬಗ್ಗೆ ನಾವು ಚರ್ಚೆಮಾಡಬೇಕಾಗಿದೆ. ಮೊನ್ನೆ ಶನಿವಾರದ ದಿವಸ ಈ ಸದನದಲ್ಲಿ ಉತ್ತರ ಕೊಡುತ್ತಾ ನಾನು ಈ ವಿಚಾರದಲ್ಲಿ ನಿಷ್ಪಕ್ಷಪಾತವಾದ ವಿಚಾರಣೆಯನ್ನು ನಡೆಸುವಂತೆ ಆಜ್ಞೆ ಮಾಡುತ್ತೇನೆಂದು ಮಾನ್ಯ ಮುಖ್ಯ ಮಂತ್ರಿಯವರು ಹೇಳಿದ್ದಾರೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ, ನಿಷ್ಪಕ್ಷಪಾತ ವಿಚಾರಣೆ ನಡೆಸುವುದು ಎಂದರೆ ನಿಮ್ಮ ಸಿ. ಓ. ಡಿ. ಪೋಲೀಸರಿಂದಾಗಲಿ, ಅಥವಾ ಐ.ಎ.ಎಸ್. ಅಧಿಕಾರಿಗಳಿಂದಾಗಲಿ, ಅಥವಾ ಇನ್ನಾವುದೇ ಇಲಾಖೆಯ ಅಧಿಕಾರಿಗಳಿಂದಾಗಲಿ ಎಂದು ಅಲ್ಲ. ಒಬ್ಬ ನ್ಯಾಯಾಧೀಶರೊಬ್ಬರನ್ನು ನೇಮಕ ಮಾಡಿ ಅವರಿಂದ ನವಲಗುಂದ, ನರಗುಂದಗಳಲ್ಲಿ ನಡೆದಿರುವ ಘಟನೆಗಳನ್ನು ನ್ಯಾಯಾಂಗ ತನಿಖೆ ಮಾಡಿಸಬೇಕು. ಇದನ್ನು ಮಾನ್ಯ ಮುಖ್ಯ ಮಂತ್ರಿಯವರು ಈ ದಿವಸ ಈ ಸಭೆಯಲ್ಲಿ ಘೋಷಣೆ ಮಾಡಬೇಕು. ಅದರಂತೆ ಮಾನ್ಯ ಮುಖ್ಯ ಮಂತ್ರಿಯವರು ಮಾಡಿಸುತ್ತಾರೆಂದು ನಾನು ಭಾವಿಸುತ್ತೇನೆ.

ಇನ್ನು ಎರಡನೆಯದಾಗಿ, ಈ ಘಟನೆಯ ಸಂದರ್ಭದಲ್ಲಿ ಯಾರ್ಯಾರು ನಿರಪರಾಧಿಗಳನ್ನು ಬಂಧಿಸಲಾಗಿದೆ ಅವರೆಲ್ಲರನ್ನೂ ಬಂಧಮುಕ್ತರನ್ನಾಗಿ ಮಾಡುವ ಬಗ್ಗೆ ಪುನರ್ ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಿರಿ. ಇದರ ಬಗ್ಗೆ ಕೂಡ ತಾವು ಇವತ್ತು ಸಾಯಂಕಾಲದೊಳಗಾಗಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಸುಮಾರು ೩೦೦ ಜನರನ್ನು ಬಂಧಿಸಿದ್ದಾರೆಂದು ನಮಗೆ ಗೊತ್ತಾಗಿದೆ. ಸರ್ಕಾರ ತಾವು ಕೊಟ್ಟಿರ

ತಕ್ಕ ವಾಗ್ದಾನವನ್ನು ಚಾಚೂ ತಪ್ಪದೆ ಪುನರ್ ಪರಿಶೀಲನೆ ಮಾಡಬೇಕು ಈ ಸದನದ ಮುಂದೆ ಮಂಡಿಸಿರ ತಕ್ಕ ೨೨ ಡಿಮ್ಯಾಂಡ್‌ಗಳ ಪೈಕಿ ಯಾವಯಾವ ಡಿಮ್ಯಾಂಡ್‌ಗಳಿಗೆ ಮಾನ್ಯತೆ ಕೊಟ್ಟು ರೈತರ ಬೇಡಿಕೆಗಳನ್ನು ಈಡೇರಿಸಿ ಕೊಡುತ್ತೀರಿ ಅದನ್ನು ಘೋಷಣೆ ಮಾಡಬೇಕು. ರೈತರ ಚಳುವಳಿ ವಿಕೋಪಕ್ಕೆ ಹೋಗುವ ಮುಂಚೆ ನೀವು ತೀರ್ಮಾನವನ್ನು ಕೈಗೊಂಡು ಘೋಷಣೆ ಮಾಡಬೇಕು. ಇವತ್ತು ಘಟಪ್ರಭಾ, ಮಲಪ್ರಭಾಗಳಿಗೆ ಕೆಳಗಿನ ನೀರಿನ ತೆರಿಗೆ ವಿಚಾರ ಒಂದೇ ಅಲ್ಲ. ಈ ಘಟನೆಯ ವಿಚಾರಣೆಗಾಗಿ ಒಂದು ಜುಡಿಷಿಯಲ್ ಪ್ರೋಬ್ ಮಾಡುವುದಕ್ಕೆ ಸರ್ಕಾರ ಹಿಂದೆ ಮುಂದೆ ನೋಡದೆ ಈ ಸದನದಲ್ಲಿ ಘೋಷಣೆ ಮಾಡಬೇಕು, ಮತ್ತು ಈ ೨೨ ಡಿಮ್ಯಾಂಡ್‌ಗಳ ಪೈಕಿ ಎಷ್ಟನ್ನು ಮಾನ್ಯ ಮಾಡುವುದಕ್ಕೆ ಸಾಧ್ಯ ಎಂಬುದನ್ನು ಈ ದಿವಸ ಸಂಜೆಯೊಳಗಾಗಿ ಹೇಳಬೇಕು.

†ಶ್ರೀ ಜೆ. ಹೆಚ್. ಪಟೇಲ್ (ಚನ್ನಗಿರಿ).—ಸನ್ಮಾನ್ಯ ಸಭಾಧ್ಯಕ್ಷರೆ, ಮೊನ್ನೆ ಶನಿವಾರದ ದಿವಸ ಸದನದ ನಾಯಕರು ಈ ವಿಷಯವನ್ನು ಸಮಗ್ರವಾಗಿ ಪ್ರಸ್ತಾಪ ಮಾಡಿ ಒಂದು ಹೇಳಿಕೆಯನ್ನು ಕೊಟ್ಟರು ಆ ಹೇಳಿಕೆಯನ್ನು ಕೊಟ್ಟನಂತರ ಅವರು ಕೆಲವು ಪರಿಹಾರ ಕ್ರಮಗಳನ್ನೂ ಕೂಡ ಘೋಷಣೆ ಮಾಡಿದ್ದರು, ಮತ್ತು ಆದಷ್ಟು ಬೇಗ ಕೆಲವು ತೀರ್ಮಾನಗಳನ್ನೂ ತೆಗೆದುಕೊಳ್ಳುವುದಲ್ಲದೆ ನಿಷ್ಪಕ್ಷಪಾತ ವಿಚಾರಣೆಯನ್ನು ನಡೆಸುತ್ತೇವೆಂದು ಹೇಳಿದರು. ಆಗ ಸಭೆಯಲ್ಲಿ ಏನೊಂದು ಇಂಪ್ರೆಷನ್ ಕ್ರಿಯೇಟ್ ಆಯಿತೆಂದರೆ ಜನರು ತಮ್ಮನ್ನು ತಾವು ಯಾವ ರೀತಿ ನಿಯಂತ್ರಿಸಿಕೊಂಡರೋ ಅದೇರೀತಿ ಪೋಲೀಸಿನವರೂ ನಿಯಂತ್ರಿಸಿಕೊಳ್ಳುತ್ತಾರೆ ಎಂದು ನಾವು ತಿಳಿದಿದ್ದೆವು. ಕಾನೂನು ದೃಷ್ಟಿಯಿಂದ ಇದು ಸರಿಯಲ್ಲ, ಯಾವುದೇ ಘಟನೆಯಾಗಲಿ ಇತ್ತೀಚೆಗೆ ನಡೆದ ಘಟನೆಯಾಗಿರಬೇಕು, ಮತ್ತು ನಿರ್ದಿಷ್ಟವಾದ ಘಟನೆ ಆಗಿರಬೇಕು, ಆಗ ಮಾತ್ರ ಈ ವಿಷಯವನ್ನು ನಿಲುವಳಿ ಸೂಚನೆಯಾಗಿ ಸದನದಲ್ಲಿ ತರುವುದಕ್ಕೆ ಅವಕಾಶ ಇದೆ ಎಂದು ಮಾನ್ಯ ಮಿತ್ರರು ಹೇಳಿದರು. ಮೊನ್ನೆ ದಿವಸ ನಾವು ಇದನ್ನು ಚರ್ಚೆಮಾಡಿದ್ದೇವೆ. ಇವತ್ತು ಅದೇ ವಿಷಯವನ್ನು ನಿಲುವಳಿ ಸೂಚನೆಮೂಲಕ ತರುವುದು ಸರಿಯಲ್ಲವೆಂದು ಹೇಳುವುದಾದರೆ ಅವರು ಕಾನೂನನ್ನು ಇನ್ನೊಂದುಸಾರಿ ನೋಡುವುದು ಉಚಿತವೆಂದು ಹೇಳಬಯಸುತ್ತೇನೆ. ಮೊನ್ನೆ ದಿವಸ ನಾವು ಚರ್ಚೆಮಾಡಿದ್ದು ರೂಲ್ ೫೯ರ ಕೆಳಗೆ',

ಸ್ವಾಮಿ, ಈ ತಿಂಗಳ ೨೧ನೇ ತಾರೀಖಿನಿಂದ ಇವತ್ತಿನವರೆಗೆ ಅಂದರೆ ೮-೯ ದಿವಸಗಳಿಂದ ಬಂದಿರತಕ್ಕ ಪ್ರಜಾವಾಣಿ ಪತ್ರಿಕೆಯನ್ನು ನಾನು ಇಲ್ಲಿ ತೆಗೆದುಕೊಂಡು ಬಂದಿದ್ದೇನೆ. ಇದರಲ್ಲಿ ಒಂದು ಕಡೆಯಿಂದ ನೋಡಿಕೊಂಡು ಬಂದರೆ ಈ ದಿವಸ ನರೇಗಲ್‌ನಲ್ಲಿ ಗುಂಡು, ಈ ದಿವಸ ಗಂಗಾವತಿಯಲ್ಲಿ ಗುಂಡು, ಈ ದಿವಸ ಇಲ್ಲಿ ಗೋಲಿಬಾರ್, ಈ ದಿವಸ ಇಲ್ಲಿ ಲಾಠಿ ಛಾರ್ಜ್ ಹೀಗೆ ಪ್ರತಿನಿತ್ಯ ಇದ್ದೇ ಇದೆ. ಈ ವಿಚಾರವನ್ನು ನಾವು ಜನತಾ ಪ್ರತಿನಿಧಿಗಳಾಗಿ ಇಲ್ಲಿಗೆ ಆರಿಸಿ ಬಂದು ಕುಳಿತಿರುವುದರಿಂದ ಇದನ್ನು ಚರ್ಚೆ ಮಾಡದೆ ಇನ್ನೇನು ಮಾಡಬೇಕು ? ನಗರದಲ್ಲಿ ಸೊಳ್ಳೇ ಕಾಟ ಇದ್ದರೆ ಹಂದಿಗಳು ಸಾಯುತ್ತಿದ್ದರೆ ಅದನ್ನು ಬೇಕಾದರೆ ನಿಧಾನವಾಗಿ ಚರ್ಚೆ ಮಾಡಬಹುದು ಆದರೆ......

ಒಬ್ಬ ಸದಸ್ಯರು.—ಸ್ವಾಮಿ, ಸೊಳ್ಳೇ ಕಾಟವನ್ನು ತಪ್ಪಿಸುವ ವಿಚಾರದಲ್ಲಿ ಮಾನ್ಯ ಸದಸ್ಯರಾದ ರಾಮಭಟ್‌ರವರು ಪ್ರಶ್ನೆ ಹಾಕಿದ್ದಾರೆ.

ಶ್ರೀ ಜೆ. ಹೆಚ್. ಪಟೇಲ್.—ಸ್ವಾಮಿ, ನಾವು ಈ ವಿಚಾರವನ್ನು ಅಷ್ಟು ಲಘುವಾಗಿ ತೆಗೆದು ಕೊಳ್ಳುವುದಲ್ಲ. ನಮ್ಮ ರಾಜ್ಯದ, ನಮ್ಮ ದೇಶದ ಜನತೆ ಕಷ್ಟಪಟ್ಟು ನಮಗೆ ಕೊಟ್ಟಿರುವ ಹಣವನ್ನು ನಾವು ಯಾವ ರೀತಿಯಲ್ಲಿ ಖರ್ಚುಮಾಡುತ್ತಿದ್ದೇವೆಂಬುದನ್ನು ಯೋಚನೆ ಮಾಡಿ ನೋಡಬೇಕು. ಲೋಕಸಭೆಯಲ್ಲಿ ಕಾರ್ಯಕಲಾಪಗಳು ನಡೆಯುವ ಸಂದರ್ಭದಲ್ಲಿ ಪ್ರತಿ ಒಂದು ನಿಮಿಷಕ್ಕೆ ೮ ಲಕ್ಷ ರೂಪಾಯಿಗಳಂತೆ ಮತ್ತು ನಮ್ಮ ವಿಧಾನ ಮಂಡಲದ ಕಾರ್ಯಕಲಾಪಗಳು ನಡೆಯುವಾಗ ಪ್ರತಿ ಒಂದು ನಿಮಿಷಕ್ಕೆ ಸುಮಾರು ೮೦ ಸಾವಿರ ರೂಪಾಯಿಗಳಂತೆ ಖರ್ಚಾಗುತ್ತಿದೆ. ಬಡ ಜನತೆ ಕೊಟ್ಟಿರತಕ್ಕ ಹಣವನ್ನು ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ವ್ಯಯಮಾಡುವುದು ಸರಿಯಲ್ಲ. ಹೊರಗಡೆ ಜನರು ದಿನನಿತ್ಯ ಸಾಯುತ್ತಿದ್ದಾರೆ ಇಂಥ ಸಂದರ್ಭದಲ್ಲಿ ಆ ವಿಚಾರವನ್ನು ಚರ್ಚೆ ಮಾಡುವುದು ಬೇಡವೆ ? ಹೊರಗಡೆ ಅಶಾಂತಿಯಿಂದ ಕುದಿಯುತ್ತಿದ್ದರೆ ನಾವು ಈ ವಿಧಾನಸೌಧದಲ್ಲಿ ಕುಳಿತು ನಮ್ಮ ಕೆಲಸದಲ್ಲಿ ನಿರತರಾಗುವುದು ಸರಿಯೆ ? ಹೊರಗಡೆ ಶಾಂತಿ ಇದ್ದರೆ ಇಲ್ಲೂ ಶಾಂತಿ ಇರುತ್ತದೆ. ಹೊರಗಡೆ ಗೋಲಿಬಾರ್, ಲಾಠಿ ಚಾರ್ಜ್ ಜನರ ಮೇಲೆ ಆಗುತ್ತಿರುವಾಗ ನಾವು ಇಲ್ಲಿ ಸುಮ್ಮನೆ ಕೂತುಕೊಳ್ಳುವುದಕ್ಕಾಗುವುದಿಲ್ಲ. ನಾವು ಅದನ್ನು ಇಲ್ಲಿ ಪ್ರಸ್ತಾಪ ಮಾಡಲೇಬೇಕು ಮತ್ತು ಪ್ರತಿಭಟನೆಯನ್ನೂ

ಹೋಗಬೇಕಾಗುತ್ತದೆ. ನೀವು ಆಡಳಿತವನ್ನು ನಡೆಸುವುದಕ್ಕೆ ಅನರ್ಹರೆಂದು ಹೇಳಬೇಕಾಗುತ್ತದೆ. ಜನರು ನಮಗೆ ಓಟುಕೊಟ್ಟಿದ್ದಾರೆ. ಏತಕ್ಕೆ ? ನಾವು ಅರ್ಹ ಜನ ಎಂದು.

ಮಾನ್ಯ ಅಧ್ಯಕ್ಷರೆ, ನಾನು ಒಂದು ಮಾತನ್ನು ಹೇಳುತ್ತೇನೆ. ಗುಡ್ಡ ಒಣಗಿದ್ದರೆ ಸ್ವಲ್ಪ ಬೆಂಕಿ ಬಿದ್ದರೂ ಸಾಕು ಗುಡ್ಡವೇ ಹತ್ತಿ ಉರಿಯುತ್ತದೆ. ಆದರೆ ಗುಡ್ಡ ಹಸಿ ಇರುವಾಗ ನೀವು ಎಷ್ಟೇ ಬೆಂಕಿ ಇಟ್ಟರೂ ಗುಡ್ಡ ಹತ್ತಿಕೊಳ್ಳುವುದಿಲ್ಲ.

ನಮ್ಮ ರಾಜ್ಯದಲ್ಲಿ ಆರ್ಥಿಕವಾಗಿ ಹಿಂದುಳಿದ ಜನ ಯಾರು ಇದ್ದಾರೆ ಅವರು ದಿನನಿತ್ಯದ ಜೀವನ ಹೂಡಲಿಕ್ಕೆ ಆಗದೆ ಪರಿತಪಿಸುತ್ತಿದ್ದಾರೆ. ಯಾರೂ ಏಕಾ ಏಕಿ ಅಂಗಡಿ ನುಗ್ಗುತ್ತಾರೆ ಏತಕ್ಕೋಸ್ಕರ ನುಗ್ಗುತ್ತಾರೆ ಎಂಬುದನ್ನು ತಾವು ಯೋಚನೆ ಮಾಡಬೇಕು. ಬಡಜನರು ಯಾವಾಗ ಅವರ ಜೀವನ ನಿಸ್ಸಹಾಯಕ ಸ್ಥಿತಿಗೆ ಬರುತ್ತದೆ. ಆವಾಗ್ಗೆ ಬೇರೆ ಮಾರ್ಗವಿಲ್ಲದೆ ಅಂಗಡಿಗಳನ್ನು ಅದರಲ್ಲೂ ಸಾಹುಕಾರರ ಅಂಗಡಿಗಳನ್ನು ನುಗ್ಗುತ್ತಾರೆ ಆದರೆ ಅದನ್ನು ಸರಿಯೆಂದು ವಾದಮಾಡುವುದಕ್ಕೆ ನಾನು ಹೋಗುವುದಿಲ್ಲ. ಇದು ಜನ ತಂತ್ರದಲ್ಲಿ ನಡೆಯುತ್ತದೆ. ಒಂದು ಸಾರಿ ಕಲ್ಕತ್ತಾದಲ್ಲಿ ನಡೆದಂಥ ಒಂದು ದುಷ್ಟಾಂತವನ್ನು, ಮತ್ತೆ ಅಲ್ಲಿಯ ಹೈಕೋರ್ಟ್ ಅದರ ಬಗ್ಗೆ ಕೊಟ್ಟಂಥ ತೀರ್ಮಾನವನ್ನು ನೆನಪು ಮಾಡಿಕೊಳ್ಳಬೇಕಾಗುತ್ತದೆ. ಅದು ಏನು ಎಂದರೆ ಒಬ್ಬ ಬಿ. ಎ. ಪದವೀಧರ ಕೆಲಸ ದೊರಕಿಸಿಕೊಳ್ಳಲಿಕ್ಕೆ ಸುಮಾರು ದಿವಸಗಳು ಬೀದಿ ಬೀದಿ ಅಲೆದು ಪ್ರಯತ್ನ ಪಟ್ಟು ಸಾಧ್ಯವಾಗಲಿಲ್ಲ. ೮ ದಿವಸ ಉಪವಾಸ ಮಾಡಿದಮೇಲೆ ಒಂದು ದಿನ ರಾತ್ರಿ ಎಲ್ಲೋ ಮಲಗಲಿಕ್ಕೆ ಹೋದಾಗ ಅಲ್ಲಿ ವಿಪರೀತ ಚಳಿಯಾಯಿತು, ಹಸಿವಿನಿಂದ ನರಳುವುದರ ಜೊತೆಗೆ ಚಳಿಯನ್ನು ತಡೆಯಲಾರದೆ ಒಂದು ಹೋಟೆಲ್‌ನಲ್ಲಿ ಲೋಟ ತೊಳೆದು ಒಂದೆರಡು ದಿವಸ ಜೀವನ ಕಳೆಯಲಿಕ್ಕೆ ಕೂಡ ಪ್ರಯತ್ನ ಮಾಡಿದರೂ ಅಲ್ಲೂ ಸಾಧ್ಯವಾಗಲಿಲ್ಲ. ಕೊನೆಗೆ ಹೋಟೆಲ್ ಒಳಗೆ ನುಗ್ಗಿ ಒಂದು ರಗ್ಗು ತೆಗೆದುಕೊಂಡು ಬಂದು ಹೊದುಕೊಂಡ ಇದನ್ನು ಅರಿತ ಆ ಹೋಟೆಲ್ ಮಾಲೀಕ ಪೋಲೀಸರಿಗೆ ದೂರು ಕೊಟ್ಟು, ದೂರು ಕೊಟ್ಟರೂ ರಗ್ಗನ್ನು ಆತ ವಾಪಸ್ ಮಾಡಲಿಲ್ಲ. ಪೋಲೀಸರು ಆತನನ್ನು ಕೊರ್ಟಿಗೆ ಹೋಗುವಂತೆ ಕೇಸ್ ಮಾಡಿದರು. ಆತನನ್ನು ನ್ಯಾಯಾಧೀಶರು ಕೇಳಿದಾಗ ಇರುವುದನ್ನು ಒಪ್ಪಿಕೊಂಡು ಅವನ ಪರಿಸ್ಥಿತಿಯನ್ನು ಹೇಳಿಕೊಂಡಮೇಲೆ ನ್ಯಾಯಾಧೀಶರಿಗೆ ಅವನ ಮೇಲೆ ಕನಿಕರವಾಯಿತು, ಆದರೂ ನ್ಯಾಯದ ದೃಷ್ಟಿಯಲ್ಲಿ ಅವನಿಗೆ ಶಿಕ್ಷೆ ಕೊಟ್ಟರು. ಆ ಯುವಕನಿಗೆ ಗೊತ್ತಿತ್ತು ಈ ರೀತಿ ಮಾಡಿದರೆ ನನಗೆ ಪೋಲೀಸರು ಜೈಲಿಗೆ ಹಾಕುತ್ತಾರೆ ಅಲ್ಲಿಯಾದರೂ ಸ್ವಲ್ಪ ಮಲಗಲಿಕೆ ಅವಕಾಶವಾಗುತ್ತದೆಂದು. ಆ ಯುವಕನನ್ನು ಇಂತಹ ಪರಿಸ್ಥಿತಿಗೆ ತಂದಿರತಕ್ಕಂಥ ಸಮಾಜ ನಾಚಿಕೆ ಪಟ್ಟುಕೊಳ್ಳಬೇಕು. ಅವರನ್ನು ಶಿಕ್ಷಿಸುವುದಕ್ಕೆ ಅಧಿಕಾರವಿಲ್ಲ. ಅವರನ್ನು ಶಿಕ್ಷಿಸಬೇಕಾದರೆ ದೇವರೇ ಶಿಕ್ಷೆ ಕೊಡಬೇಕು. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ರೈತರು ಹಾಗೆ ಮಾಡುವುದಿಲ್ಲ, ರೈತರ ಹೆಸರಿನಲ್ಲಿ ಕೆಲವಾರು ಗುಂಡಾಗಳು ಮಾಡುತ್ತಿದ್ದಾರೆ "If you want to kill a dog, call it a mad dog and then kill it." I want to ask one sincere question to the Hon. Chief Minister. Whom do you depend upon and whom do you want to depend upon ? Is it the people or your police. Then, how long can you rule this State ? ಈಗ ರೈತ ಹಾಗೆ ಮಾಡುವುದಿಲ್ಲ. ಅವರ ಬಗ್ಗೆ ನನಗೆ ಸಹಾನುಭೂತಿ ಇದೆ, ಗೂಂಡಾಗಳೂ ಈ ಕೆಲಸವನ್ನು ಮಾಡುತ್ತಿದ್ದಾರೆ ಎಂದು ಪೋಲೀಸರಿಗೆ ನಾವು ಫ್ರೀ ಹ್ಯಾಂಡ್ ಕೊಟ್ಟಿದ್ದೇವೆಂದು ಹೇಳುವುದು ಏನು ಇದೆ. ಅದು ಬೇರೆ ಒಂದು ರೀತಿಯಲ್ಲಿ ತಮ್ಮ ಅಸಮರ್ಥ್ಯತೆಯನ್ನು ಮುಚ್ಚಿಕೊಳ್ಳುವುದಕ್ಕೆ ಇದು ಒಂದು ಸಾಧನವೆಂದು ಬಳಸಿ ಕೊಳ್ಳುತ್ತಿದ್ದಾರೆಂದು ಹೇಳಬೇಕಾಗಿದೆ. ಯಾರು ಗೂಂಡಾಗಳು ಎಂದು ಹೇಳುತ್ತಿದ್ದಾರೆ ಅವರು ಪೋಲೀಸರ ರಕ್ಷಣೆಯಲ್ಲಿ ಚೆನ್ನಾಗಿಯೇ ಇದ್ದಾರೆ, ಏನು ದರೋಡೆಕಾರರು ದರೋಡೆ ಮಾಡುತ್ತಾರೆ ಅದನ್ನು ಕೆಳಗಿನಿಂದ ಮೇಲಿನವರೆಗೆ ಇರುವ ಪೋಲೀಸ್ ಅಧಿಕಾರಿಗಳು ಹಂಚಿಕೊಳ್ಳುತ್ತಿರುತ್ತಾರೆ. ಗೂಂಡಾಗಳು ಯಾವುದಕ್ಕೂ ಬಲಿಯಾಗುವುದಿಲ್ಲ. ಬಲಿಯಾಗುವವರು ಯಾರು, ಎಂದರೆ ಕೇವಲ ಕುಶಾಲನಗರದವರು ಮತ್ತು ಚೆನ್ನಗಿರಿಯವರು ಆಗಬಹುದು. ಆದ್ದರಿಂದ ನ್ಯಾಯಾಂಗ ತನಿಖೆ ಮಾಡಿದರೆ ಯಾರಾದರೂ ಪೋಲೀಸರು ತಪ್ಪುಮಾಡಿದ್ದಾರೆಯೋ ಇಲ್ಲವೇ ಎನ್ನುವುದು ಗೊತ್ತಾಗುತ್ತದೆ ....ಪೋಲೀಸರು answerable to the deparment ಎಂದು ಹೇಳಿದರೆ ಇಲಾಖೆಯವರು ಅವರು ಹೇಳುವುದನ್ನು ತಪ್ಪು ಎಂದು ಹೇಳುತ್ತಾರೋ ? ಇಲ್ಲ. ಆದರಿಂದ ನ್ಯಾಯಾಂಗ ತನಿಖೆಯಾಗಬೇಕು ಪೋಲೀಸ್ ಅಧಿಕಾರಿಗಳು ತಪ್ಪು ಮಾಡಿದ್ದರೆ ಇಲ್ಲವೇ ಎನ್ನುವುದು

ಹೊರಗೆ ಬರಲಿ ತಪ್ಪು ಮಾಡಿದರೆ ಅವರಿಗೆ ಶಿಕ್ಷೆಯಾಗಲಿ. ಎಂದು ಹೇಳುತ್ತೇನೆ, ಏನಾದರೂ ಹಾಗೆ ಮಾಡದೆ ಪೋಲೀಸ್ ಇಲಾಖೆಯಿಂದಲೇ ತನಿಖೆಗೆ ಅವಕಾಶ ಕೊಟ್ಟರೆ ಅಸ್ಸಾಮ್ ರೀತಿಯಲ್ಲಿ ಚಳುವಳಿ ಆಗುತ್ತದೆಂದು ಶಂಕೆಪಡಬೇಕಾಗಿಲ್ಲ, ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ. ಪೋಲೀಸರ ಹೊಡೆತದಿಂದ ಜನರು ಸಾಯುತ್ತಿದ್ದಾರೆ ನನಗೆ ಒಂದು ಕಥೆ ಜ್ಞಾಪಕಕ್ಕೆ ಬರುತ್ತದೆ. ರಕ್ತಾಸುರನ ಒಂದು ತೊಟ್ಟು ರಕ್ತ ಕೆಳಗೆ ಬಿದ್ದರೆ ಯಾವ ರೀತಿ ಅವನಂತೆ ರಕ್ತಾಸುರರ ಹುಟ್ಟುತ್ತಿದ್ದರೊ, ಅದರಂತೆ ಜನರ ಒಂದ ತೊಟ್ಟು ರಕ್ತ ನೆಲಕ್ಕೆ ಬಿದ್ದರೆ. ಅದರಿಂದ ಬಹಳ ಜನ ಹುಟ್ಟುತ್ತಾರೆ. ಈ ರೀತಿ ಜನರು ಎದ್ದು ಲೂಟಿ ಮಾಡಬೇಕೆಂದು ನಮ್ಮ ಇಚ್ಛೆಯಲ್ಲ. ಇದರಲ್ಲಿ ಪೊಲಿಟಿಕಲ್ ಆಗಿ ಸಿಚಿಯೇಷನ್ ಉಂಟು ಮಾಡಬೇಕೆಂದು ಇದ್ದರೆ ಆದಕ್ಕೆ ಬೇರೆ ಮಾರ್ಗ ಅನುಸರಿಸಬಹುದಾಗಿತ್ತು. ಈ ಸದನದಲ್ಲಿ ಚರ್ಚೆ ಆಗಬೇಕೆಂದು ಹೇಳುತ್ತಿರಲಿಲ್ಲ, ಆಡಳಿತ ಕುಸಿದು ದೇಶ ಅನಾಗರೀಕತೆಗೆ ಬರಬಾರದು ಎನ್ನುವುದೇ ನಮ್ಮ ಉದ್ದೇಶ. ನಮಗೆ ಪಾರ್ಲಿಮೆಂಟರಿ ಡೆಮೊಕ್ರಸಿಯಲ್ಲಿ ವಿಶ್ವಾಸವಿದೆ. ಆದ್ದರಿಂದ ಈ ರೀತಿ ಇಲ್ಲಿ ಚರ್ಚೆಯಾಗಿ ಒಂದು ತಿರ್ಮಾನವಾಗಲಿ ಎಂದು ಈ ಕೆಲಸ ಮಾಡುತ್ತಿದ್ದೇವೆ. ಪೋಲೀಸರು. ಯಾರು ಕೊಲ್ಲುತ್ತಿದ್ದಾರೆ ಅವರಿಂದ ನೀವೂ ನಾಶವಾಗುತ್ತೀರಿ. ಪೋಲೀಸರು ಈ ರೀತಿ ನಾವು ಮಾಡಿದರೆ ಈ ಸರ್ಕಾರದವರು ನಾಶವಾಗುತ್ತಾರೆ ಎಂದು ಮಾಡುತ್ತಿದ್ದಾರೋ ಏನು ಎಂದು ನನಗೆ ಅನು ಮಾನ ಬರುತ್ತದೆ. ಇದರ ಬಗ್ಗೆ ನಿಮ್ಮ ವಿಜಿಲೆನ್ಸ್ ಹೇಳಬೇಕು ಹಿಂದೆ ಮಾನ್ಯ ವೈ. ಬಿ. ಚವಾಣ್‌ರವರು ಮಂತ್ರಿಗಳಾಗಿದ್ದಾಗ ಪಾರ್ಲಿಮೆಂಟ್ ಹೌಸ್ ಎದುರಿಗೇ ಪೋಲೀಸರು ಚಳುವಳಿ ಮಾಡಿದಾಗ ಎಷ್ಟೋ ಪೋಲೀಸರನ್ನು ಮಿಲಿಟರಿಯವರು ಕೊಂದರು. ಆಗ ಪೋಲೀಸರಿಗೆ ನೀವು ಬಡ ರೈತರನ್ನು ಹೊಡೆಯುವಾಗ ಎಷ್ಟು ಖುಷಿಯಿಂದ ಹೊಡೆಯುತ್ತಿದ್ದಾರೆ ಈಗ ಅದೇ ಮಿಲಿಟರಿಯವರು ನಿಮ್ಮನ್ನು ಹೊಡೆಯುತ್ತಿದ್ದಾರೆಂದು ಹೇಳಬೇಕಾದ ಸಂದರ್ಭ ಬಂತು. ಆದ್ದುದರಿಂದ ಈ ರೀತಿ ರೈತರನ್ನು ನಿಮ್ಮ ಪೋಲೀಸರು ಕೊಂದರೆ ರೈತ ರಕ್ತಾಸುರರು ಜಾಸ್ತಿ ಯಾಗುತ್ತಾರೆ, ಆಗ ಆಡಳಿತವನ್ನು ಯಾರು ನಡೆಸಿದರೂ ಅದನ್ನು ಸುಧಾರಣೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಹಿಂದೆ ಒಂದು ಪೋಲೀಸ್ ಕಮಿಷನ್ ಅಪಾಯಿಂಟ್ ಮಾಡಿದ್ದರು, ಪೋಲೀಸರ ಅವ್ಯಾಹತ ಹಿಂಸೆಯು, ಬಗ್ಗೆ ಮತ್ತು ಆ ಸಿಸ್ಟಮ್ ಬದಲಾವಣೆಯಾಗಬೇಕೆಂದು ಇನ್ನೂ ಒಂದು ಮಾತು ಹೇಳಿದ್ದಾರೆಡೆ ಪಂಜಾಬ್ ಮತ್ತು ಹರಿಯಾಣದಲ್ಲಿ ಪೋಲಿಸರು ಚಳುವಳಿ ಮಾಡಿದಾಗ ಬಿ. ಎಸ್. ಎಫ್, ಕರೆಸಿ ಹೊಯ್ಸಿದರು..... ... .The police were killed like mad dogs and the army was called for... ......ಯ...ಾರು ಆರ್ಡಿನರಿ ಕಾನ್‌ಸ್ಟೇಬಲ್ ಇರುತ್ತಾರೆ ಅವರಿಗೆ ಜಾಸ್ತಿ ಕಿರುಕುಳವಾಗುತ್ತಿರುತ್ತದೆಂದು. ಅವರ ಅಧಿಕಾರಿಗಳು ಕೊಡುವ ಕಿರುಕುಳಗಳನ್ನು ಬಗೆಹರಿಸಿಕೊಳ್ಳಲಿಕ್ಕೆಂದು ಪೋಲೀಸರು ಅವರದೇ ಆದ ಒಂದು ಸಂಘವನ್ನು ಮಾಡಿಕೊಂಡರು ತಮಿಳುನಾಡು ಮತ್ತು ಆಂಧ್ರಗಳಲ್ಲಿ ಸಂಘಗಳು ಇದೆ, ಅದೇ ರೀತಿ ಇಲ್ಲಿಯೂ ಅವರದೇ ಆದ ಸಂಘಗಳನ್ನು ರಚನೆ ಮಾಡಿಕೊಳ್ಳಲು ಅವರಿಗೆ ಅವಕಾಶ ಮಾಡಿ ಕೊಡಿ. ಅಧ್ಯಕ್ಷರೇ ಮುಖ್ಯಮಂತ್ರಿಗಳು ತಕ್ಷಣ ಮೇಲಿನ ವರ್ಗದ ಎಲ್ಲಾ ಪೋಲೀಸ್ ಅಧಿಕಾರಿಗಳನ್ನು ಕರೆಸಿ ಗುಂಡು ಹಾರಿಸುವುದನ್ನು ಲಾಟಿ ಹೊಡೆಯುವುದನ್ನು ಹತೋಟಿಗೆ ತರದೆ ಹೋದರೆ ಜನರ ಪರವಾಗಿ ನಾನು ನಿಲ್ಲಬೇಕಾಗುತ್ತದೆ. ಏನಾದರೂ ರೈತರು ತಿರುಗಿಬಿದ್ದರೆ ಕೊನೆಗೆ ಏನು ಉಳಿಯುವುದಿಲ್ಲ. ಜಾಗ್ರತೆಯಾಗಿ ಸ್ಪೆಸಿಫಿಕ್ ಆಗಿ ಜುಡಿಷಿಯಲ್ ಎನ್‌ಕ್ವೈರಿ ಮಾಡುವ ಬಗ್ಗೆ ಆರ್ಡರ್ ಮಾಡಬೇಕು. ನಮ್ಮ ನಾಯಕರ ಜೊತೆ ಕುಳಿತು ಚರ್ಚೆ ಮಾಡಿ ತೀರ್ಮಾನ ತೆಗೆದುಕೊಳ್ಳಬೇಕು. ಪೋಲೀಸಿನವರು ತಪ್ಪು ಮಾಡುವುದನ್ನು ಎಲ್ಲವನ್ನು ಕ್ಷಮಿಸುತ್ತಾ ಹೋದರೆ ಹದ್ದುಬಸ್ತಿಗೆ ಬರುವುದಿಲ್ಲ. ಜುಡಿಷಿಯಲ್ ಎನ್‌ಕ್ವೈಯರಿ ಆಗಬೇಕು ಆಗ ಪೋಲೀಸಿನವರು ಹದ್ದುಬಸ್ತಿಗೆ ಬರುತ್ತಾರೆ. ವಿನಾ ಕಾರಣ ಪೋಲೀಸಿನವರು ರೈತರನ್ನು ಹೊಡೆದಿದ್ದಾರೆ. ರೈತರ್ ಮುಖಂಡರನ್ನು ಕರಸಿ ಕುಳಿತು ಕೊಂಡು ಮಾತನಾಡಿ, ಒಂದು ಶಾಂತಿಯು ವಾತಾವರಣ ಮೂಡುವಂತೆ ಮಾಡಬೇಕು. ಪೋಲೀಸ್ ಕಸ್ಟಡಿಯಲ್ಲಿರತಕ್ಕವರನ್ನು ಬೇಲ್ ಮೇಲೆ ಬಿಟ್ಟಿದ್ದಾರೆ, ಗಂಗಾವತಿಯಲ್ಲಿ ಮತ್ತು ಹೊಳೆ ಆಲೂರುನಲ್ಲಿ ಅರೆಸ್ಟ್ ಮಾಡಿದವರನ್ನು ಬೇಲ್ ಮೇಲೆ ಯಾರ್ಯಾರನ್ನು ಬಿಟ್ಟಿದ್ದೀರಿ ಆ ಮುಖಂಡರನ್ನು ಕರೆಸಿ ವಿರೋಧಪಕ್ಷದವರು ತಾವು ಪ್ರಮುಖರು ಕುಳಿತುಕೊಂಡು ವಿಚಾರ ಮಾಡಿ ತೀರ್ಮಾನ ತೆಗೆದುಕೊಳ್ಳಬೇಕು. ಯಾರು ಚಳುವಳಿಯಲ್ಲಿ ಭಾಗವಹಿಸಿದಂತವರು ಇರುತ್ತಾರೆ ಅವರಿಗೆಲ್ಲಾ ವಾರಂಟ್ ಇಷ್ಯೂ ಮಾಡಿದ್ದಾರೆ; ಅದನ್ನು ವಾಪಸ್ಸು ತೆಗೆದುಕೊಳ್ಳಬೇಕು, ಯಾವುದೋ ಕಾರಣಕ್ಕಾಗಿ ಯಾರಿಗೆ ಬೇಡವಾಗಿರುತ್ತಾರೋ ಅಂತಹವರಿಗೂ ಕೂಡ ವಾರಂಟು ಇಷ್ಯೂ ಮಾಡಿದ್ದಾರೆ ಪೋಲೀಸಿನವರು ಪ್ರತಿನಿತ್ಯ ಗುಂಡನ್ನು ಹಾರಿಸಿ ಜನಗಳನ್ನು ಸಾಯಿಸುತ್ತಿದ್ಧಾರೆ ಅದು ಎಲ್ಲಾ ನಿಲ್ಲಸಬೇಕು. ಉನ್ನತ

ಮಟ್ಟದ ಅಧಿಕಾರಿಗಳನ್ನು ಕರೆಸಿ ವಿಚಾರಮಾಡುತ್ತೇವೆಂದು ಹೇಳತಕ್ಕಂತಹದ್ದು ಸಮಂಜಸವಾಗಲಾರದು, ಏತಕ್ಕೆಂದರೆ ರೈತರ ಸಮಸ್ಯೆಗಳು ಬೇಕಾದಷ್ಟು ಇವೆ. ಅವುಗಳನ್ನು ವಿಚಾರಮಾಡಿ ಪರಿಹರಿಸುವ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ವಿಷಯಗಳ ಬಗ್ಗೆ ತಕ್ಷಣ ಕಾರ್ಯಕ್ರಮ ಕೈಗೊಳ್ಳಬೇಕು, ರಾಜ್ಯದಲ್ಲಿ ಶಾಂತಿಯ ವಾತಾವರಣ ತರಬೇಕು. ನಮಗೆ ಗೊತ್ತಿದೆ ಸರ್ಕಾರವನ್ನು ಹೇಗೆ ನಡೆಸಬೇಕು ಎಂದು ಹೇಳುವುದು, ಮಣಿಪುರ, ಬಿಜಾಪುರ ಮತ್ತು ಆಸ್ಸಾಂನಿಂದ ಗುಂಡಾ ಎಲಿಮೆಂಟ್ಸ್ ಬಂದಿದ್ದಾರೆಂದು ಹೇಳುವುದು ಸಮಂಜಸವಲ್ಲ. ತಾವು ಹೀಗೆಲ್ಲಾ ಹೇಳುವುದು ಸರಿಯಲ್ಲ. ಜನಗಳ ಹತ್ತಿರ ಹೋಗಿ ವಿಚಾರಮಾಡಿ, ಈ ದೃಷ್ಟಿಯಿಂದ ನಿಲುವಳಿ ಸೂಚನೆ ಮೇಲೆ ಚರ್ಚೆಮಾಡಲು ಅವಕಾಶ ಕೊಡಬೇಕೆಂದು ಒತ್ತಾಯಪೂರ್ವಕವಾಗಿ ಕೇಳುತ್ತೇನೆ, ಇಲ್ಲದಿದ್ದರೆ ನಾವು ಸುಮ್ಮನೆ ಕೂಡುವುದಕ್ಕೆ ಆಗುವುದಿಲ್ಲವೆಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

1-30 ಪಿ.ಎಂ.

† ಶ್ರೀ ಬಿ. ವಿ. ಕಕ್ಕಿಲಾಯ (ಬಂಟ್ವಾಳ).—ಅಧ್ಯಕ್ಷರೇ ಮೊನ್ನೆದಿವಸ ಈ ವಿಷಯ ಬಂದಾಗ ನಿಯಮ ೫೯ರ ಪ್ರಕಾರ ನಾವು ಚರ್ಚೆ ಮಾಡಿದ್ದೇವೆ. ಎರಡು ಕಡೆ ಸದಸ್ಯರು ಮಾನ್ಯ ಜೆ. ಎಚ್. ಪಟೇಲರು ಹೇಳಿದಹಾಗೆ ರಾಜ್ಯದಲ್ಲಿ ೭-೮ ದಿವಸಗಳಿಂದ ಗೋಲಿಬಾರ್ ನಡೆಯುತ್ತಿದೆ ಎಂಬುದನ್ನು ಕೇಳುತ್ತಿದ್ದೇವೆ, ಈ ವಾತಾವರಣ ಇರಬಾರದು. ನಾವು ಅದರ ಬಗ್ಗೆ ಚರ್ಚೆ ನಡೆಸಿ ಸರ್ಕಾರದವರು ಈ ಗಂಭೀರತೆಯನ್ನು ಅರ್ಥಮಾಡಿಕೊಂಡು ಪರಿಸ್ಥಿತಿಯನ್ನು ಹತೋಟಿಗೆ ತರುವುದಕ್ಕೆ ಎರಡು ಕಡೆಯ ಸದಸ್ಯರ ಅಭಿಪ್ರಾಯವನ್ನು ತಿಳಿದುಕೊಂಡು ಶಾಂತಿಯ ವಾತಾವರಣವನ್ನು ನಿರ್ಮಾಣ ಮಾಡುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಮುಖ್ಯಮಂತ್ರಿಗಳು ಹೇಳಿಕೆ ಕೊಟ್ಟಿದ್ದರಿಂದ ಪರಿಸ್ಥಿತಿಯನ್ನು ಶಾಂತಸ್ಥಿತಿಗೆ ತರುವುದಕ್ಕೆ ಸಹಾಯವಾಗುವುದರ ಬದಲು ಗಂಗಾವತಿಯಲ್ಲಿ ಪುನಃ ೪ ಜನ ಗುಂಡಿಗೆ ಬಲಿಯಾಗಿದ್ದಾರೆ. ಅವರ ಹೇಳಿಕೆಯಿಂದ ಯಾವ ಪರಿಣಾಮವಾಗುತ್ತದೆಂದು ನಿರೀಕ್ಷಣೆ ಮಾಡಿದ್ದರೋ ಆ ಪರಿಣಾಮವಾಗಲಿಲ್ಲ. ಕೆಲವರು ವಿಧಿ ಇಲ್ಲದೆ ಸುಮ್ಮನಿರಬಹುದು. ಚಳುವಳಿ ನಡೆಸುವಂತಹ ಜನಗಳಿಗೆ ಸಮಾಧಾನವಿಲ್ಲ ಎನ್ನುವುದು ಗಂಗಾವತಿಯಲ್ಲಿ ನಡೆದಿರುವ ಪ್ರಕರಣದಿಂದ ಸ್ಪಷ್ಟವಾಗುತ್ತದೆ. ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇವತ್ತು ಪರಿಸ್ಥಿತಿ ಬಹಳ ವಿಕೋಪಕ್ಕೆ ಹೋಗಿದೆ. ಇದೇರೀತಿಯಲ್ಲಿ ಮುಂದುವರಿಯಬಹುದು. ರೈತರು ತಮ್ಮ ಸಮಸ್ಯೆಗಳನ್ನು ಸರ್ಕಾರದ ಮುಂದೆ ಇಟ್ಟಿದ್ದರು. ಅದರ ಜೊತೆಗೆ ಬೆಲೆ ಏರಿಕೆ ಪ್ರಶ್ನೆ ಕೂಡ ಸೇರಿಕೊಂಡು ಬಂದಿದೆ. ಚಳುವಳಿಯಲ್ಲಿ ವಿದ್ಯಾರ್ಥಿಗಳು, ಕಾರ್ಮಿಕರು ಎಲ್ಲರು ಸೇರಿಕೊಂಡಿದ್ದಾರೆ. ಇದನ್ನು ನಿವಾರಣೆ ಮಾಡುವುದಕೋಸ್ಕರ ಒಂದು ಸಮಿತಿಯಾಗಬೇಕು. ಆದರೆ ಇವತ್ತು ಪರಿಸ್ಥಿತಿ ಎಲ್ಲಿಗೆ ಹೋಗಿದೆ ಎಂದರೆ ಹಳ್ಳಿಗಳಲ್ಲೂ ಕೂಡ ಬೆಲೆ ಏರಿಕೆ ಸಹಿಸುವುದಕ್ಕೆ ಸಾಧ್ಯವಿಲ್ಲದೆ ಇರುವಂತಹ ಪರಿಸ್ಥಿತಿ ಬಂದಿದೆ. ಕೆಲವು ಕಡೆ ರೈತರು ಪಂಪುಸೆಟ್ಟು, ಟ್ರ್ಯಾಕ್ಟರ್ ಮುಂತಾದ ವಾಹನಗಳಿಗೆ ಡೀಸಲ್, ಪೆಟ್ರೋಲ್ ಕೇಳಿದರೆ ಕೊಡಲಿಲ್ಲ. ರೈತರಿಗೆ ಕೊಡಬಾರದೆಂದು ಅವರವರೇ ಹಂಚಿಕೊಂಡಿದ್ದಾರೆ. ಯಾರಿಗೆ ಬೇಕೋ ಅವರಿಗೆ ಕೊಟ್ಟಿದ್ದಾರೆ. ಇವತ್ತು ನಗರಗಳಲ್ಲಿ ಸಿಗುತ್ತದೆ ಹಳ್ಳಿಗಳಲ್ಲಿ ಸಿಗುವುದಿಲ್ಲ. ಹೊರಗಡೆ ೨-೫೦ಕ್ಕೆ ಸಿಗುತ್ತಿದ್ದ ವಿಲ್ಸ್ ಫಿಲ್ಟರ್ ಸಿಗರೇಟನ್ನು ಅಸೆಂಬ್ಲಿಯ ಲಾಬಿಯಲ್ಲಿ ೪-೫೦ ರೂ.ಗಳಿಗೆ ಮಾರಾಟ ಮಾಡುತ್ತಿದ್ದರು, ಅದನ್ನು ನಮ್ಮ ಕಾರ್ಯದರ್ಶಿಯವರಿಗೆ ಹೇಳಿ ಕಿತ್ತು ಹಾಕಬೇಕಾಗಿ ಬಂತು. ಇಲ್ಲೇ ಹೀಗೆ ನಡೆದರೆ ಹೊರಗಡೆ ಹೇಗಾಗಿರಬೇಕು. ೩ ರೂ. ೩-೫೦ ರೂಪಾಯಿಗೆ ೧ ಕೆಜಿ ಸಕ್ಕರೆ ಸಿಗುತ್ತಿತ್ತು ಈಗ ೮-೯ ರೂಪಾಯಿ ಆಗಿದೆ. ಸರ್ಕಾರದವರು ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಾರೋ ಇಲ್ಲವೋ ಎಂಬುದು ಗೊತ್ತಿಲ್ಲ. ಬೆಲೆ ಏರಿಕೆಯನ್ನು ಹದ್ದುಬಸ್ತಿಗೆ ತರುವುದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಅವರ ಬೇಡಿಕೆಗಳನ್ನು ಈಡೇರಿಸುವುದಕ್ಕೆ ಆಗುವುದಿಲ್ಲ. ಪೋಲೀಸಿನವರು ಮಾಡುವಂತಹ ಎಲ್ಲ ಕ್ರಮಗಳಿಗೂ ತಾವು ಬೆಂಬಲ ಮತ್ತು ಪ್ರೋತ್ಸಾಹ ಕೊಡುವುದು ಸರಿಯಲ್ಲ. ಪೋಲೀಸಿನವರನ್ನು ನಂಬಿಕೊಂಡರೆ ಸಮಸ್ಯೆಗಳು ಪರಿಹಾರವಾಗುವುದಿಲ್ಲ. ಈಗಾಗಲೇ ಅಲ್ಲಿಯ ರೈತರು ಒಂದು ತೀರ್ಮಾನಕ್ಕೆ ಬಂದಿದ್ದಾರೆ. ಅದರ ಬಗ್ಗೆ ಎಚ್ಚರಿಕೆ ವಹಿಸಬೇಕು. ಪೋಲೀಸಿನವರು ಈ ಸ್ಥಿತಿಗೆ ಜನರನ್ನು ತಂದಿದ್ದಾರೆ. ನ್ಯಾಯವಾದ ರೀತಿಯಲ್ಲಿ ನಡೆದರೆ ಯಾರು ಏನು ಮಾಡುವುದಿಲ್ಲ. ಇವತ್ತು ಶಾಂತರೀತಿಯಲ್ಲಿ ಈ ಸಭೆಯನ್ನು ನಡೆಸತಕ್ಕಂತಹ ಪರಿಸ್ಥಿತಿ ಇಲ್ಲ. ರಾಜ್ಯದಲ್ಲಿ ಎಷ್ಟೋ ಕಡೆಗಳಲ್ಲಿ ಹೊಳಲ್ಕೆರೆ ಇನ್ನು ಮುಂತಾದ ಕಡೆಗಳಲ್ಲಿ ಕರ್ಫ್ಯೂ ಹಾಕಿದ್ದಾರೆ. ಕೆಲವು ಕಡೆ ಶಾಂತರೀತಿಯಿಂದ ಚಳುವಳಿ ನಡೆದಿದೆ. ಬೆಲೆ ಏರಿಕೆ ವಿರುದ್ಧ

ಅನೇಕ ಹೋಟೆಲ್‌ಗಳಲ್ಲಿ ಅಂಗಡಿಗಳಲ್ಲಿ ಲೂಟಿಯಾಗಿದೆ. ಸಿಮೆಂಟ್, ಸಕ್ಕರೆ ಇತ್ಯಾದಿ ಕಳ್ಳಸಂತೆಯಲ್ಲಿ ಮಾರಾಟ ನಡೆಯುತ್ತಿದೆ. ರಾಜ್ಯದಾದ್ಯಂತ ಸೆಕ್ಷನ್ ೧೪೪ ಕರ್ಫ್ಯೂ ಹಾಕಿದ್ದಾರೆ ಹೀಗಿರುವಾಗ ಶಾಂತರೀತಿಯಿಂದ ಚಳುವಳಿ ನಡೆಸಿ ಎಂದರೆ ಹೇಗಾಗುತ್ತದೆ. ತಾವು ೧೪೪ನೇ ಸೆಕ್ಷನ್ ಪ್ರಕಾರ ಕರ್ಫ್ಯೂವನ್ನು ಅವರ ಮೇಲೆ ಹಾಕುವ ಅರ್ಥ ಏನು ? ಸೆಕ್ಷನ್ ೩೫ ರಿಂದ ಪ್ರಾರಂಭವಾಗಿ ೧೪೪ರವರೆಗೆ ಬಂದಿದೆ. ಈಗ ಕೊನೇ ಹಂತದ ಕರ್ಫ್ಯೂಗೆ ಬಂದು ತಲುಪಿದೆ, ಇದರಿಂದ ಜನರು ಅತೃಪ್ತಿಯಾಗಿದ್ದಾರೆ, ಅಶಾಂತಿಯಿಂದ ಇದ್ದಾರೆ ಎಂದು ಕೇಳುತ್ತಿದ್ದೇನೆ. ಈಗ ದೇಶದಲ್ಲಿ ಎಲ್ಲಾ ಕಡೆಯೂ ಗೋಲಿಬಾರ್ ನಡೆಯುತ್ತಾ ಇದೆ. ಅದರಿಂದ ಜನರು ನಮ್ಮನ್ನು ಕೇಳುತ್ತಿದ್ದಾರೆ. ಆದುದರಿಂದ ನಾನು ಹೇಳುವುದೇನೆಂದರೆ ಆ ಜನರ ಸಮಸ್ಯೆಯನ್ನು ಪರಿಹರಿಸುವುದಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡೂ ಪ್ರಯತ್ನ ಪಡಬೇಕು. ಎರಡೂ ಸರ್ಕಾರಗಳೂ ತಮ್ಮದೇ ಸರ್ಕಾರವಾಗಿರುವುದರಿಂದ ಈ ಬಗ್ಗೆ ಪರಿಹಾರ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಹಿಂದೆ ದೇವರಾಜ ಅರಸ್‌ರವರು ಮುಖ್ಯಮಂತ್ರಿಗಳಾಗಿದ್ದಾಗ್ಗೆ ಕೇಂದ್ರದಲ್ಲಿ ಜನತಾ ಸರ್ಕಾರ ಇತ್ತು. ಆವಾಗ ನಾನು ಹೇಳಿದ್ದೇನೆ ಕೆಲವು ವಿಷಯಗಳಲ್ಲಿ. ಹಿಂದೆ ಪ್ರೈಮ್‌ಮಿನಿಸ್ಟರ್ ಆಗಿದ್ದಂಥಾ ಶ್ರೀಮತಿ ಇಂದಿರಾ ಗಾಂಧಿಯವರ ಬಗ್ಗೆ ನ್ಯಾಯಾಂಗ ವಿಚಾರಣೆಯಾಗಬೇಕು ಎಂದು ಹೇಳಿದ್ದುದ್ದರಲ್ಲಿ ನಾನೂ ಒಬ್ಬ ಆದರೆ ನಾನು ಧರಣಿ ಹೂಡಿರಲಿಲ್ಲ. ನಾನು ಆ ರೀತಿ ಏತಕ್ಕೆ ಹೇಳಿದೆ ಎಂದರೆ ದುಷ್ಕರ್ಮಿಗಳು ಯಾರು ಇದ್ದಾರೋ, ಪ್ರಚೋದನೆ ಮಾಡುವವರು ಯಾರು ಇದ್ದಾರೋ ಅವರ ಬಗ್ಗೆ ವಿಚಾರಣೆ ಮಾಡಿದರೆ ಮುಂದೆ ಆ ಕೃತ್ಯಗಳು ಮಾಡುವುದಕ್ಕೆ ಅವಕಾಶ ಆಗುವುದಿಲ್ಲ ; ಎನ್ನುವ ಕಾರಣಕ್ಕಾಗಿ ಹೇಳಿದೆ. ಅಸ್ಸಾಂನಲ್ಲಿ ಆದಹಾಗೆ ಕರ್ನಾಟಕದಲ್ಲೂ ಆಗಬಹುದು ಎನ್ನುವ ಒಂದು ಪರಿಸ್ಥಿತಿಯನ್ನು ಇಟ್ಟಿದ್ದಾರೆ. ಅಸ್ಸಾಂನಲ್ಲಿ ಹೊರಗಡೆ ಬಂದವರು ಪ್ರಚೋದನೆ ಮಾಡಿದರು ಅದಕ್ಕೆ ಬಲಿ ಹಾಕಿದರು ಹಾಗೇನಾದರೂ ಕೂಡ ಇಲ್ಲಿ ಪ್ರಚೋದನೆ ಮಾಡಿದ್ದರೇ ? ಇಲ್ಲಿ ಆಗಿರತಕ್ಕಂಥಾದ್ದು ರೈತರ ಚಳುವಳಿ, ರೈತರ ಹೋರಾಟ, ಈ ಬಗ್ಗೆ ಗೂಂಡಾಗಿರಿ ಅನ್ನುವ ಬಣ್ಣವನ್ನು ಹಚ್ಚಬೇಡಿ. ಈವೊತ್ತಿನ ದಿವಸ ರೈತರು ತಮ್ಮ ಮಿತಿಯನ್ನೂ ದಾಟಿ ಸರ್ಕಾರದ ಒಂದು ಧೋರಣೆ ಏನು ಇದೆ ಅನ್ನುವುದನ್ನು ಅರ್ಥ ಮಾಡಿಕೊಂಡಿದ್ದಾರೆ. ಅದಕ್ಕೋಸ್ಕರವಾಗಿ ಈವೊತ್ತಿನ ದಿವಸ ರೋಣದಲ್ಲಿರುವ ರೈತರು ಚಳುವಳಿ ಮಾಡಿ ಸರ್ಕಾರಕ್ಕೆ ಒಂದು ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ಹಾಗೂ ಅವರು ತಮ್ಮ ರಾಜೀನಾಮೆಯನ್ನು ಕೇಳಿದ್ದಾರೆ. ಈವೊತ್ತಿನ ದಿವಸ ಅವರ ಸಮಸ್ಯೆ ಏನು ಇದೆ ಅದನ್ನು ಪರಿಹಾರ ಮಾಡಿ ; ಅದಕ್ಕೆ ತೃಪ್ತಿಕರವಾದಂಥಾ ಉತ್ತರ ಕೊಡದೇ ಹೋದರೆ ರೈತರು ಏನು ಕೇಳುತ್ತಾರೆ ಅದನ್ನು ನಾವು ಕೇಳಲೇ ಬೇಕಾಗುತ್ತದೆ. ನೀವು ಮಾತೆತ್ತಿದರೆ ವಿಧಾನಸಭೆ ವಿಸರ್ಜನೆ ಮಾಡುತ್ತೇವೆಂದು ಹೇಳುತ್ತೀರಿ ಇಲ್ಲವೇ ಎಲೆಕ್ಷನ್ ಮಾಡುತ್ತೇವೆಂದು ಹೇಳುತ್ತೀರಿ. ಇವೆಲ್ಲಾ ಪತ್ರಿಕೆಯ ಮಾತಾಗಿದೆ. ಹಾಗಾದರೆ ಈ ರೈತರ ಸಮಸ್ಯೆಯನ್ನು ಹೇಗೆ ಬಗೆಹರಿಸಬೇಕು ಹೇಳಿ. ತಮಗೆ ಹೇಳಬೇಕಾದರೆ ಸಕ್ಕರೆ ಬೆಲೆ, ಸಿಮೆಂಟ್ ಬೆಲೆ ಬಟ್ಟೆ ಬೆಲೆ ಇವುಗಳನ್ನು ನೋಡಿ. ಇದರ ಬೆಲೆ ಬಹಳ ಏರಿದೆ. ಆದರೆ ಇದೇ ರೈತ ಬೆಳೆಯುತಕ್ಕಂಥಾ ಆಹಾರ ಪದಾರ್ಥಗಳ ಬೆಲೆ ನೋಡಿದರೆ ಬಹಳ ಕಡಿಮೆ ಇದೆ. ಈ ಬಗ್ಗೆ ತಾವೇನಾದರೂ ಕೇಂದ್ರಕ್ಕೆ ತಿಳಿಸಿದ್ದೀರಾ ? ಬೇರೆ ರಾಜ್ಯಗಳು ಕೇಳಿದ ಹಾಗೆ ಈ ಆಹಾರ ಪದಾರ್ಥಕ್ಕೆ ೧೫೦ ರೂಪಾಯಿ ಬೆಲೆ ಕೊಡಬೇಕು ಅಂತ ಏನಾದರೂ ಕೇಳಿದ್ದೀರಾ ? ಒಂದು ವೇಳೆ ಕೇಂದ್ರದವರು ಈ ಬೆಲೆಯನ್ನು ಒಪ್ಪದೇ ಹೋದರೆ ತಾವಾದರೂ ಕೊಡುವುದಕ್ಕೆ ಸಿದ್ಧರಾಗಬೇಕಾಗುತ್ತದೆ ಎಂದು ಪ್ರಧಾನಿಯವರಿಗೆ ತಿಳಿಸಿದ್ದೀರಾ ? ಒಂದು ಕಡೆ ನೋಡಿದರೆ ರೈತರು ಕೊಂಡುಕೊಳ್ಳತಕ್ಕಂಥಾ ಗೊಬ್ಬರದ ಬೆಲೆ ವಿಪರೀತ ಜಾಸ್ತಿಯಾಗಿದೆ, ಇನ್ನೊಂದು ಕಡೆ ನೋಡಿದರೆ ಇವರು ಬೆಳೆದಂಥಾ ಆಹಾರ ಪದಾರ್ಥಗಳನ್ನು ಮಾರಾಟ ಮಾಡುವುದಕ್ಕೆ ಹೋದರೆ ಬಹಳ ಕಡಿಮೆ ಇದೆ. ಈಗಾಗಲೇ ಕೇಂದ್ರ ಸರ್ಕಾರದವರನ್ನು ಎರಡು ರಾಜ್ಯಗಳು ಈ ಆಹಾರ ಪದಾರ್ಥಗಳ ಬೆಲೆಯನ್ನು ಹೆಚ್ಚು ಮಾಡಬೇಕು ಎಂದು ಕೇಳಿದ್ದಾರೆ. ನೀವು ಅದೇರೀತಿ ಏತಕ್ಕೆ ಕೇಳಬಾರದು ? ಆವಾಗ ಕೇಂದ್ರ ಸರ್ಕಾರದವರು ಒಪ್ಪುವುದಿಲ್ಲ ಎಂದರೆ ನೀವು ಆ ಬಗ್ಗೆ ಏನಾದರೂ ಒಂದು ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ. ಅವರಿಗೆ ಗೊಬ್ಬರದ ಬೆಲೆ ಕಡಿಮೆ ಸಿಗಬೇಕು ಮತ್ತು ಕಬ್ಬಿಗೆ ನ್ಯಾಯ ಬೆಲೆ ಸಿಗಬೇಕು ಇದನ್ನು ಮಾಡದೇ ಹೋದರೆ ರೈತರಿಗೇನೂ ಪರಿಹಾರವಾದಂತಾಗುವುದಿಲ್ಲ. ಈಗ ಅವರಿಗೆ ರೆವಿನ್ಯೂ ಅಧಿಕಾರಿಗಳು ಪಿಡಬ್ಲ್ಯುಡಿ ಅಧಿಕಾರಿಗಳು ಕಿರುಕುಳ ಕೊಟ್ಟು ಏನು ವಸೂಲಿ ಮಾಡುತ್ತಿದ್ದಾರೋ ಅದಕ್ಕೆ ಏನಾದರೂ ಒಂದು ಪರಿಹಾರ ಕೊಡಿ. ಇವೆಲ್ಲದರ ಬಗ್ಗೆ ಒಂದು ನ್ಯಾಯಾಂಗ ವಿಚಾರಣೆ ಮಾಡದೇ ಹೋದರೆ ಈ ಪ್ರಶ್ನೆ ಯಾವರೀತಿಯಾಗಿಯೂ ಬಗೆಹರಿಯುವುದಿಲ್ಲ ಎಂದು ಸ್ಪಷ್ಟವಾಗಿ ನಾನು ಹೇಳುತ್ತೇನೆ. ಅವರು ತೆಗೆದುಕೊಂಡಿರತಕ್ಕಂಥಾ ನಿರ್ಣಯಗಳು ಯಾವುವು

ಎಂದರೆ ಯಾರು ಜೈಲಿನಲ್ಲಿ ಕೊಳೆಯುತ್ತಿದ್ದಾರೋ ಅವರ ಬಿಡುಗಡೆಯಾಗಬೇಕು, ಯಾರ ಮೇಲೆ ಕೇಸುಗಳನ್ನು ಹಾಕಿದ್ದಾರೋ, ಯಾರ್ಯಾರ ಮೇಲೆ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೋ ಅದನ್ನು ವಾಪಸ್ಸು ತೆಗೆದುಕೊಂಡು ಅವರು ಹಾಕಿಕೊಂಡಿರತಕ್ಕಂಥಾ ಕಾರ್ಯಕ್ರಮಕ್ಕೆ ಸಂಪೂರ್ಣ ಬೆಂಬಲ ಕೊಟ್ಟು ಅದರ ಬಗ್ಗೆ ಸರಿಯಾದ ಕ್ರಮ ತೆಗೆದುಕೊಳ್ಳದೇ ಹೋದರೆ ಆಗ ಅವರಿಗೆ ಬೇರೆ ದಾರಿಯೇ ಇಲ್ಲ. ಮಾನ್ಯ ಜೆ. ಎಚ್. ಪಟೇಲರು ಹೇಳಿದ ಹಾಗೆ ಈ ಸದನದ ಒಳಗೇ ಅಲ್ಲ ಹೊರಗೂ ಕೂಡ ಆ ಚಳುವಳಿಯಲ್ಲಿ ನಾವೂ ಕೂಡ ಭಾಗಿಯಾಗಬೇಕಾಗುತ್ತದೆಂದು ತಮ್ಮ ಗಮನಕ್ಕೆ ತರುತ್ತೇನೆ. ಆದುದರಿಂದ ಈ ನಿಲುವಳಿ ಸೂಚನೆಗೆ ಅನುಮತಿ ಕೊಟ್ಟು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಚಿಕ್ಕಪೇಟೆ).—ಮಾನ್ಯ ಅಧ್ಯಕ್ಷರೇ. ಈ ಅಧಿನಿಯಮದ ೫೦ನೇ ಅಧಿನಿಯಮದ ಪ್ರಕಾರ ಕೊಟ್ಟಿರತಕ್ಕಂಥಾ ನಿಲುವಳಿ ಸೂಚನೆ ಬಗ್ಗೆ ಪೂರ್ವಭಾವಿಯಾಗಿ ಸಮ್ಮತಿಯನ್ನು ಕೊಡಬೇಕೆಂದು ತಮ್ಮ ಮುಂದೆ ಇಟ್ಟಿದ್ದೇವೆ. ಅದಕ್ಕೆ ತಾವೇ ಆದೇಶ ಕೊಟ್ಟಿದ್ದೀರಿ. ಒಂದು ವಿಷಯ ಏನೆಂದರೆ ಮಾನ್ಯ ಮುಖ್ಯ ಮಂತ್ರಿಗಳು ಈ ದಿವಸ ಸಭೆಗೆ ಬಂದನಂತರ ಏನು ನಿಲುವಳಿ ಸೂಚನೆ, ಗಂಗಾವತಿಯಲ್ಲಿ ಪೆಟ್ರೋಲ್ ಬಂಕ್‌ಗೆ ಬೆಂಕಿ ಹಚ್ಚಿದ್ದಾರೆ ಅಷ್ಟೇ ತಾನೇ ಎಂದು ಹೇಳಿದ್ದಾರೆ. ಅದರ ಬಗ್ಗೆ ಅಷ್ಟು ಲಘುವಾಗಿ ಅವರು ಮಾತನಾಡುವುದಕ್ಕೆ ಪ್ರಾರಂಭ ಮಾಡಿದರು ಎಂದು ನಾನು ಅಂದುಕೊಳ್ಳುತ್ತೇನೆ. ಆದರೆ ಈ ದಿನ ಪ್ರಾತಃಕಾಲ ಅವರು ಪತ್ರಿಕೆಗಳಲ್ಲಿ ಬಂದಿರತಕ್ಕಂಥಾ ವಿಷಯಗಳನ್ನು ತೀವ್ರವಾಗಿ ಗಮನಿಸಿದ್ದರೆ ಈ ಮಾತನ್ನು ಅವರು ಹೇಳುತ್ತಾ ಇರಲಿಲ್ಲ ಎಂದು ನಾನು ಅಂದುಕೊಂಡಿದ್ದೇನೆ. ಕೆಲವು ಪತ್ರಿಕೆಗಳು ಇದರ ವಿಚಾರವನ್ನು ಪ್ರಸ್ತಾಪ ಮಾಡಿಲ್ಲಾ, ನಾನು ಅದನು ಒಪ್ಪಿಕೊಳ್ಳುತ್ತೇನೆ. ಆದರೆ ಜನಸಾಮಾನ್ಯ ರೈತರ ಕಾರ್ಮಿಕರ ಹಿತದೃಷ್ಟಿಯನ್ನಿಟ್ಟುಕೊಂಡು ಈ ಚಳುವಳಿ ಬಗ್ಗೆ ಸಾಕಷ್ಟು ವಿವರಣಾತ್ಮಕ ದೃಷ್ಟಿಯಿಂದ ಸುದ್ದಿಯನ್ನು ಈ ಪತ್ರಿಕೆಗಳು ಕೊಟ್ಟಿವೆ. ರಾಜ್ಯದಲ್ಲಿ ಎಲ್ಲಾ ಕಡೆಗಳಲ್ಲೂ ಬೆಂಗಳೂರು ಹತ್ತಿರಕ್ಕೂ ಬರುತ್ತಾ ಇದೆ. ಈ ರೈತರ ಚಳುವಳಿ ನಡೆಯುತ್ತಾ ಇದೆ. ಎನ್ನುವುದನ್ನು ಮಾನ್ಯ ಮುಖ್ಯಮಂತ್ರಿಗಳು ಗಮನದಲ್ಲಿಟ್ಟುಕೊಂಡಿದ್ದರೆ ಈ ಮಾತನ್ನು ಹೇಳುತ್ತಾ ಇರಲಿಲ್ಲ ಎಂದು ನಾನು ಅಂದುಕೊಂಡಿದ್ದೇನೆ. ಶನಿವಾರ ದಿವಸ ಅವರು ತಮ್ಮ ಹೇಳಿಕೆಯಲ್ಲಿ ಎಲ್ಲಾ ಕಡೆಯೂ ಶಾಂತ ಪರಿಸ್ಥಿತಿ ಬರುತ್ತಾ ಇದೆ ಎಂದು ಹೇಳಿದರು ಈ ದಿನ ಪತ್ರಿಕೆ ನೋಡಿದರೆ ಗಂಗಾವತಿಯಲ್ಲಿ ೪ ಸಾವು, ೯ ಕಡೆಗಳಲ್ಲಿ ಬಂದ್‌ಗೆ ಕರೆ. ಬಾಗಲಕೋಟೆಯಲ್ಲಿ ಗಲಭೆ, ಗುಲ್ಬರ್ಗದಲ್ಲಿ ರೈತರ ಚಳುವಳಿ, ೩ ಜಿಲ್ಲೆಗಳಲ್ಲಿ ನಿಷೇಧಾಜ್ಞೆ, ಮಂಡ್ಯ ಜಿಲ್ಲೆಯ ರೈತ ನಾಯಕರ ಸಭೆ ಸೇರುವುದು ಮತ್ತು ಆ ಭಾಗದಿಂದ ಬಂದಿರತಕ್ಕಂಥಾ ಶಾಸಕರ ರಾಜಿನಾಮೆಗೆ ಒತ್ತಾಯ, ಇದನ್ನೆಲ್ಲಾ ದಪ್ಪ ಅಕ್ಷರದಲ್ಲಿ ಬರೆದಿದ್ದಾರೆ. ಇದನ್ನು ಮಾನ್ಯ ಮುಖ್ಯಮಂತ್ರಿಗಳು ಗಮನಿಸಿದ್ದಾರೋ ಇಲ್ಲವೋ ಗೊತ್ತಿಲ್ಲ. ಇದರ ಬಗ್ಗೆ ಅವರ ಗುಪ್ತವರದಿಗಾರರು ಏನು ಇದ್ದಾರೋ ಅವರ ಕೈಗೆ ಸೇರಿದೆಯೋ ಇಲ್ಲವೋ ಗೊತ್ತಿಲ್ಲ. ಇದನ್ನು ಗಮನಿಸಿದ್ದರೆ ಅವರು ಬೆಳಗ್ಗೆ ಹೇಳುವಂಥಾ ಮಾತನ್ನು ಹೇಳುತ್ತಾ ಇರಲಿಲ್ಲಾ ಎಂದು ನಾನು ಅಂದುಕೊಂಡಿದ್ದೇನೆ. ಆದರೆ ಅಧ್ಯಕ್ಷರೇ ನನ್ನ ಒಂದು ನಿಲುವಳಿ ಸೂಚನೆ ಪ್ರಕಾರ ಬರೇ ಗಂಗಾವತಿಯಲ್ಲಿ ನಡೆದಂಥಾ ಒಂದು ವಿಷಯಕ್ಕೆ ಮಾತ್ರ ಅದು ಸೀಮಿತವಾಗಿಲ್ಲ ಎನ್ನುವುದನ್ನು ತಮ್ಮ ಗಮನಕ್ಕೆ ತಂದು ನಾನು ಯಾವರೀತಿ ನಿಲುವಳಿ ಸೂಚನೆಯನ್ನು ತಮಗೆ ಕಳುಹಿಸಿದ್ದೇನೆ ಅನ್ನುವುದನ್ನು ಗೊತ್ತು ಪಡಿಸುತ್ತೇನೆ. ಅದು ಈ ರೀತಿ ಇದೆ.

"The farmers in the State have been peacefully agitating for the redressal of their grievances for some time now and the police have opened fire on the farmers and several people have been shot dead and scores of people have been injured and arrested. The situation has been assuming serious proportion and spreading throughout the State. The State Government has miserably failed to concede all the demands of the farmers. Hence the motion."

ಆದುದರಿಂದ ಈ ನಿಲುವಳಿ ಸೂಚನೆಯಲ್ಲಿ ಸಾರಭೂತವಾದ ಶಕ್ತಿ ಇದೆ, ಇದರ ಮೂಲ ಉದ್ದೇಶ ಈ ರಾಜ್ಯದ ಬಡ ರೈತರ ಹೋರಾಟದ ಬಗ್ಗೆ, ಅನ್ಯಾಯದ ಬಗ್ಗೆ ಮತ್ತು ಬೆಲೆ ಏರಿಕೆ ಬಗ್ಗೆ ಮತ್ತು ಹೋರಾಟದ ಬಗ್ಗೆ ಇದೆ. ಈ ನಿಲುವಳಿ ಸೂಚನೆಯಲ್ಲಿ ಅತ್ಯಂತ ಸಾರಭೂತವಾಗಿರತಕ್ಕಂಥಾ ವಿಷಯ ಅಡಗಿದೆ ಎನ್ನುವ ಮಾತನ್ನು ನಾನು ಹೇಳಬಯಸುತ್ತೇನೆ.

(SRI H. T. KRISHNAPPA, in the Chair)

ಇದರ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಲು ನಾವು ತಮ್ಮ ಅನುಮತಿ ಕೇಳಿದ್ದೇವೆ. ಆದಕಾರಣ ಈ ಮನೆಯ ಎಲ್ಲ ಮಾನ್ಯ ಸದಸ್ಯರೂ ಇದರ ಕಡೆಗೆ ಗಮನಹರಿಸಬೇಕೆಂದು ಅನನ್ಯಭಕ್ತಿಭಾವನೆಯಿಂದ ಅರಿಕೆ ಮಾಡಿಕೊಳ್ಳುತ್ತೇನೆ. ಸಾಮಾನ್ಯವಾಗಿ ಇಂತಹ ಒಂದು ಸನ್ನಿವೇಶ ನಮ್ಮ ರಾಜ್ಯದಲ್ಲಿ ಹಿಂದೆಂದೂ ಕಂಡುಬಂದಿರಲಿಲ್ಲ. ಆದರೆ ಈಗ ಈ ರೈತರು, ಕಾರ್ಮಿಕರು ಮತ್ತು ಸಾಮಾನ್ಯ ಜನರು ತಮ್ಮ ಒಂದು ಕೋಪದ ಹಾಗೂ ಉದ್ವೇಗದ ಜ್ವಾಲೆಯನ್ನು ಈ ರೀತಿಯಿಂದ ಹೊರಗೆಡಹಿದ್ದಾರೆ. ಇದನ್ನು ಮಾನ್ಯ ಗುಂಡೂರಾವ್ ಅವರು ಗಮನಿಸಬೇಕೆಂದು ಹೇಳುತ್ತೇನೆ. ನಮ್ಮ ರಾಜ್ಯದ ಅರ್ಧ ಭಾಗದಲ್ಲಿ ಇವೊತ್ತು ನಿಷೇಧಾಜ್ಞೆ ಜಾರಿಯಲ್ಲಿದೆ. ಈ ರೀತಿ ಯಾವಾಗ ಆಗಿತ್ತು ಎಂದು ನಾನು ತಮ್ಮನ್ನು ಕೇಳುತ್ತೇನೆ ? ಇಲ್ಲಿ ಎಲ್ಲರೂ ರೈತರಿಂದಲೇ ಆರಿಸಿ ಬಂದಿರುವುದು ಎಂದು ಹೇಳುತ್ತಾರೆ. ನಾನೂ ಸಹ ರೈತರ ಕಡೆ ಯಿಂದ ಒಂದವನೇ ಆಗಿದ್ದೇನೆ. ಏಕೆಂದರೆ, ಮೂಲವಾಗಿ ನಾನು ಹಳ್ಳಿಯಿಂದ ಬಂದವನೇ ಆಗಿದ್ದೇನೆ, ಹೀಗೆ ಶೇಕಡಾ ೯೦ರಷ್ಟು ಜನರು ಇಲ್ಲಿ ತಾವು ರೈತರ ಪ್ರತಿನಿಧಿಗಳೆಂದು ಸಾರಿಸಾರಿ ಹೇಳತಕ್ಕಂಥ ಮಾತು ಇಲ್ಲಿ ನಡೆಯುತ್ತಿದೆ. ಆದರೆ ಇವೊತ್ತು ಈ ದೇಶದ ರೈತರ ರಕ್ತವನ್ನು ಹೀರಿ ಅವರನ್ನು ಭಸ್ಮ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೀರಿ. ಕಳೆದ ನೂರಾರು ವರ್ಷಗಳಿಂದಲೂ ಸಹ ಯಾವ ಒಂದು ಸರ್ಕಾರವೂ ರೈತನ ಏಳಿಗೆಗೋಸ್ಕರ ಹಾಗೂ ಆತನ ಸಹಾಯಕ್ಕೋಸ್ಕರ ಹೋಗಿಲ್ಲ. ನಮಗೆ ಅನ್ನ ಕೊಡುವವನು ಅವನು. ಜೀವನಾಧಾರವಾದಂಥ ವಸ್ತುಗಳನ್ನು ಕೊಡುವವನು ರೈತ. ರೈತನು ನೇಗಿಲಯೋಗಿ, ಕರ್ಮಯೋಗಿ ಎಂಬುದಾಗಿ ಈ ದೇಶದ ರೈತನನ್ನು ರಂಜನೀಯವಾದಂಥ ಭಾಷೆಯಲ್ಲಿ ಪುಂಖಾನುಪುಂಖವಾಗಿ ಹೊಗಳೀ ಹೊಗಳಿ ಅವರು ತನ್ನ ಬಾಯಲ್ಲಿ ಜೊಲ್ಲು ಸುರಿಸುವಂತೆ ಮಾಡಿದ್ದೀರಿ, ಆದರೆ ಇದೇ ರೈತನನ್ನು ಇವೊತ್ತು ಗುಂಡಿಟ್ಟು ಕೊಲ್ಲುತ್ತಿದ್ದೀರಿ, ಅವನ ರಕ್ತ ಹರಿಯಲು ಅವಕಾಶ ಮಾಡಿಕೊಟ್ಟಿದ್ದೀರಿ. ಈಗಲಾಟೆಯೆಲ್ಲಾ ಮಧ್ಯವರ್ತಿ ಜನರಿಂದಲೇ ನಡೆಯುತ್ತಿರುವುದು ಎಂದು ಹೇಳಿದ್ದಾರೆ. ಕಳೆದ ೩೦ ವರ್ಷ ಗಳಿಂದ ಇದೇ ರೀತಿ ನಡೆದುಕೊಂಡು ಬಂದಿದೆ ಎಂದು ಹೇಳಿದ್ದಾರೆ. ಇಂತಹ ಒಂದು ಹೇಳಿಕೆ ಮಾನ್ಯ ಮುಖ್ಯಮಂತ್ರಿಗಳ ಬಾಯಲ್ಲಿ ಬರುತ್ತದೆಂದು ನಾನು ಅಂದುಕೊಂಡಿರಲಿಲ್ಲ. ಏಕೆಂದರೆ, ಮಧ್ಯವರ್ತಿ ಜನರಿಂದಲೇ ಇದು ನಡೆಯುತ್ತಿದ್ದರೆ. ಅದನ್ನು ತಡೆಗಟ್ಟುವ ಶಕ್ತಿ ಸರ್ಕಾರಕ್ಕೆ ಇದೆ. ಆದರೂ ಸಹ ಇಂತಹ ಅನ್ಯಾಯವನ್ನು ತಡೆಗಟ್ಟದೇ ಹೋದರೆ, ತಮ್ಮ ಒಂದು ಅಸಹಾಯಕತೆಯನ್ನು ಮುಖ್ಯ ಮಂತ್ರಿಗಳು ತೋರಿಸಿರುವುದನ್ನು ನೋಡಿದರೆ, ಹರಕೊಲ್ಲಲ್ ಪರಕಾಯ್ವನೇ ಎಂದು ಹೇಳಿದಂತೆ ಆಗಿದೆ. ಈ ನಿಲುವಳಿ ಸೂಚನೆಯಲ್ಲಿರುವ ಮೂಲಭೂತವಾದಂಥ ಪ್ರಶ್ನೆಯನ್ನು ಸರ್ಕಾರದವರು ದಯವಿಟ್ಟು ಯೋಜನೆ ಮಾಡಿ ನೋಡಬೇಕು. ಇದಕ್ಕಿಂತಲೂ ಉತ್ತಮವಾದಂಥ ನಿಲುವಳಿ ಸೂಚನೆಯನ್ನು ಈ ಅಧಿನಿಯಮದ ಪ್ರಕಾರ ತರುವುದಕ್ಕೆ ಸಾಧ್ಯವಿಲ್ಲ. ಕೆಲವರು ಬೇಕಾದರೆ ಇದರ ವಿರುದ್ಧ ಪ್ರತಿವಾದ ಮಾಡ ಬಹುದು. ಆದರೆ ಮುಖ್ಯವಾದ ಸಮಸ್ಯೆ ಏನಿದೆ ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕು. ಇದರಲ್ಲಿ ರೈತರ ಹಾಗೂ ರೈತ–ಕಾರ್ಮಿಕರ ಜೀವಂತ ಪ್ರಶ್ನೆ ಹಾಗು ಅವರ ಹುಟ್ಟು ಸಾವಿನ ಪ್ರಶ್ನೆ ಅಡಕವಾಗಿದೆ. ಇಂತಹ ಒಂದು ಪ್ರಶ್ನೆಯನ್ನು ಮದ್ದುಗುಂಡುಗಳಿಂದ ಬಗೆಹರಿಸುತ್ತೇವೆ, ಪೋಲೀಸ ರಿಂದ ದಮನ ಮಾಡುತ್ತೇವೆ. ಅವರನ್ನೆಲ್ಲಾ ಬಡಿದುಹಾಕುತ್ತೇವೆ, ಇದನ್ನೆಲ್ಲಾ ಸಹಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಹೇಳತಕ್ಕಂಥ ಬಡಾಯಿ ಮಾತುಗಳನ್ನು ಬಿಟ್ಟುಬಿಡಿ. ಏಕೆಂದರೆ ನಮ್ಮ ಜನರ ಪ್ರತಿಭಟನೆ ಮುಂದೆ ಬ್ರಿಟೀಷ ಸಾಮ್ರಾಜ್ಯವೇ ಉಳಿಯಲಿಲ್ಲ, ಇನ್ನು ಗುಂಡೂರಾಯರ ಸರ್ಕಾರ ಎಷ್ಟು ದಿವಸ ಇರುತ್ತದೆ ? ಈಗ ರೈತರು ಕೋಪದಿಂದ ಭುಗಿಲೆದ್ದಿದ್ದಾರೆ, ಸಿಡಿದೆದ್ದಿದ್ದಾರೆ. ನಮ್ಮನ್ನು ಆಗಲೀ ಅಥವಾ ನಿಮ್ಮನ್ನು ಆಗಲೀ ಕೇಳಿ ಅವರು ಚಳುವಳಿ ಮಾಡುತ್ತಿಲ್ಲ, ನರಗುಂದ, ನವಲಗುಂದದಲ್ಲಿ ರೈತ ಕಾರ್ಮಿಕರೇ ವಿನಾಯಕರಾಗಿ ಜನರ ಮುಂದಾಳಾಗಿದ್ದಾರೆ. ಇದರಲ್ಲಿ ಭಾಗವಹಿಸಬೇಕೆಂದು ನಿಮಗೂ ಆಮಂತ್ರಣ ಕಳುಹಿಸಿದ್ದರು. ಮತ್ತು ಎಲ್ಲರಿಗೂ ಕಳುಹಿಸಿದ್ದರು. ನಿಮ್ಮಲ್ಲಿ ಎಷ್ಟು ಜನರು ಹೋಗಿ ದ್ದರು ? ಈ ರೈತರ ಸಮಸ್ಯೆಗಳ ಬಗ್ಗೆ ಮಾತನಾಡಲು ನಾನು ಶ್ರೀ ಬಿ. ಪಿ. ಪಾಟೀಲ್ ಅವರನ್ನು ಕಳುಹಿಸಿಕೊಟ್ಟಿದ್ದೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಅವರು ಎಲ್ಲಿ ಹೋಗಿದ್ದಾರೆ ?

ಆ ಪ್ರದೇಶದಿಂದ ಆರಿಸಿ ಬಂದಿರುವ ಶಾಸಕರೆಲ್ಲರೂ ರಾಜೀನಾಮೆ ಕೊಡಬೇಕೆಂದು ರೋಣ ಹಾಗೂ ಹುಬ್ಬಳ್ಳಿಯಲ್ಲಿರುವ ಜನರು ಒತ್ತಾಯ ಮಾಡಿದ್ದಾರೆ. ಆದರೆ ನಮ್ಮನ್ನು ಏನೂ ಕೇಳಿಲ್ಲ. ನಮ್ಮನ್ನು ಕೇಳುವುದೂ ಇಲ್ಲ. ರೈತರ ಸಮಸ್ಯೆಗಳು ಬಗೆಹರಿಯಬೇಕಾದರೆ ಮೊದಲು ಸರ್ಕಾರದವರು ರೈತರ ಮುಖಂಡರನ್ನು ಕರೆಸಿ ಮಾತನಾಡಬೇಕು. ಆದರೆ ಇವರು ಅವರನ್ನು ಸದೆಬಡಿಯಲು ಹೊರಟ್ಟಿದ್ದಾರೆ ಇದರಿಂದ ಅವರ ಸಮಸ್ಯೆ ಇತ್ಯರ್ಥವಾಗುವುದಿಲ್ಲ. ಮುಖ್ಯಮಂತ್ರಿಗಳು ವಿರೋಧ ಪಕ್ಷದವರೊಡನೆ ಇದರ ಬಗ್ಗೆ ಸಮಾಲೋಚನೆ ಮಾಡಿದೆ ಎಂದು ಹೇಳಿದ್ದಾರೆ. ರೈತರ ಪರವಾಗಿ ವಕಾಲತ್ತು ವಹಿಸಲು ಅವರು ವಿರೋಧಪಕ್ಷದವರಿಗೆ ಏನಾದರು ಅಧಿಕಾರ ಕೊಟ್ಟಿದ್ದರೇನು ? ಮುಖ್ಯಮಂತ್ರಿಗಳು ಮಾತುಕತೆ ಮಾಡಲು ರೈತರನ್ನು ಏತಕ್ಕೆ ಕರೆಸಲಿಲ್ಲ ? ಅವರ ಜೊತೆಯಲ್ಲಿ ಏತಕ್ಕೆ ಸಂಧಾನಮಾಡಲಿಲ್ಲ ? ಆ ರೈತರ ಮೇಲೆ ಗುಂಡು ಹಾರಿಸಿದ್ದೀರಿ, ಲಾಠಿಚಾರ್ಜ್ ಮಾಡಿದ್ದೀರಿ, ಕೊನೆಗೆ ಎಲ್ಲರನ್ನೂ ತೆಗೆದುಕೊಂಡು ಹೋಗಿ ಜೈಲಿನಲ್ಲಿ ಹಾಕಿದ್ದೀರಿ. ಇವೊತ್ತಿನದಿವಸ ರೈತರು ತಮ್ಮ ಮನೆ ಮಠಗಳನ್ನೆಲಾ ಕಳೆದುಕೊಂಡು ಜೈಲಿನಲ್ಲಿ ಕೊಳೆಯುತ್ತಿದ್ದಾರೆ. ಯಾರನ್ನು ಕೇಳಿ ಇದನ್ನೆಲ್ಲಾ ಮಾಡಿದಿರಿ ? ಒಟ್ಟಿನಲ್ಲಿ ತಿಪ್ಪೆ ಸಾರಿಸಲು ಪ್ರಯತ್ನ ಮಾಡುತ್ತಿದ್ದಾರೆ. ಇದೇ ಇವರು ಮಾಡಿರುವ ಪ್ರಯತ್ನ ? ಇದರಿಂದ ನೀವು ಸಫಲರಾಗುವುದಿಲ್ಲ. ಈ ಜನರನ್ನು.........

ಛೇರ್‌ಮನ್ — ತಾವು ಕಾನೂನು ಪಂಡಿತರಿದ್ದೀರಿ, ಆದಕಾರಣ ತಾವು ನಿಲುವಳಿ ಸೂಚನೆಗೆ ಸಂಬಂಧಪಟ್ಟಂತೆ ಮಾತ್ರ ಪ್ರಸ್ತಾಪ ಮಾಡಿ.

ಶ್ರೀ ವಿ. ಎ. ಪತ್ತಿಕಟ್ಟಿ.—ರೋಣದ ಶಾಸಕರು ರಾಜಿನಾಮೆ ಕೊಡಬೇಕೆಂದು ಅಲ್ಲಿನ ಜನರು ಕೇಳಿದ್ದಾರೆಂದು ಈ ಮಾನ್ಯ ಸದಸ್ಯರು ಹೇಳಿದರು. ಆದರೆ ಅದು ಅಪ್ಪಟ ಸುಳ್ಳು. ಯಾರೂ ಆ ರೀತಿ ಕೇಳಿಲ್ಲ. ನಾವೂ ಸಹ ಮೊದಲಿನಿಂದಲೂ ರೈತರ ಪರವಾಗಿಯೇ ಹೋರಾಟ ಮಾಡುತ್ತಿದ್ದೇವೆ. ಈಗ ಅಲ್ಲಿ ಎಲ್ಲ ಪಕ್ಷಗಳ ನಾಯಕರುಸೇರಿಕೊಂಡು ಚರ್ಚೆ ಮಾಡಿ ತಮ್ಮ ಸಮಸ್ಯೆಯ ಬಗ್ಗೆ ಸರ್ಕಾರದ ಗಮನ ಸೆಳೆಯಬೇಕೆಂದು ನಮಗೆ ಟೆಲಿಗ್ರಾಂ ಕೊಟ್ಟಿದ್ದಾರೆ. ಆದರಂತೆ ನಾವು ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದೇವೆ. ಆದಕಾರಣ ರೋಣದ ಜನರು ಆ ರೀತಿ ಹೇಳಿಕೆ ಕೊಟ್ಟಿಲ್ಲ. ಯಾರೋ ರಾಜಕೀಯವಾಗಿ ಹುಬ್ಬಳ್ಳಿಯಿಂದ ಆ ರೀತಿ ಪತ್ರಿಕೆಗಳಿಗೆ ಹೇಳಿಕೆಯನ್ನು ಕೊಟ್ಟಿದ್ದಾರೆ.

(ನಾಲ್ಕೈದು ಜನ ಮಾನ್ಯ ಸದಸ್ಯರು ಎದ್ದು ನಿಂತು ಮಾತನಾಡಲು ಪ್ರಾರಂಭ ಮಾಡಿದರು)

ಛೇರ್‌ಮನ್.—ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಈಗ ಮಾನ್ಯ ಸದಸ್ಯರು ಪ್ರಸ್ತಾಪ ಮಾಡುತ್ತಿರುವ ವಿಚಾರ ಪ್ರಾಮುಖ್ಯವಾದುದು ಎಂಬ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ಇದೇ ಕಾರಣದಿಂದ ಇಲ್ಲಿ ಇದರ ಬಗ್ಗೆ ಬಹಳ ಹೊತ್ತಿನ ಕಾಲ ಚರ್ಚೆಯಾಗಿದೆ. ಈ ಸದನದ ಎಲ್ಲ ಸದಸ್ಯರು ಈ ಬಗ್ಗೆ ಬೆಳಕು ಚೆಲ್ಲಲು ಪ್ರಯತ್ನ ಮಾಡಿದ್ದಾರೆ. ಇದಕ್ಕೆ ಮುಖ್ಯ ಮಂತ್ರಿಗಳು ಕೊಟ್ಟ ಉತ್ತರ ಸಮಾಧಾನಕರವಾಗಿಲ್ಲವೆಂಬ ಕಾರಣದಿಂದ ಇನ್ನೂ ಹೆಚ್ಚಿನ ಮಟ್ಟದಲ್ಲಿ ಇದರ ಮೇಲೆ ಚರ್ಚೆ ನಡೆಯುತ್ತಿದೆ. ಅಲ್ಲಿನ ಪ್ರಕ್ಷುಬ್ಧ ವಾತಾವರಣವನ್ನು ತಿಳಿಗೊಳಿಸುವ ಬಗ್ಗೆ ತಾವು ಈಗ ಸಲಹೆಗಳನ್ನು ಕೊಡುತ್ತಿದ್ದೀರಿ ಅದನ್ನು ಈ ಸದನ ಸ್ವಾಗತ ಮಾಡುತ್ತದೆ. ಆದರೆ ತಾವು ಮಾತನಾಡುವಾಗ ಅದರಲ್ಲಿ ರಾಜಕೀಯವನ್ನು ಬೆರೆಸಿ ಸದಸ್ಯರು ಹೀಗೆ ಮಾಡಬೇಕು, ಹಾಗೆ ಮಾಡಬೇಕು ಎಂದು ಇಲ್ಲಿ ಪಕ್ಷಭೇಧದ ವಿಚಾರವನ್ನು ತರಬೇಡಿ. ಇದನ್ನು ಬಿಟ್ಟು ಬೇರೆ ವಿಚಾರಗಳನ್ನು ಹೇಳಿ.

೨-೦೦ ಪಿ.ಎಂ.

ಶ್ರೀ ವಿ. ಎ. ಪತ್ತಿಕಟ್ಟಿ.—ರೈತರ ಸಮಸ್ಯೆ ಬಗ್ಗೆ ಬೇಕಾದರೆ ಪ್ರೊಸೀಡಿಂಗ್ಸ್ ತೆಗೆದುನೋಡಿ. ನಾವು ಯಾವುದೇ ಪಕ್ಷ ಭೇದವಿಲ್ಲದೆ ಮಾತನಾಡಿದ್ದೇವೆ.

ಶ್ರೀ ಪಿ. ಕೆ. ಕಳ್ಳಿಗುಡ್ಡ.—ಬೇರೆಯವರಿಗೆ ಮಾತನಾಡುವುದಕ್ಕೆ ಟೈಂ ಸಿಕ್ಕುವುದಿಲ್ಲ, ೩ ಗಂಟೆಯಾಗುತ್ತದೆ, ಎಲ್ಲಿ ಗಲಭೆಯಾಗಿದೆಯೋ, ಎಲ್ಲಿ ಗೋಲಿಬಾರ್ ಆಗಿದೆಯೋ ಅಲ್ಲಿನ ಶಾಸಕರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

ಛೇರ್ಮನ್,—ಅಡ್ಜರ್ನಮೆಂಟ್ ಮೋಷನ್‌ಗೆ ಸಂಬಂಧಪಟ್ಟಂತೆ ಯಾರು ಸಹಿ ಹಾಕಿದ್ದಾರೊ ಆ ಸದಸ್ಯರು ಇದು ಅಡ್ಜರ್ನಮೆಂಟ್ ಮೋಷನ್ನಾಗಿ ಚರ್ಚೆಯಾಗಬೇಕು ಎಂದು ಸಮರ್ಥನೆ ಮಾಡುವುದಕ್ಕೆ ಅವಕಾಶಕೊಡಬೇಕಾಗುತ್ತದೆ.

ಶ್ರೀ ಜಿ. ಕೆ. ತಕ್ಕೇಡ್.—ಅದಕ್ಕೆ ಮಿತಿ ಹಾಕಿರಿ.

ಛೇರ್ಮನ್.—ನಿಮಗೂ ಅವಕಾಶ ಕೊಡುತ್ತೇನೆ.

ಶ್ರೀ ಪಿ. ಕೆ. ಕಳ್ಳಿಗುಡ್ಡ.—ಬಾಗಲಕೋಟೆ, ಗೋಣ, ಘಟಪ್ರಭ ಕೆಳಗೆ ಬರುವಂಥ ಶಾಸಕರಿಗೆ ಅವಕಾಶ ಕೊಡಿ, ಇದರ ಬಗ್ಗೆ ಬೆಂಗಳೂರಿನ ಶಾಸಕರಾದ ಲಕ್ಷ್ಮೀಸಾಗರ್ ರವರು ಮಾತನಾಡು ತ್ತಿದ್ದಾರೆ. ಎಲ್ಲಾ ಪಾರ್ಟಿಯವರೂ ಹೇಳಲಿ. ಆ ಭಾಗದವರಿಗೆ ಅವಕಾಶ ಕೊಡಿ.

ಶ್ರೀ ಆರ್. ಗುಂಡೂರಾವ್.—ಮಾನ್ಯ ಸದಸ್ಯರಾದ ಲಕ್ಷ್ಮೀಸಾಗರ್ ರವರು ಸ್ವಲ್ಪ ತಮ್ಮ ವ್ಯಾಪ್ತಿಯನ್ನು ಮೀರಿ, ರಾಜಕೀಯವಾಗಿ ಶಾಸಕರ ರಾಜೀನಾಮೆ ಕೇಳಿರುವುದರ ಬಗ್ಗೆ ಹೇಳಿದ್ದಾರೆ. ರಾಜಿನಾಮೆ ಕೇಳಿದ್ದಾರೋ ಏನೊ ಒಂದು ಎಲೆಕ್ಷನ್ ಭಾಷಣ ಶುರು ಮಾಡಿದರು. ಎರಡೂವರೆ ಗಂಟೆ ಯಿಂದ ಸುಮ್ಮನೆ ಕೇಳಿಕೊಂಡು ಕೂತಿದ್ದೇನೆ. ಆದುದರಿಂದ ಯಾತಕ್ಕೋಸ್ಕರ ಅಡ್ಜರ್ನಮೆಂಟ್ ದೋಷನ್ ಆಗಬೇಕು, ಅಡ್ಜರ್ನಮೆಂಟ್ ಮೋಷನ್ ಆಗಬೇಕೋ ಬೇಡವೋ ಅದನ್ನು ಹೇಳಲಿ. ರೋಣದ ಸದಸ್ಯರು ರಾಜೀನಾಮೆ ಕೇಳಿದರೆ, ಮುಂದೆ ಅವರನ್ನು ಆರಿಸುವುದಿಲ್ಲ, ಅದನ್ನೆಲ್ಲಾ ಏಕೆ ಹೇಳ ಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾವು ಇದರಲ್ಲಿ ರಾಜಕೀಯ ತರುವುದು ಬೇಡ.

ಶ್ರೀ ಮಲ್ಲಣಗೌಡ ಪಾಟೀಲ. —ಮಾನ್ಯ ಸದಸ್ಯರು ಪೇಪರ್ ನೋಡಿ ಹೇಳುವುದು ಬೇಡ.

ಛೇರ್ಮನ್.—ಒಬ್ಬ ಸದಸ್ಯರು ನಿಂತುಕೊಂಡು ಮಾತನಾಡುತ್ತಿರವಾಗ ಇನ್ನೊಬ್ಬ ಸದಸ್ಯರು ನಿಂತು ಕೊಳ್ಳಬಾರದು. Do you want to convert this House as a 'fish market'? When a member is on his legs it is not fair on the part of other members to intervene and try to distrub his thoughts.

ಶ್ರೀ ಎಸ್. ಆರ್, ಬೊಮ್ಮಾಯಿ.—ಮಾನ್ಯ ಲಕ್ಷ್ಮೀಸಾಗರ್ ರವರು ಹೇಳಿದ್ದು ಏನೆಂದರೆ, ಪತ್ರಿಕೆ ಯಲ್ಲಿ ರೋಣದ ರೈತರ ನಿರ್ಣಯದ ಮಾತು ಬಂದಿದೆ. ಆ ಭಾಗದ ಶಾಸಕರು ರಾಜಿನಾಮೆ ಕೊಡಬೇಕು ಎಂದು ಕೇಳಿರುವುದು ಪತ್ರಿಕೆಯಲ್ಲಿ ಬಂದಿದೆ. ನಮ್ಮದೂ ಕೇಳಿದ್ದಾರೆ, ಆ ಭಾಗದ ಶಾಸಕರು ರಾಜಿನಾಮೆ ಕೊಡಬೇಕು ಅಂದಾಗ ನಾವೆಲ್ಲಾ ಕೊಡಬೇಕು. ಪತ್ರಿಕೆಯಲ್ಲಿ ಬಂದಿರುವ ವಿಷಯವನ್ನು ಮಾನ್ಯ ಲಕ್ಷ್ಮೀ ಸಾಗರ್ ರವರು ಹೇಳುತ್ತಾ ಇದ್ದಾರೆ ಅಷ್ಟೆ.

ಛೇರ್ಮನ್.—ವಿವಾದಕ್ಕೆ ಆಸ್ಪದ ಕೊಡತಕ್ಕ ವಿಷಯವನ್ನು ಕೈಬಿಟ್ಟು ಎಲ್ಲರೂ ಒಪ್ಪತಕ್ಕ ವಿಚಾರ ಗಳನ್ನು ಹೇಳಿ.

ಶ್ರೀ ಮಲ್ಲನಗೌಡ ಪಾಟೀಲ.—ಅವರು ಬ್ಲಾಕ್ ಫ್ಲಾಗ್ ಕೈಗೆಕಟ್ಟಿ ಕೊಂಡು ಬಂದಿದ್ದಾರಲ್ಲ, ನಾವೂ ಕೂಡ ರೈತರ ಪರವಾಗಿದ್ದೇವೆ, ರೈತರಿಗೆ ವಿರೋಧವಾಗಿಲ್ಲ.

ಒಬ್ಬ ಸದಸ್ಯರು —ಶ್ರೀ ಮಹದೇವ ಹೊರಟ್ಟಿಯವರು ಕೊಟ್ಟಿರುವುದನ್ನು ಪೇಪರಿನಲ್ಲಿ ಹಾಕಿದ್ದಾರೆ. ಅದು ರೈತರು ಬರೆದುಕೊಟ್ಟಿದ್ದಲ್ಲ, ಅದರ ಬಗ್ಗೆ ತಾವು ವಿಚಾರ ಮಾಡಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಪತ್ರಿಕೆಯಲ್ಲಿ ಬಂದಿರತಕ್ಕ ವರದಿಯನ್ನು ಆಧಾರವಾಗಿಟ್ಟು ಕೊಂಡು ಈ ಚಳುವಳಿಗೆ ಸಂಬಂಧಪಟ್ಟ ಸನ್ನಿವೇಶದಲ್ಲಿ, ಹಿನ್ನೆಲೆಯಲ್ಲಿ, ರೈತರು, ರೈತರ ಮುಖಂಡರು ಆ ಪ್ರದೇಶದಲ್ಲಿ ಏನನ್ನು ಹೇಳುತ್ತಾ ಇದ್ದಾರೆ ಎನ್ನುವ ಮಾತನ್ನು ಹೇಳಿದ್ದೇನೆ. ಆದರೆ ಅದು ಕೆಲವು ಸದಸ್ಯರಿಗೆ ಅನ್ವಯಿಸತಕ್ಕ ಮಾತಲ್ಲ. ಆ ಪ್ರದೇಶದಿಂದ ಬಂದಿರತಕ್ಕ ಶಾಸಕರು, ಆಡಳಿತಪಕ್ಷದವರು ಮತ್ತು ವಿರೋಧ ಪಕ್ಷದವರು ಎಲ್ಲರಿಗೂ ಅನ್ವಯಿಸುತ್ತದೆ ಎಂದು ಹೇಳಿದ್ದಾರೆ.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರು ಹೇಳಿದ್ದು ನಿಜ. ರಾಜಿನಾಮೆ ಕೊಡಬೇಕು ಎಂದು ಪೇಪರಿನಲ್ಲಿ ಬಂದಿರುವ ಬಗ್ಗೆ ಪ್ರಸ್ತಾಪ ಮಾಡುವುದು ಬೇಡ. ಏಕೆಂದರೆ, ಗೋಲಿಬಾರ್ ಆಗಿ

ಸತ್ತಂಥ ರೈತರಿಗೆ ಚಿಂತೆ ಇಲ್ಲ, ರಾಜಿನಾಮೆ ಅಂದಕೂಡಲೆ ಏಕ್‌ದಂ ಇವರು ಸತ್ತೇಹೋಗಿ ಬಿಡುತ್ತಾರೆ. ಆದ್ದರಿಂದ ಅದನ್ನು ನೀವು ಪ್ರಸ್ತಾಪ ಮಾಡುವುದಕ್ಕೆ ಹೋಗಬೇಡಿ.

ಶ್ರೀ ವಿ. ಎ. ಮತ್ತಿಕಟ್ಟಿ.—ರೈತರ ಸಮಸ್ಯೆ ಪರಿಹಾರವಾಗುತ್ತದೆ ಅಂದರೆ, ನಾನು ಮೊದಲನೇ ಮನುಷ್ಯ ರಾಜಿನಾಮೆ ಕೊಡುತ್ತೇನೆ. ನಾವು ರಾಜಕೀಯ ಮಾಡತಕ್ಕ ಜನ ಅಲ್ಲ. ರೋಣ, ಗಜೇಂದ್ರ ಗಡ, ನರೇಗಲ್‌ನಲ್ಲಿ ಬೆಲೆ ಏರಿಕೆ ಬಗ್ಗೆ ಆದ ಘಟನೆ. ಅಲ್ಲಿ ರೈತರ ಚಳುವಳಿಯಾಗಿಲ್ಲ. ಬೆಟರ್‌ಮೆಂಟ್ ಲೆವಿ ಪ್ರಶ್ನೆ ಇಲ್ಲ. ನಮ್ಮಲ್ಲಿ ಕೆನಾಲ್ ಕನ್‌ಸ್ಟ್ರಕ್ಷನ್ ಆಗಿಲ್ಲ, ಅದು ಕನ್‌ಸ್ಟ್ರಕ್ಷನ್ ಆಗಬೇಕು ಎಂದು ಒತ್ತಾಯ ಮಾಡುತ್ತಿದ್ದಾರೆ.

SRI K. BHASAKAR NAIDU.-Sir, you have allowed this matter under rule 59. I would like to know till what time the hon. Members have been permitted to speak. The rule is very clear

CHAIRMAN. It is a notice under rule 50.

SRI K. BHASKAR NAIDU.—Let it be under rule 50 or 49. Now it is time for our lunch. Hence I appeal to the chair to adjourn the House.

CHAIRMAN.—The hon. Member seems to have missed the basic point, namely, when an adjournment motion is moved by the hon. Members normally the members who have moved the motion have to be given an opportunity to substantiate to the House and also to the Speaker that there are sufficient grounds to discuss a matter subscribed in the motion. So, the Chair has to give an opportunity to the member or members who have moved this motion and not all. Therefore, the question of others speaking at this stage does not arise.

SRI K. BHASKAR NAIDU.—I was drawing your attention in a muffled way. If the whole thing is discussed and politics is brought in, are you going to allow it ? That is exactly what my point is.

CHAIRMAN.—I am appealing to the hon. members not to bring in extraneous issues while making their submissions by converting this matter into an Adjournment Motion.

SRI K. BHASKAR NAIDU.—You should be very specific. Hereafter members who have given notice to the Motion may be allowed to make submission instead of making it a debate. If they want to make it a general dabate and if you were to permit it, we are also ready for it.

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಮಾನ್ಯ ಸದಸ್ಯರು ಹೇಳುವುದನ್ನು ಪುರಸ್ಕರಿಸುತ್ತಾ, ಈ ವಿಷಯ ಬಹಳ ಗಂಭೀರವಾಗಿರುವುದರಿಂದ, ಅವರು ಇದರಲ್ಲಿ ಪಾಲ್ಗೊಳ್ಳಬೇಕೆಂಬ ಉತ್ಸುಕತೆ ಇದ್ದರೆ ಅವರು ಸಹ ಅಡ್ಜರ್ನಮೆಂಟ್ ಮೋಷನ್‌ಗೆ ಸಹಿ ಮಾಡಿ ಕಳುಹಿಸಿ ಕೊಡಬಹುದು ಇಲ್ಲವೇ ಅಡ್ಜರ್ನಮೆಂಟಿಗೆ ಅಡ್ಮಿಟ್ ಆಗುವಾಗ ಸಹ ಅವರ ಒಪ್ಪಿಗೆ ಕೊಟ್ಟರೆ ಅವರೂ ಸಹ ಇದರ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಅವಕಾಶ ಸಿಗುತ್ತದೆ.

SRI K. BHASKAR NAIDU.—I am not permitted because I am on this side. They give notice under some rule and slowly try to make it a debate.

CHAIRMAN.—I appeal to you, let us not dilute the importance of the subject under discussion. I request the hon. member Sri A. Lakshmi Sagar to conclude his speech.

SRI K. BHASKAR NAIDU.—Let the members not bring in political issues by raising controversial issues.

CHAIRMAN.—You please bear with me for some time. Let Sri Lakshmi Sagar conclude his speech and then Sri, Basavalingappa will speak.

ಶ್ರೀ ಎಂ. ಚಂದ್ರಶೇಖರ್.—ನಾನು ಸಹಿ ಮಾಡಿದ್ದೇನೆ ನನಗೂ ಸಹ ಮಾತನಾಡಲು ಅವಕಾಶ ಕೊಡಬೇಕು.

ಶ್ರೀ ವಿ. ಎ. ಪತ್ತಿಕಟ್ಟಿ.—ಅವರಿಗೆ ಅವಕಾಶ ಕೊಟ್ಟರೆ ನನಗೂ ಸಹ ಕೊಡಲೇಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಕ್ಕೆ ಮಾನ್ಯ ಸದಸ್ಯರು ಏತಕ್ಕೆ ಕೋಪ ಮಾಡಿಕೊಂಡರೋ ಗೊತ್ತಾಗಲಿಲ್ಲ. ನಾನು ಪತ್ರಿಕೆಯಲ್ಲಿ ಬಂದಿರತಕ್ಕ ವರದಿಯನ್ನು ಆಧರಿಸಿ ಮಾತನಾಡುತ್ತಿದ್ದೆ. ಅವರು ಪತ್ರಿಕೆಯಲ್ಲಿ ಬಂದಿರತಕ್ಕ ವರದಿ ಆಧಾರರಹಿತ ಎಂದು ಹೇಳುವುದಕ್ಕೆ ಅವರಿಗೆ ಅಧಿಕಾರ ಉಂಟು. ಅದನ್ನು ಬಿಟ್ಟು ನನ್ನ ಮೇಲೆ ಅವರು ಕೋಪ ತೋರಿಸಿದರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ, ನನ್ನ ಬಾಯಿ ಮುಚ್ಚಿಸುವುದಕ್ಕೆ ಆಗುವುದಿಲ್ಲವೆಂದು ವಿನಯದಿಂದ ಹೇಳುವುದಕ್ಕೆ ಇಷ್ಟಪಡುತ್ತೇನೆ. ರಾಜಕೀಯ ತರುವುದು ಬೇಡವೆಂದು ಮಾನ್ಯ ಮುಖ್ಯ ಮಂತ್ರಿಗಳವರು ಹೇಳಿದರು. ಆದರೆ ನಾರಾಯಣಪುರದಲ್ಲಿ ಹರಿಜನರ ಕೊಲೆಯಾದಾಗ, ಉತ್ತರ ಪ್ರದೇಶದಲ್ಲಿ ಬೆಲ್ಚಿಯಲ್ಲಿ ಆದಾಗ ಶ್ರೀಮತಿ ಇಂದಿರಾಗಾಂಧಿಯವರು ಹೇಳಿದರು.......

(INTERRUPTIONS)

CHAIRMAN.—Every member of this House, if I have understood properly, is more concerned as to how they should put an end to this agitation which is going on. So I thought you would also offer your constructive suggestions to the Government as to how this situation can be diffused.

SRI A. LAKSHMI SAGAR.—Let me put-forward my point of view on the issue that is under discussion. There is no point in hustling this matter, I will make a humble and a very serious submission to you. When the matter came up 2 or 3 days ago, though I was a signatory to the Motion, I did not somehow chose to speak on that day. I kept quite for two days I did not participate when a similar matter was brought which was subsequently converted into discussion under Rule-59. This matter has been agitating the minds of the people throughout the length and breadth of the State, If my friends do not want to make any capital out of it, the best thing for the Government would be to concede all the demands of farmers, Why are they trying to shut my mouth? You can never shut my mouth.

(INTERRUPTIONS)

CHAIRMAN.—It is not correct and proper for you to address the members like this. you please see towards me.

(ಹಲವಾರು ಸದಸ್ಯರುಗಳು ಮಧ್ಯದಲ್ಲಿ ಎದ್ದು ನಿಂತು ಮಾತನಾಡುತ್ತಿದ್ದರು)

ಛೇರ್ಮನ್.—ದಯವಿಟ್ಟು ಸದಸ್ಯರುಗಳು ಕುಳಿತುಕೊಳ್ಳಬೇಕು, ಒಬ್ಬರು ಎದ್ದು ನಿಂತುಕೊಂಡಾಗ ಹೀಗೆ ಹಲವಾರು ಸದಸ್ಯರುಗಳು ಒಟ್ಟಿಗೇ ಏಳುವುದು ಸರಿಯಾದುದಲ್ಲ, ಮಾನ್ಯ ಸದಸ್ಯರುಗಳು ಮಾತನಾಡುವಾಗ ನನ್ನ ಕಡೆ ನೋಡಿ, ನನ್ನನ್ನುದ್ದೇಶಿಸಿ ಮಾತನಾಡಿ, ಸದಸ್ಯರನ್ನುದ್ದೇಶಿಸಿ ಮಾತನಾಡಬೇಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ರಾಜಕೀಯ ಚರ್ಚೆಯಲ್ಲಿ ಬೇಡವೆಂದು ಮಾನ್ಯ ಸದಸ್ಯರು ಹೇಳಿದರು ರಾಜಕೀಯವನ್ನು ನಾವು ಯಾರು ಮಾಡುತ್ತಾ ಇಲ್ಲ, ಮತ್ತೆ ಅದರಿಂದ ಲಾಭವನ್ನು ನಾವು ಪಡೆದುಕೊಳ್ಳಬೇಕೆಂದು ಏನೂ ಇಲ್ಲ ಪರ್ಯಾಯವಾಗಿ ರಾಜಕೀಯ ಬರುತ್ತದೆ, ರಾಜಕೀಯವನ್ನು ಮಾಡಬೇಕಾಗುತ್ತದೆ, ಏತಕ್ಕೆ ಮುಚ್ಚಿಡಬೇಕು? ಇರುವ ರಾಜಕೀಯವನ್ನು ಹೇಳೋಣ.

ಛೇರ್ಮನ್.—ವಾಸ್ತವಿಕವಾದ ವಿಷಯದ ಬಗ್ಗೆ ಚರ್ಚೆಯಾದರೆ ಒಳ್ಳೆಯದು.

ಶ್ರೀ ಎಸ್. ಆರ್. ಬೊಮ್ಮಾಯಿ.—ಇದೇ ರೀತಿ ಅಡ್ಜರ್ನ್‌ಮೆಂಟ್ ಮೋಷನನ್ನು ಪಾರ್ಲಿಮೆಂಟಿನಲ್ಲಿ ಕಾಂಗ್ರೆಸ್ (ಐ) ಪಕ್ಷದವರು ವಿರೋಧ ಪಕ್ಷದವರಾಗಿದ್ದಾಗ, ಶ್ರೀಮತಿ ಇಂದಿರಾಗಾಂಧಿಯವರು, ಅಡ್ಜರ್ನಮೆಂಟ್ ಮೋಷನ್ ಮೂವ್ ಮಾಡುವಾಗ ಚೆನ್ನಾಗಿ ಮಾತನಾಡಿದ್ದಾರೆ, ಎಲ್ಲಿ ಆಡಳಿತ ಪಕ್ಷ ತಪ್ಪು ಮಾಡುತ್ತದೆಯೋ ಆಗ ಅದರ ವಿರುದ್ಧ ರಾಜಕೀಯವಾಗಿ ವಿರೋಧ ಪಕ್ಷಗಳು ಅದರ ಲಾಭವನ್ನು ತೆಗೆದುಕೊಳ್ಳಬೇಕಾಗುತ್ತದೆಂದು ಅವರೇ ಹೇಳಿದ್ದಾರೆ, ಸರ್ಕಾರ ತಪ್ಪು ಮಾಡಿದಾಗ ಅದನ್ನು ತೆಗೆದು ಹಾಕಿ ತಾನು ಬರುವುದಕ್ಕೆ ವಿರೋಧ ಪಕ್ಷದವರಿಂದ ಪ್ರಯತ್ನ ನಡೆಯುತ್ತದೆ, ಆಗ ಅಧಿಕಾರದಲ್ಲಿರುವ ಪಕ್ಷ ತನ್ನ ಅಧಿಕಾರವನ್ನು ಉಳಿಸಿ ಕೊಳ್ಳುವುದಕ್ಕೆ ಏನು ಮಾಡಬೇಕೋ ಅದನ್ನು ಮಾಡುತ್ತದೆ.

(INTERRUPTIONS

ನಾರಾಯಣಪುರದಲ್ಲಿ ಹರಿಜನರ ಕೊಲೆಯಾಯಿತು ಮತ್ತೆ ಬೆಲ್ಚಿಯಲ್ಲಿ ಕೊಲೆಯಾಯಿತು ಅದರ ಲಾಭವನ್ನು ನೀವು ಪಡೆದುಕೊಳ್ಳಲಿಲ್ಲವೇ

ಛೇರ್ಮನ್.—ವಿಷಯ ಬಹಳ ಪ್ರಾಮುಖ್ಯತೆಯುಳ್ಳದ್ದಾಗಿದೆ, ಆದುದರಿಂದ ತಾವು ಮುಖ್ಯಮಂತ್ರಿಗಳವರಿಗೆ ಈ ವಿಚಾರದಲ್ಲಿ ಮನದಟ್ಟು ಮಾಡಬೇಕಾದರೆ ನೇರವಾಗಿ ವಿಷಯವನ್ನು ಪ್ರಸ್ತಾಪ ಮಾಡಿ, ಬೇರೆ ದಾರಿಗೆ ಹೋದರೆ ವಿಷಯದ ಮೇಲೆ ಹಿಡಿತ ಕೂಡ ತಪ್ಪುತ್ತದೆ. ಆದುದರಿಂದ ನಿಮ್ಮ ಪ್ರಯತ್ನ ಫಲಕಾರಿಯಾಗಬೇಕಾದರೆ ಚರ್ಚೆ ಕೂಡ ಸಮರ್ಪಕವಾಗಿ ನಡೆಯದೇಕಾದರೆ ನಿಲುವಳಿ ಸೂಚನೆಯ ಪ್ರಕಾರ ವಾಸ್ತವಿಕವಾಗಿ ಏನನ್ನು ಹೇಳಬೇಕೋ ಅಷ್ಟನ್ನು ಮಾತ್ರ ಹೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರುಗಳು ಮಧ್ಯದಲ್ಲಿ ಈ ರೀತಿ ಎದ್ದು ನಿಂತು ಹೇಳುತ್ತಿದ್ದರೆ ತೊಂದರೆಯಾಗುತ್ತದೆ, ಆದುದರಿಂದ ತಮ್ಮಲ್ಲಿ ಕಳಕಳಿ ಮನವಿ ಮಾಡಿಕೊಳ್ಳುತ್ತೇನೆ, ನಾವು ಹೇಳುವ ವಿಷಯಕ್ಕೆ ಮಾನ್ಯ ಮುಖ್ಯಮಂತ್ರಿಗಳವರು ಉತ್ತರ ಕೊಡುವುದರಿಂದ, ಬಾಕಿಯವರು ಮಧ್ಯ ಇಂಟರಪ್‌ಷನ್ ಮಾಡದೇ ಇರುವ ಹಾಗೆ ತಾವು ನೋಡಿಕೊಳ್ಳಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ತಮ್ಮಲ್ಲಿ ಅತ್ಯಂತ ವಿನಯದಿಂದ ನನ್ನ ಒಂದು ಮನವಿಯನ್ನ ಸಲ್ಲಿಸುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಸ್. ಮುನಿರಾಜು.—ದಯಮಾಡಿ ವಿಷಯವನ್ನು ಪ್ರಸ್ತಾಪ ಮಾಡಲಿಕ್ಕೆ ಒಂದು ಕಾಲವನ್ನು ನಿಗದಿ ಮಾಡಿ, ಇಲ್ಲದಿದ್ದರೆ ಸಂಜೆಯವರೆಗೂ ಹೀಗೇ ನಡೆಯುತ್ತಿರುತ್ತದೆ. ಅದಕ್ಕೆ ಅವಕಾಶ ಕೊಡಬೇಡಿ. ನಾವು ಇಲ್ಲಿ ಪ್ರೇಕ್ಷಕರಾಗಿ ಕುಳಿತುಕೊಳ್ಳುವುದಕ್ಕೆ ಬಂದಿಲ್ಲ. ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ಏನು ತರಬೇಕೋ ಅದನ್ನು ನೇರವಾಗಿ ತರಲಿ. ಆದರೆ ಈ ರೀತಿ ಮಾತನಾಡಿಕೊಂಡು ಹೋಗುತ್ತಿರುವುದು ಸರಿಯಲ್ಲ. ಒಂದು ಕಾಲವನ್ನು ನಿಗದಿ ಮಾಡಿ, ಅಷ್ಟು ಕಾಲದಲ್ಲಿ ವಿಚಾರ ಮುಕ್ತಾಯವಾಗಲಿ.

SRI K. RAMESH KUMAR (Srinivaspur).—We have given an adjournment motion under rule 50 and the Hon. Speaker is kind enough to allow us to say something about the admissibility. We expect the Hon. Chief Minister to have some amount of patience to listen to us. Ultimately, you are the custodian to admit it or to give a ruling on it, In the meanwhile some of our friends are getting up and interrupting us in making our submission. I am at a loss to understand, why we have come here for? Are we here to take the terms from them as to what to speak, as to how to speak if that is so. kindly give a ruling.

(INTERRUPTIONS)

ಶ್ರೀ ವಿ. ಎಂ. ಘಾಡಿ.—ನಾನು ಒಂದು ಕ್ರಿಯಾಲೋಪವನ್ನು ಎತ್ತುತ್ತೇನೆ. ಮಾನ್ಯ ಬೊಮ್ಮಾಯಿಯವರು ಮಾತನಾಡುತ್ತಾ, ನಾವು ಏನು ಹೇಳುತ್ತೇವೆ ಅದನ್ನು ಈ ಸದನದ ಎಲ್ಲ ಸದಸ್ಯರೂ ಕೇಳಬೇಕು ಮತ್ತು ಅದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡಬೇಕೆಂದು ಹೇಳುತ್ತಿದ್ದರು. ಆದರೆ ಆ ಕಡೆ ಸದಸ್ಯರು ಮಾತನಾಡಬೇಕಾದರೆ ಈ ಕಡೆಯ ಸದಸ್ಯರನ್ನು ಚುಚ್ಚಿ ಮಾತನಾಡಿದರೆ ಸುಮ್ಮನೆ ಕೂರುವುದಕ್ಕಾಗುವುದಿಲ್ಲ, ಎಲ್ಲರೂ ಏಳಲೇಬೇಕಾಗುತ್ತದೆ. ಮಾನ್ಯ ರಮೇಶ್ ಕುಮಾರ್ ರವರು ಹೇಳುತ್ತಾರೆ, ನಿಯಮವನ್ನು ಪಾಲನೆ ಮಾಡಿ ಮಾತನಾಡುವುದಕ್ಕೆ ಏನೂ ಅಡ್ಡಿ ಇಲ್ಲ ಎಂದು.

ಛೇರ್ಮನ್.—ಅದು ಅಡ್ಜರ್ನ್‌ಮೆಂಟ್ ಮೋಷನ್ ಆಗುತ್ತದೆಂದರೆ ಅದರ ಮೇಲೆ ತಾವೂ ಕೂಡ ಎದ್ದು ನಿಂತುಕೊಂಡು ಮಾತನಾಡಬಹುದು.

ಶ್ರೀ ವಿ. ಎಂ. ಘಾಡಿ.—ಮಾನ್ಯ ಪಾಟೀಲರು ಮಾತನಾಡುತ್ತಾ ಸರ್ಕಾರ ರಾಜೀನಾಮೆ ಕೊಡಬೇಕೆಂದರು. ಅದಕ್ಕೆ ನಾನು ಹೇಳುತ್ತೇನೆ. ಅವರಿಗಿಂತ ಹೆಚ್ಚಿನ ಕಳಕಳಿ ನಮಗೆ ಇದೆ ಎಂದು.

ಛೇರ್ಮನ್.—ಸರಿ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಈ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಅನೇಕ ಅಂಶಗಳನ್ನು ಈ ಸಭೆಯ ಮುಂದಿಡುವುದಕ್ಕೆ ನನಗೆ ಅಧಿಕಾರ ಇದೆಯೆಂದು ಭಾವಿಸುತ್ತೇನೆ. ೫೦ನೇ ಅಧಿನಿಯಮದ ಅಡಿಯಲ್ಲಿ ಈ ಸಭೆಯಲ್ಲಿ ಹಿಂದೆ ನಡೆದಂತಹ ಇಂಥದ್ದೇ ಸಮಸ್ಯೆಗಳು ಬಂದಾಗ ದಿನಗಟ್ಟಲೆ ಇದರ ಬಗ್ಗೆ ವ್ಯಾಖ್ಯಾನ ನಡೆದಿದೆ, ವಾದವಿವಾದ ನಡೆದಿದೆ ಎಂಬುದನ್ನು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ತಾವು ಹಿರಿಯ ಸದಸ್ಯರು, ಬಹಳ ವರ್ಷಗಳಿಂದ ಈ ಸದನದ ಕಾರ್ಯಕಲಾಪಗಳನ್ನು ವೀಕ್ಷಣೆ ಮಾಡಿ ಹೆಚ್ಚು ಅನುಭವ ಪಡೆದಿದ್ದೀರಿ ಎಂಬ ವಿಚಾರವನ್ನು ಮನಗಂಡಿದ್ದೇನೆ. ಆದರೆ ನಾನು ಇಲ್ಲಿ ವಿರೋಧ ಪಕ್ಷದ ಸಾಮಾನ್ಯ ಸದಸ್ಯನಾಗಿ ಸರ್ಕಾರವನ್ನು ಹೊಗಳುವುದಕ್ಕೆ ಬಂದಿಲ್ಲ.

ಶ್ರೀ ಜಿ. ಕೆ. ತಕ್ಕೇಡ್.—ತೆಗಳಿರಿ: ಯಾರು ಹೊಗಳಿ ಎನ್ನುತ್ತಾರೆ.

(ಸಭೆಯಲ್ಲಿ ಗೊಂದಲ)

ಛೇರ್ಮನ್.—ವಿರೋಧ ಪಕ್ಷದ ಸದಸ್ಯರು ಸರ್ಕಾರವನ್ನು ಹೊಗಳುವುದಕ್ಕೆ ಬರುತ್ತಾರೆಯೇ? ನೀವು ಏಕೆ ಆ ರೀತಿ ಅಫೆನ್ಸೀವ್ ಆಗಿ ತೆಗೆದುಕೊಳ್ಳುತ್ತೀರಿ? ಆ ರೀತಿ ಏಕೆ ತಿಳಿದುಕೊಳ್ಳಬೇಕು?

ಶ್ರೀ ಬಿ. ಸುಬ್ಬಯ್ಯಶೆಟ್ಟಿ.—ಇವತ್ತಿನ ಮಾನ್ಯ ಮುಖ್ಯ ಮಂತ್ರಿಗಳು ವಿರೋಧ ಪಕ್ಷದ ಮುಖಂಡರಾಗಿದ್ದಾಗ ಇಂಥದ್ದೇ ಒಂದು ಪ್ರಸಂಗ ಬಂದಿತ್ತು. ಅವರು ಮಾತಿಗೆ ನಿಂತಾಗ ಇದೇ ರೀತಿ ಆಳುವ ಪಕ್ಷದ ಸದಸ್ಯರು ಅವರನ್ನು ಟ್ಯಾಕಲ್ ಮಾಡುವುದಕ್ಕೆ ಶುರು ಮಾಡಿದರು. ಆಗ ಅವರು ಏನು ಹೇಳಿದರೆಂದರೆ, ನೀವು ಮಾತನಾಡುವಾಗ ನಾನು ಶಾಂತವಾಗಿ ಕೇಳಿದೆ, ಆದ್ದರಿಂದ ನಾನು ಮಾತನಾಡುವಾಗಲೂ ಕೂಡ ನೀವು ಶಾಂತವಾಗಿ ಕೇಳಬೇಕು ಎಂದರು. ಅಷ್ಟೇ ಅಲ್ಲದೆ, ನೀವು ಶಾಂತವಾಗಿ ಕೇಳದೆ ಹೋದರೆ ನಮ್ಮ ಕಡೆ ಕೂಡ ಸದಸ್ಯರಿದ್ದಾರೆ, ನಿಮ್ಮ ನಾಯಕರು ಮಾತನಾಡುವಾಗ ಬಿಡುವುದಿಲ್ಲ ಎಂಬ ಮಾತನ್ನು ಸಹ ಹೇಳಿ

ದ್ದಾರೆ. ಇದು ಆಗಬೇಕೆಂದಿದ್ದರೆ ಇದೇ ರೀತಿ ನಡೆದುಕೊಂಡು ಹೋಗಲಿ. ಆ ಕಡೆಯ ಸದಸ್ಯರು ಮಾತನಾಡುವಾಗ ನಾವು ಕೇಳಬೇಕೆಂಬ ನಿಬಂಧನೆ ಏನು ಇಲ್ಲ. ಇದೇ ರೀತಿ ಹೋದರೆ ನಾವು ಅದಕ್ಕೆ ತಕ್ಕಂತೆ ಹೋಗಬೇಕಾಗುತ್ತದೆ. ಈಗಿನ ಮಾನ್ಯ ಮುಖ್ಯ ಮಂತ್ರಿಗಳು ವಿರೋಧ ಪಕ್ಷದ ಮುಖಂಡರಾಗಿದ್ದಾಗ ಏನೊಂದು ಮಾತನ್ನು ಹೇಳಿದ್ದರು ಅದನ್ನು ಮತ್ತೊಮ್ಮೆ ನೆನಪು ಮಾಡಿಕೊಡುತ್ತಿದ್ದೇನೆ. ಅದನ್ನು ತಮ್ಮ ಸದಸ್ಯರಿಗೆ ಮನದಟ್ಟು ಮಾಡಿ ಪಾರ್ಲಿಮೆಂಟರಿ ಪ್ರೊಸೀಜರ್ ಪ್ರಕಾರ ನಡೆದುಕೊಳ್ಳುವಂತೆ ಬುದ್ಧಿವಾದ ಹೇಳುವುದು ಒಳ್ಳೆಯದೆಂದು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಮೈಕೇಲ್ ಬಿ. ಫರ್ನಾಂಡೀಸ್.—ಮಾನ್ಯ ಲಕ್ಷ್ಮೀಸಾಗರ್‌ರವರು ಸರ್ಕಾರವನ್ನು ಹೊಗಳಲಿಕ್ಕೆ ಬಂದಿಲ್ಲವೆಂದು ಹೇಳಿದಾಗ ಮಾನ್ಯ ತಕ್ಕೇಡ್‌ರವರು 'ನೀವು ಬೊಗಳಲಿಕ್ಕೆ ಬಂದಿದ್ದೀರಿ, ಬೊಗಳಿ' ಎಂದರು. ಅದು ರೆಕಾರ್ಡ್ ಆಗಿದ್ದರೂ, ಆಗದಿದ್ದರೂ ಮಾನ್ಯ ಸದಸ್ಯರು ಕ್ಷಮೆ ಕೇಳಬೇಕು.

ಛೇರ್ಮನ್.—ರೆಕಾರ್ಡ್ ಆಗಿದ್ದರೆ ಎಕ್ಸ್‌ಪಂಜ್ ಮಾಡುತ್ತೇನೆ.

ಶ್ರೀ ಜಿ. ಕೆ. ತಕ್ಕೇಡ್.—ನಿಮಗೆ ಕನ್ನಡ ಅರ್ಥವಾಗುವುದಿಲ್ಲವೆಂದು ಕಾಣುತ್ತದೆ. ನಾನು ಉಪಯೋಗಿಸಿದ್ದು ಹೊಗಳಿ—ತೆಗಳಿ ಎಂಬ ಪದಗಳನ್ನು ಮಾತ್ರ.

ಶ್ರೀ ವಿ. ಬಿ. ಭಾವಿ.—ಮಾನ್ಯ ಲಕ್ಷ್ಮೀಸಾಗರ್‌ರವರು ಮಾತನಾಡುತ್ತಾ 'ಸರ್ಕಾರವನ್ನು ಹೊಗಳಲಿಕ್ಕೆ ಬಂದಿಲ್ಲ' ಎಂದು ಹೇಳಿದರು. ಮಾನ್ಯ ಸುಬ್ಬಯ್ಯ ಶೆಟ್ಟರು ಮಾತನಾಡುತ್ತಾ, ಮಾನ್ಯ ಮುಖ್ಯ ಮಂತ್ರಿಗಳು (ಶ್ರೀಮಾನ್ ಗುಂಡೂರಾಯರು) ವಿರೋಧ ಪಕ್ಷದ ನಾಯಕರಾಗಿದ್ದಾಗ ಏನು ಒಂದು ಮಾತನ್ನು ಹೇಳಿದರೆಂದು ಹೇಳಿದರು ಅದನ್ನು ಅವರು ಹೇಳಿಲ್ಲವೆಂದು ನನ್ನ ಭಾವನೆ. I request the Speaker to restrict the Hon. Members to confine to the admissibility of the adjournment motion

CHAIRMAN.—That is correct.

ಶ್ರೀ ಘಟ್ಟಿ ಚಂದ್ರಶೇಖರ್.—ಪ್ರತಿಯೊಬ್ಬ ಸದಸ್ಯರಿಗೂ ಮಾತನಾಡಲಿಕ್ಕೆ ಅವಕಾಶ ಇದೆ. ಅನ್‌ಪಾರ್ಲಿಮೆಂಟರಿ ಪದಗಳನ್ನು ಪ್ರಯೋಗ ಮಾಡಿದರೆ ತಾವು ಕಡತದಿಂದ ಕಿತ್ತು ಹಾಕಂತ್ತೀರಿ, ಹೀಗಿರುವಾಗ, ಯಾವ ಸದಸ್ಯರು ಏನು ಹೇಳಿದರೂ ಅದೇನು ಅಥಾರಿಟಿಯಲ್ಲ. ಏನು ಬೇಕಾದರೂ ಹೇಳಿಕೊಳ್ಳಲಿ, ಅದಕ್ಕೆ ಏಕೆ ಗಲಾಟೆ ಮಾಡಬೇಕು?

ಶ್ರೀ ಎ. ಲಕ್ಷ್ಮೀಸಾಗರ್.—ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ, ಈಗ ತಾನೇ ಮಾನ್ಯ ಸುಬ್ಬಯ್ಯಶೆಟ್ಟರು ಹೇಳಿದ ಹಾಗೆ, ಬರೀ ಗೊಂದಲದಲ್ಲಿ ಈ ಸಭೆಯ ಕಾರ್ಯ ಕಲಾಪಗಳು ನಡೆಯಬೇಕೆಂದಿದ್ದರೆ, ನನ್ನ ಬಾಯಿ ಮುಚ್ಚಿಸುವುದಕ್ಕಾಗುತ್ತದೆಂದು ತಿಳಿದುಕೊಂಡಿದ್ದರೆ, ಖಂಡಿತವಾಗಿ ತಪ್ಪು ತಿಳಿದುಕೊಂಡಿದ್ದಾರೆಂದು ಕಾಣುತ್ತದೆ ಈ ಸಭೆಯ ಮುಂದಿರತಕ್ಕದ್ದು ನಿಲುವಳಿಸೂಚನೆ. ಇದರಲ್ಲಿ ಮುಖ್ಯವಾದ ವಿಚಾರವನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಇದರಲ್ಲಿರತಕ್ಕದ್ದು ರೈತರ ಸಂಕಷ್ಟ ಮತ್ತು ಇದನ್ನು ಬಗೆಹರಿಸದೇ ಹೋದಂತಹ ಸರ್ಕಾರ. ಈ ಎರಡೇ ಪ್ರಶ್ನೆಗಳು ಇದರಲ್ಲಿರತಕ್ಕವು. ನೂರಾರು ವರ್ಷಗಳಿಂದ ರೈತರು ಶೋಷಣೆಗೆ ಈಡಾಗಿದ್ದಾರೆ, ಮತ್ತು ಅದರಲ್ಲಿ ಅಧಿಕಾರಿಗಳು ಶಾಮೀಲಾಗಿದ್ದಾರೆ. ಈ ಎರಡು ವರ್ಗದವರು ರೈತರನ್ನು ಸದೆ ಬಡಿಯುತ್ತಿದ್ದಾರೆ. ರೈತರು ಇವತ್ತಿನ ದಿವಸ ತಮ್ಮ ಕೋಪವನ್ನು ತೋರಿಸುವುದಕ್ಕೋಸ್ಕರ 'ನಾವು ಮನುಷ್ಯರು' ಎಂದು ಈ ದಿವಸ ಎದ್ದು ನಿಂತಿದ್ದಾರೆ ೧೮೫೭ರಲ್ಲಿ ಬ್ರಿಟಿಷರ ಅನ್ಯಾಯದ ವಿರುದ್ಧ ನರಗುಂದದ ಬಾಬಾ ಸಾಹೇಬ ನರಗುಂದಕರ್‌ರವರು ಹೊತ್ತಿಸಿದಂತಹ ಕಿಡಿ ಇನ್ನೂ ಆರಿಲ್ಲ ಎಂಬುದನ್ನು ತಮ್ಮ ಚಳುವಳಿಯ ಮುಖಾಂತರ ರೈತರು ಇವತ್ತಿನ ದಿವಸ ತೋರಿಸಿದ್ದಾರೆ. ಆ ಕಿಡಿ ಇವತ್ತು ಹೊಗೆಯಾಡುತ್ತಿದೆ.

೨–೩೦ ಪಿ. ಎಂ.

ಆ ಕಿಡಿ ನಂದಾ ದೀಪವಾಗಿರಬೇಕು ಎಂಬುದು ನನ್ನ ಆಸೆ. ರೈತರೇ ಮುಖಂಡತ್ವ ವಹಿಸಿ ಚಳುವಳಿ ಮಾಡುತ್ತಿರುವ ಈ ರಾಜ್ಯದ ರೈತರಿಗೆ, ರೈತ ಮುಖಂಡರಿಗೆ ನಾನು ಸಾಷ್ಟಾಂಗ ನಮಸ್ಕಾರಗಳನ್ನು ಅರ್ಪಿಸುತ್ತಿದ್ದೇನೆ. ಅನ್ಯಾಯದ ವಿರುದ್ಧ, ಶೋಷಣೆ ವಿರುದ್ಧ, ಅಧಿಕಾರಶಾಹಿ ವಿರುದ್ಧ ಚಳುವಳಿಯನ್ನು ಇದೇ ರೀತಿ ನಡೆಸಿಕೊಂಡು ಹೋಗಬೇಕು ಎಂಬ ಮನವಿಯನ್ನೂ ಮಾಡಿಕೊಳ್ಳುತ್ತೇನೆ. ರೈತರು

ಏನು ಬೇಡುತ್ತಿದ್ದಾರೆಂದರೆ ನಮಗೆ ನ್ಯಾಯುವಾದ ಬೆಲೆ ಕೊಡಿ; ನಮ್ಮ ರಕ್ತ ಹೀರಬೇಡಿ, ನಮ್ಮನ್ನು ಶೋಷಣೆ ಮಾಡಬೇಡಿ ಎಂದು ಕೇಳುತ್ತಿದ್ದಾರೆ. ಅದರ ಕಡೆ ನೀವು (ಸರ್ಕಾರದವರು) ಗಮನ ಕೊಡಿ. ಸುಮ್ಮನೆ ನನ್ನ ಬಾಯಿಯನ್ನು ಮುಚ್ಚಿಸುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ನನ್ನ ಬಾಯಿಯನ್ನು ಬೇಕಾದರೆ ಮುಚಿಸಬಹುದು. ಆದರೆ ಜನರ ಬಾಯಿಯನ್ನು ಮುಚ್ಚಿಸುವುದಕ್ಕಾಗುವುದಿಲ್ಲ. ಗುಂಡಿನಿಂದ ಎಲ್ಲರನ್ನೂ ಸದೆಬಡಿಯುತ್ತೇವೆ ಎಂದು ಹೇಳತಕ್ಕುದು ಹೇಡಿಗಳ ಮಾತು. ನ್ಯಾಯುವಾದ ಅಧಿಕಾರ ಸೂತ್ರವನ್ನು ಹಿಡಿದಿರತಕ್ಕವರು ಆಡುವ ಮಾತಲ್ಲ. ಇವತ್ತು ಜನ ಸಿಡಿಲಮರಿಗಳಾಗಿ ಎದ್ದಿದ್ದಾರೆ. ರೈತರು ಎಚ್ಚೆತ್ತಿದ್ದಾರೆ. ಕರ್ನಾಟಕ ರಾಜ್ಯದ ಮೂಲೆ ಮೂಲೆಗಳಲ್ಲಿ ಸಿಡಿಲಮರಿಗಳಾಗಿ ಸಿಡಿದೆದ್ದು ನಿಂತಿದ್ದಾರೆ. ಗುಂಡಿಗೆ ಬಲಿಯಾಗುವುದಕ್ಕೆ, ಪ್ರಾಣ ತ್ಯಾಗ ಮಾಡುವುದಕ್ಕೆ ತಯಾರಾಗಿದ್ದಾರೆ. ಇದನ್ನು ನೀವು ಮನಗಾಣಬೇಕು. ಇಲ್ಲಿ ಕುಳಿತುಕೊಂಡು ಕಾನೂನು ಮಾತನಾಡಿದರೆ ಕಾನೂನನ್ನು ನುಂಗತಕ್ಕ ಶಕ್ತಿಗಳು ಅಲ್ಲಿ ಬೆಳೆಯುತ್ತಿವೆ. ಅನ್ಯಾಯದ ವಿರುದ್ಧ ಬಂಡಾಯ ಎದ್ದಿರುವ ಸಮೂಹ ರಾಜ್ಯದಲ್ಲೆಲ್ಲಾ ಹರಡಿಕೊಂಡಿದೆ. ಮಾನ್ಯ ಮುಖ್ಯ ಮಂತ್ರಿಗಳು Valcano ಮೇಲೆ ಕುಳಿತ್ತಿದ್ದಾರೆ. ಅದು ಯಾವಾಗ ಸ್ಫೋಟಕವಾಗುತ್ತದೋ ಗೊತ್ತಿಲ್ಲ. ಆದು ಸ್ಫೋಟಕವಾಗಿ ಎಲ್ಲವೂ ಕೂಡ ಕೊಚಿಕೊಂಡುಹೋಗುವ ಕಾಲ ಬರುತ್ತಿದೆ. ರೈತರ ಮೇಲೆ ಗುಂಡು ಹಾರಿಸುತ್ತೀರಾ? ಅನ್ನ ಕೊಡತಕ್ಕ ರೈತನ ಬಾಯಿಗೆ ಮಣ್ಣು ಹಾಕಿ, ಗುಂಡು ಹಾರಿಸಿದರೆ ಆ ರಕ್ತ ಸಿಂಚನ ರಾಜ್ಯದ ಮೂಲೆ ಮೂಲೆಗಳಲ್ಲಿ ಕಾಳ್ಗಿಚ್ಚಾಗಿ ಎಲ್ಲವನ್ನೂ ಕೂಡ ಆಹುತಿ ತೆಗೆದುಕೊಳ್ಳತಕ್ಕ ಪರಿಸ್ಥಿತಿ ದೇಶದಲ್ಲಿ ಬರುತ್ತದೆ. ಅದರಲ್ಲಿ ಎಲ್ಲವೂ ಆಹುತಿಯಾಗುತ್ತದೆ ಎಂಬ ಮಾತನ್ನು ಯಾರೂ ಮರೆಯಬಾರದು. ನಾನು ಸರ್ಕಾರಕ್ಕೆ ಒಂದು ಎಚ್ಚರಿಕೆ ಮಾತನ್ನು ಹೇಳಬಯಸುತ್ತೇನೆ, ಗುಂಡಿನಿಂದ ಯಾವ ಒಂದು ವಿಚಾರವನ್ನೂ ಸಾಧನೆ ಮಾಡುವುದಕ್ಕಾಗುವುದಿಲ್ಲ. ಸೈನ್ಯ ತರಿಸುವುದಕ್ಕೂ ಸಿದ್ಧ ಎಂದು ಅವರು ಹೇಳಿದರು. ಸೈನ್ಯವನ್ನು ತರಿಸಿ ಜನರನ್ನು ಸದೆಬಡಿಯುವುದಕ್ಕಾಗುವುದಿಲ್ಲ. ಇದನ್ನು ತಿಳಿದುಕೊಳ್ಳಬೇಕು. ರೈತರ ಬೇಡಿಕೆಗಳೇನಿವೆ ಅದನ್ನು ತಕ್ಷಣ ಒಪ್ಪಿಕೊಂಡಿದ್ದೇನೆ ಎಂದು ಮುಖ್ಯ ಮಂತ್ರಿಗಳು ಸಾರಬೇಕು. ಇಲ್ಲದಿದ್ದರೆ ಅನಾಹುತ ಇನ್ನೂ ಹೆಚ್ಚಾಗುವುದರಲ್ಲಿ ಅನುಮಾನವೇ ಇಲ್ಲ. ಮಾನ್ಯ ಮುಖ್ಯ ಮಂತ್ರಿಗಳ ಹೇಳಿಕೆಯನ್ನು ರೈತ ಮುಖಂಡರು ಸ್ವಾಗತ ಮಾಡಿಲ್ಲ ಎಂಬುದು ಪತ್ರಿಕೆಯಲ್ಲಿ ಬಂದಿದೆ. ಇದನ್ನು ಅರಿತುಕೊಂಡು ಅವರ ಮೂಲಭೂತ ಸಮಸ್ಯೆ ಏನಿದೆ ಎಂಬುದನ್ನು ನೋಡಿ ಅದನ್ನು ಪರಿಹಾರ ಮಾಡುವ ಕಡೆ ಗಮನ ಕೊಡಿ. ತೀರ್ಮಾನ ತೆಗೆದುಕೊಳ್ಳುವುದಕ್ಕೆ ಎಷ್ಟು ದಿನ ಬೇಕು? ಇನ್ನೂ ಎಷ್ಟು ಜನರನ್ನು ಗುಂಡಿಟ್ಟು ಸಾಯಿಸಬೇಕೆಂದಿದ್ದೀರಿ? ಸರ್ಕಾರಕ್ಕೆ ವಿಷಯದ ತೀವ್ರತೆಯೇ ಇಲ್ಲವೆಂಬುದು ನನ್ನ ಭಾವನೆ. ಆದ್ದರಿಂದ ಮಾನ್ಯ ಅಧ್ಯಕ್ಷರೇ ನಿಲುವಳಿ ಸೂಚನೆಯಲ್ಲಿರತಕ್ಕದ್ದು ಬಹಳ ಮುಖ್ಯವಾದ ವಿಷಯ. ದೇಶದಲ್ಲಿರುವ ರೈತರ ಸಮಸ್ಯೆ. ಇದನ್ನು ಪರಿಹರಿಸುವುದಕ್ಕೆ ನೀವೂ ಸಹಕರಿಸಬೇಕು. ಆದ್ದರಿಂದ ಇದಕ್ಕೆ ಒಪ್ಪಿಗೆ ಕೊಡಬೇಕು. ನಾನು ಸರ್ಕಾರಕ್ಕೆ ಹೇಳುತ್ತಿದ್ದೇನೆ, ರೈತರ ಸಮಸ್ಯೆಗಳನ್ನು ಹತ್ತಿಕ್ಕುವುದಕ್ಕೆ ಪ್ರಯತ್ನ ಮಾಡಬೇಡಿ, ಅವರನ್ನು ತುಳಿಯುವುದಕ್ಕೆ ಪ್ರಯತ್ನ ಮಾಡಬೇಡಿ, ಅವರನ್ನು ಗೌರವಿಸಿ. ಜನನಾಯಕರು, ರೈತ ನಾಯಕರು, ಕಾರ್ಮಿಕ ನಾಯಕರು ಯಾರಿದ್ದಾರೆ ಅವರನ್ನು ಕರೆಸಿ ಮಾತನಾಡಿ, ಸಂಧಾನ ನಡೆಸಿ. ಇಲ್ಲಿ ಕುಳಿತುಕೊಂಡು ಸಂಧಾನ ಮಾಡುತ್ತೇವೆಂದರೆ ಸಮಸ್ಯೆ ಬಗೆಹರಿಯುವುದಿಲ್ಲ. ಈ ಚಳುವಳಿ ರಾಜ್ಯಾದ್ಯಂತ ಎಲ್ಲಾ ಕಡೆ ಹರಡುತ್ತಿದೆ.

ಛೇರ್ಮನ್.—ಬೇರೆ ಸಲಹೆಗಳೇನಾದರೂ ಇದ್ದರೆ ಕೊಡಿ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ, ಇದು ಅಸಮಾನ್ಯ ವಿಷಯ. ನಮ್ಮ ಭಾವನೆಗಳನ್ನು ಹೇಳುವುದಕ್ಕೆ ಅವಕಾಶ ಕೊಡಿ ಈ ಕಡೆ ಸದಸ್ಯರಾಗಲೀ, ಆ ಕಡೆ ಸದಸ್ಯರಾಗಲೀ ಎಲ್ಲರಿಗೂ ಅವಕಾಶ ಕೊಡಿ. ಇಂಥ ಸಮಸ್ಯೆ ಹಿಂದೆಂದೂ ಉದ್ಭವಿಸಿರಲಿಲ್ಲ. ಸ್ವಾತಂತ್ರ್ಯ ನಂತರ ಎಂದೂ ಉದ್ಭವಿಸಿರಲಿಲ್ಲ. ನಮ್ಮ ಸರ್ಕಾರ ಪ್ರಜಾ ಸರ್ಕಾರ ಎಂದು ಭಾಷಣ ಮಾಡುತ್ತೇವೆ. ಬರೀ ಭಾಷಣದಿಂದ ಸಮಸ್ಯೆ ಬಗೆಹರಿಯುವುದಿಲ್ಲ. ಇವತ್ತು ಅವನು ಎದ್ದುನಿಂತಿದ್ದಾನೆ. ಇವತ್ತು ಇದನ್ನು ತಡೆಯುವುದಕ್ಕೆ ಇರತಕ್ಕ ಮಾರ್ಗ ಒಂದೇ ಒಂದು. ಅವರ ಬೇಡಿಕೆಗಳನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳಿ. ಇದರಿಂದ ಮಾತ್ರ ಅವರ ಚಳುವಳಿಯನ್ನು ತಡೆಯಬಹುದೇ ವಿನಹ ಬಂದೂಕಿನಿಂದ ತಡೆಯುವುದಕ್ಕಾಗುವುದಿಲ್ಲವೆಂಬ ಮಾತನ್ನು ಪದೇಪದೇ ಹೇಳುವುದಕ್ಕೆ ಇಷ್ಟಪಡುತ್ತೇನೆ. ಪೋಲೀಸರ ಮುಖಾಂತರ ರೈತರನ್ನು ಕೊಲ್ಲುವುದಕ್ಕೆ ಹೊರಟಿದ್ದೀರಿ. ಪೋಲೀಸರೂ ಕೂಡ ರೈತರ ಮಕ್ಕಳೇ. ಈ

ದಿನ ಸಂಬಳ ತೆಗೆದುಕೊಳ್ಳುವುದಕ್ಕೋಸ್ಕರ ಪೋಲೀಸರು ನಿಮ್ಮ ಆಜ್ಞೆಗಳನ್ನು ಅನುಸರಿಸಿ ಗುಂಡು ಹಾರಿಸುವುದಕ್ಕೆ ಹೊರಟಿದ್ದಾರೆ. ಆದರೆ ಅವರೇ ರೊಚ್ಚಿಗೆದ್ದರೆ ಬಂದೂಕವನ್ನು ಯಾವ ಕಡೆ ತಿರುಗಿಸುತ್ತಾರೋ ಗೊತ್ತಿಲ್ಲ ನೀವು ಸ್ವಲ್ಪ ಎಚ್ಚರಿಕೆಯಿಂದ ಕೆಲಸ ಮಾಡಬೇಕಾಗಿದೆ.

(ಗೊಂದಲ)

ಶ್ರೀ ಬಸವರಾಜಪ್ಪ ಪಾಟೀಲ್.—ಬರೀ ರಾಜಕೀಯ ಭಾಷಣವಾಯಿತೇ ಹೊರತು ಇದರಲ್ಲಿ ಒಂದಾದರೂ ಸಲಹೆಗಳಿದೆಯೇ?

ಶ್ರೀ ಜಿ. ಕೆ. ತಕ್ಕೇದ್.—ಹೇಳಿದ್ದನ್ನೇ ಹೇಳುತ್ತಿದ್ದಾರೆ.

ಛೇರ್ಮನ್.—ಪರಿಸ್ಥಿತಿಯನ್ನು ಶಾಂತರೀತಿಯಲ್ಲಿ ಪರ್ಯವಸಾನ ಮಾಡಬೇಕು ಎಂಬ ಕಳಕಳಿ ಎಲ್ಲರಿಗೂ ಇದೆ, ಅದನ್ನು ಯಾವರೀತಿ ಮಾಡಬೇಕು ಎಂಬುದರ ಬಗ್ಗೆ ಸಲಹೆ ಕೊಡುವುದಕ್ಕೆ ಹೆಚ್ಚು ಪ್ರಾಮುಖ್ಯತೆ, ಮಹತ್ವ ಕೊಟ್ಟು ಮಾತನಾಡಬೇಕೇ ವಿನಹ ಪ್ರಚೋದಕವಾದ ಹೇಳಿಕೆಗಳು ಬೇಡ.

ಶ್ರೀ ಟಿ. ಬಿ. ಜಯಚಂದ್ರ.—ಇವರಿಗೆ ಸಮಸ್ಯೆ, ಸಮಸ್ಯೆಯಾಗಿಯೇ ಉಳಿಯಬೇಕೇ ವಿನಹ ಬಗೆಹರಿಸುವುದು ಬೇಕಾಗಿಲ್ಲ. ವಿರೋಧಪಕ್ಷದವರಿಗೆ ತಾವು ಮಾತನಾಡುವ ಚಾಕಚಕ್ಯತೆಯನ್ನು ತೋರಿಸಿಕೊಳ್ಳಬೇಕೆಂಬುದು ಬಿಟ್ಟರೆ ಸಮಸ್ಯೆ ಬಗೆಹರಿಯುವುದು ಬೇಕಾಗಿಲ್ಲ.

SRI K. BHASKAR NAIDU.—Sir, he is speaking like Mark Antony.

SRI A. LAKSHMI SAGAR.—If that is the wish you and I cannot prevent it. The blame is entirely on the Government and on the Chief Minister. You are going to hold squarely responsible for this state of affairs that has now arisen and continued to rise.

ಶ್ರೀ ಜಿ. ಕೆ. ತಕ್ಕೇದ್.—ತಮ್ಮ ಭಾಷಣದಿಂದ ಸಮಸ್ಯೆಯನ್ನು ಬಿಡಿಸುವುದಕ್ಕಾಗುವುದಿಲ್ಲ; ನೀವು ಸಮಸ್ಯೆಯನ್ನು ಬಿಡಿಸುವ ಬದಲು ಇನ್ನೂ ಜಟಿಲ ಮಾಡುತ್ತಿದ್ದೀರಿ.

(ಗೊಂದಲ)

CHAIRMAN.—Please co-operate with me.

SRI A. LAKSHMISAGAR.—Certainly I will co-operate. It is my duty to obey your command which I do, but I must have my say in the matter and that also I do. ನಾನು ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ರೈತರ ರಕ್ತವನ್ನು ಚೆಲ್ಲುವುದಕ್ಕೆ ಪ್ರಯತ್ನ ಮಾಡಬೇಡಿ.

ಶ್ರೀ ಎ. ಬಿ. ಜಕನೂರ್.—ನಿಲುವಳಿ ಸೂಚನೆ ಅಡ್ಮಿಸಬಲಿಟಿ ಹಂತದಲ್ಲಿರುವಾಗ ಸರ್ಕಾರಕ್ಕೆ ಹೆದರಿಸುವುದೇನಿದೆ ?

ಛೇರ್ಮನ್.—ಸದಸ್ಯರನ್ನು ಕೆರಳಿಸತಕ್ಕ ಭಾಷೆಯನ್ನು ಉಪಯೋಗಿಸಬೇಡಿ. ನಿಮಗೆ ಚೆನ್ನಾಗಿ ಪ್ರತಿಪಾದನೆ ಮಾಡುವುದಕ್ಕೆ ಬರುತ್ತದೆ. ಒಂದೇ ವಿಚಾರವನ್ನು ಪದೇಪದೇ ಹೇಳುತ್ತಿರುವುದರಿಂದ ಮುಂದಕ್ಕೆ ಹೋಗುವುದಕ್ಕಾಗುತ್ತಿಲ್ಲ. ತುಂಬಾ ತೊಂದರೆಯಾಗುತ್ತದೆ. ದಯವಿಟ್ಟು ಸಹಕರಿಸಿ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರುಗಳು ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸೂಚನೆ ಕೊಡಿ ಎಂದು ಹೇಳಿದರು. ನನ್ನ ಮೊದಲನೇ ಸೂಚನೆ ಏನೆಂದರೆ ಪೋಲೀಸರನ್ನು ರೈತರ ಮೇಲೆ ಉಪಯೋಗಿಸಬೇಡಿ ಎಂಬುದು.

ಶ್ರೀ ಬಿ. ಎನ್. ಕೆಂಗೇಗೌಡ.—ಸ್ವಾಮಿ, ನಾನು ಕ್ರಿಯಾಲೋಪ ಎತ್ತುತ್ತಿದ್ದೇನೆ. ಈಗ ನಿಲುವಳಿ ಸೂಚನೆ ಅಡ್ಮಿಸಬಲಿಟಿ ಬಗ್ಗೆ ಮಾತನಾಡಬೇಕೇ ಹೊರತು ಬರೀ ಪ್ರಚೋದನೆಯನ್ನುಂಟು ಮಾಡತಕ್ಕ ವಿಚಾರವನ್ನೇ ಮಾತನಾಡುತ್ತಿದ್ದರೆ ಹೇಗೆ ? ನಾನು ಮೊದಲಿನಿಂದಲೂ ಕೇಳುತ್ತಿದ್ದೇನೆ ಮಧ್ಯೆ ಮಧ್ಯೆ ಪ್ರಚೋದನೆ ಮಾಡತಕ್ಕ ಮಾತುಗಳನ್ನು ಮಾನ್ಯ ಸದಸ್ಯರು ಆಡುತ್ತಿದ್ದಾರೆ, ಇದು ಸರಿಯೇ ? ಎರಡನೆಯದಾಗಿ, ನಿರ್ಣಯದ ಮೇಲಿನ ಚರ್ಚೆಗೆ ಕಾಲಮಿತಿಯನ್ನು ನಿಗದಿ ಮಾಡಬೇಕಾಗು

ತ್ತದೆ ಮಾನ್ಯ ಸದಸ್ಯರ ಭಾಷಣದ ಶೈಲಿ ಸಂಜೆ [illegible] ಗಂಟೆಯವರೆಗೂ ಇದೇ ವಿಚಾರದಲ್ಲಿ ಕಾರ್ಯಕಲಾಪಗಳು ನಡೆಯಬೇಕೆನ್ನುವ ಧಾಟಿಯಲ್ಲಿ ಹೊರಟರೆ, ಮಾನ್ಯ ಅಧ್ಯಕ್ಷರು ಕಾಲ ನಿಗದಿ ಮಾಡಬೇಕಾಗುತ್ತದೆ. ಜೊತೆಗೆ ಪ್ರಚೋದನೆಯಾಗುವಂಥ ಧಾಟಿಯಲ್ಲಿ ಅವರು ಭಾಷಣ ಮಾಡದ ಹಾಗೆ ಸೂಚನೆ ಕೊಡಬೇಕೆಂದು ಪ್ರಾರ್ಥಿಸುತ್ತೇನೆ. ಇದೇ ನನ್ನ ಕ್ರಿಯಾಲೋಪ.

ಅಧ್ಯಕ್ಷರು.—ಮಾನ್ಯ ಸದಸ್ಯರು ಹೇಳಬೇಕೆಂದಿರುವುದನ್ನು ದಯವಿಟ್ಟು ಇನ್ನೈದು ನಿಮಿಷಗಳಲ್ಲಿ ಹೇಳಿ ಮುಗಿಸಬೇಕೆಂದು ಪ್ರಾರ್ಥನೆ.

ಶ್ರೀ ಎ. ಲಕ್ಷ್ಮೀಸಾಗರ್.—ಬರೀ ಶಕ್ತಿಯಿಂದ ದಮನ ಮಾಡುತ್ತೇವೆನ್ನುವ ಧೋರಣೆಯನ್ನು ಸರ್ಕಾರ ತಕ್ಷಣ ಬಿಡಬೇಕು.

ಶ್ರೀ ಶಿವಪ್ಪ.—ಮತ್ತೆ ಅದನ್ನೇ ಹೇಳಿ, ಮಾನ್ಯ ಸದಸ್ಯರು ಉದ್ರೇಕಗೊಳಿಸುತ್ತಿದ್ದಾರೆ.

ಶ್ರೀ ಎಸ್. ಲಿಂಗಯ್ಯ.—ಹಾಗಾದರೆ ಅವರು ಬರೆದುಕೊಟ್ಟಿದ್ದನ್ನು ನಾವು ಓದಬೇಕೇ ನಮಗೆ ಸ್ವಾತಂತ್ರ್ಯವಿಲ್ಲವೆ ?

ಶ್ರೀ ಬಿ. ವಿ. ಕಕ್ಕಿಲಾಯ.—ಸಂಸದೀಯವಲ್ಲದ ಪದಗಳನ್ನು ಅವರು ಉಪಯೋಗಿಸುತ್ತಿಲ್ಲ ಅವರಿಗೆ ತೋಚಿದ ರೀತಿಯಲ್ಲಿ ನಿರ್ಣಯವನ್ನು ಸಮರ್ಥನೆ ಮಾಡಿಕೊಳ್ಳುವುದನ್ನು ಬಿಟ್ಟು ಅವರನ್ನು (ಆಡಳಿತ ಪಕ್ಷದವರನ್ನು) ಹೇಳಿ ಕೇಳಿ ಮಾತನಾಡಬೇಕೇನು ?

ಶ್ರೀ ಟಿ. ಬಿ. ಜಯಚಂದ್ರ.—ನಿಮಗೆ ತೋಚುವ ಹಾಗೆ ಭಾಷಣ ಮಾಡುವ ಹಾಗಿದ್ದರೆ ಹೊರಗಡೆಗೆ ಹೋಗಿ ಭಾಷಣ ಮಾಡಬಹುದು. ಇಲ್ಲಲ್ಲ.

ಶ್ರೀ ಎಸ್. ಲಿಂಗಯ್ಯ.—ಮಾನ್ಯ ಅಧ್ಯಕ್ಷರೇ, ಏನಿದರ ಅರ್ಥ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಆದಷ್ಟು ಜಾಗ್ರತೆ ಭಾಷಣ ಮುಗಿಸಬೇಕೆಂದು ತಾವು ಮಾನ್ಯ ಸದಸ್ಯರಿಗೆ ಸೂಚನೆ ಕೊಟ್ಟಿದ್ದೀರಿ. ಮಾನ್ಯ ಸದಸ್ಯರು ಮಾತನಾಡುತ್ತಿರುವಾಗ, ಆ ಕಡೆಯ ಸದಸ್ಯರು ಮಾತೆತ್ತಿದರೆ ಪ್ರಚೋದನೆಯಾಗುತ್ತದೆಂದು ಹೇಳುವುದು ಸರಿಯಲ್ಲ. "ದಮನ ಮಾಡುತ್ತೇವೆ......" ಎನ್ನುವ ಪದಗಳನ್ನು ಉಪಯೋಗಿಸಿದರೆ ಅದು ಪ್ರಚೋದನೆಗೆ ಅವಕಾಶವಾಗುತ್ತದೆಂದು ಆ ಕಡೆಯ ಮಾನ್ಯ ಸದಸ್ಯರುಗಳು ಎದ್ದರೆ, ನಾವು ಮುಂದೆ ಯಾವ ರೀತಿ ಮಾತನಾಡಬೇಕಾಗುತ್ತದೆ ? ಇಲ್ಲಿ ಗಂಭೀರವಾದ ವಿಚಾರವಿದೆ. ತಮಗೂ ಆತಂಕವಿದೆ, ಈ ಸದನದ ಸಮಯ ಹೋಗುತ್ತಿದೆ. ಜೊತೆಗೆ, ಮಾನ್ಯ ಸದಸ್ಯರ ಭಾಷಣದ ಧಾಟಿ ಮತ್ತು ಶೈಲಿ ತಮಗೆ ಗೊತ್ತಿದೆ. ಆದುದರಿಂದ, ತಾವು ನಮಗೆ ರಕ್ಷಣೆ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ವೈ. ರಾಮಕೃಷ್ಣ.—ತಾವು ಭಾಷಣ ಮಾಡುವಾಗ ಯಾರು ಅಡ್ಡಿಪಡಿಸಲಿಲ್ಲ ಮಾತನಾಡುವುದಕ್ಕೂ ಒಂದು ಮಿತಿ ಇರುತ್ತದೆ. ಬಂದೂಕು ತಿರುಗಿಸುತ್ತಾರೆಂದು ಏತಕ್ಕೆ ಹೇಳಬೇಕು ?

ಛೇರ್ಮನ್.—ವಿಷಯದ ಪ್ರಾಮುಖ್ಯತೆ ಕಡಿಮೆಯಾಗದ ರೀತಿಯಲ್ಲಿ ಮತ್ತು ಚರ್ಚೆ ಫಲಪ್ರದವಾದ ರೀತಿಯಲ್ಲಿ ನಡೆಯಬೇಕೆಂದರೆ ಕೆಲವು ಮಿತಿಗಳನ್ನು ನಮ್ಮಷ್ಟಕ್ಕೆ ನಾವೇ ಹಾಕಿಕೊಳ್ಳಬೇಕೆಂದು ನಾನು ಸೂಚನೆ ಕೊಟ್ಟೆ. ಮಾನ್ಯ ಸದಸ್ಯರ ಭಾವನೆ ಎಷ್ಟು ಕೆರಳಿದ್ದರೂ, ಉದ್ವೇಗಗೊಂಡಿದ್ದರೂ ಅದನ್ನು ಪ್ರದರ್ಶನ ಮಾಡುವ ಜಾಗವಿದಲ್ಲ. ಅದರಿಂದ ಪ್ರಯೋಜನವೂ ಆಗುವುದಿಲ್ಲ. ಆದುದರಿಂದ, ಪ್ರಯೋಜನವಾಗುವ ರೀತಿಯಲ್ಲಿ ಭಾಷಣ ಮಾಡಬೇಕೆಂದು ನಾನು ಸೂಕ್ಷ್ಮವಾಗಿ ಹೇಳಿದ್ದೇನೆ.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಸದಸ್ಯರನ್ನು ನಿಯಂತ್ರಿಸಬೇಕೆಂದು ಕೆಲವು ಸದಸ್ಯರು ಸಲಹೆ ಕೊಟ್ಟಿದ್ದಾರೆ. ಮಾನ್ಯ ಸದಸ್ಯರು ನಿಯಮಕ್ಕೆ ವಿರುದ್ಧವಾಗಿ ಅಥವಾ ಆ ಸಂಸದೀಯ ಪದಗಳನ್ನುಪಯೋಗಿಸಿ ಮಾತನಾಡಿದರೆ ಅವರನ್ನು ನಿಯಂತ್ರಿಸಬಹುದು. ಒಟ್ಟಿನಲ್ಲಿ ಮಾನ್ಯ ಸದಸ್ಯರ ಭಾಷಣವನ್ನು ಕೇಳುವ ಸಹನೆ ಇಲ್ಲದಿದ್ದರೆ ಕಾರ್ಯಕಲಾಪ ಹೇಗೆ ನಡೆದೀತು ?

ಶ್ರೀ ವಿ. ಎ. ಮತ್ತಿಕಟ್ಟಿ.—ಮಾನ್ಯ ಬೊಮ್ಮಾಯಿಯವರು, ಕಕ್ಕಿಲಾಯ ಅವರು, ಸುಬ್ಬಯ್ಯಶೆಟ್ಟರು ಮತ್ತು ತಾವು ಮಾತನಾಡುವಾಗ ನಮ್ಮ ಕಡೆಯವರಾರೂ ಈ ರೀತಿ ಮಾಡಲಿಲ್ಲ. ಆದರೆ, ಮಾನ್ಯ ಲಕ್ಷ್ಮೀಸಾಗರ್‌ರವರು ವಿಷಯಕ್ಕೆ ಸಂಬಂಧವಿರದ ವಿಚಾರಗಳನ್ನು ಪ್ರಸ್ತಾಪ ಮಾಡುತ್ತಾ ಮತ್ತಷ್ಟು ಸಮಸ್ಯೆಗಳನ್ನು ಉದ್ಭವ ಮಾಡುತ್ತಿದ್ದಾರೆ. ವಿಷಯಕ್ಕೆ ಸಂಬಂಧಿಸಿದಂತೆ ನೇರವಾಗಿ ಪೂರಕ ವಿಚಾರ

ಗಳನ್ನು ಮಾತನಾಡುವುದನ್ನು ಬಿಟ್ಟು ರಾಜಕೀಯ ಮಾಡಲಿಕ್ಕೆ ಹೋದರೆ ನಾವದನ್ನು ಸಹಿಸುವುದಕ್ಕಾಗುವುದಿಲ್ಲ. ನಾವು ವಕೀಲರಲ್ಲ. ಉತ್ತು ಬಿತ್ತು ಬದುಕುವ ಜನ ನಾವು. ಅವರು ಸಮಸ್ಯೆಯನ್ನು ಹಿಡಿದುಕೊಂಡು ರಾಜಕೀಯ ಮಾಡುವುದು ಬೇಡ. ವಿಷಯಕ್ಕೆ ಸಂಬಂಧಿಸಿದಂತೆ ನೇರವಾಗಿ ಮತ್ತು ಪೂರಕವಾಗಿ ಮಾತನಾಡಲಿ ಎಂದು ನಾನು ಕೇಳಿಕೊಳ್ಳುತ್ತೇನೆ.

ಛೇರ್ಮನ್.—ಮಾನ್ಯ ಲಕ್ಷ್ಮೀಸಾಗರ್ ಅವರು ತಮ್ಮ ಭಾಷಣವನ್ನು ಮುಗಿಸಬಹುದು.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಅಷ್ಟು ಸಂಲಭವಾಗಿಲ್ಲ, ಇದು. ನಾನು ಬಳಸತಕ್ಕ ಭಾಷೆ ಅಸಂಸದೀಯವಾಗಿದ್ದರೆ ಅಥವಾ ಸಂವಿಧಾನದ ಭಾಷೆಗೆ ವಿರುದ್ಧವಾಗಿದರೆ ಅದನ್ನು ಕಡತದಿಂದ ಕಿತ್ತುಹಾಕಿಬಿಡಿ ನಾನು ಬೇಡವೆಂದು ಹೇಳುವುದಿಲ್ಲ. ನಾನು ಏನನ್ನೂ ಹೇಳಬಾರದು, ಸರ್ಕಾರವನ್ನು ಟೀಕೆ ಮಾಡಬಾರದು, ಅವರು ಹೇಳಿದ ರೀತಿಯಲ್ಲೇ ನಾನು ಭಾಷಣ ಮಾಡಬೇಕೆಂದರೆ ನಾನಿಲ್ಲಿ ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ಮನೆಗೆ ಹೋಗಬೇಕಾಗುತ್ತದೆ. ಇದನ್ನು ನಾನು ಸಹಿಸುವುದಕ್ಕಾಗುವುದಿಲ್ಲ. ಇದು ಯಾವ ನಿಯಮ ? ಸಭೆಯ ಅಧಿನಿಯಮಗಳ ವಿರುದ್ಧವಾಗಿ ಸಭ್ಯ ಭಾಷೆ ಬಳಸುವುದನ್ನು ಬಿಟ್ಟು ನಾನು ಮಾತನಾಡಿದ್ದೇ ಆದರೆ, ಆ ನನ್ನ ಮಾತುಗಳನ್ನು ಕಡತದಿಂದ ತೆಗೆದು ಹಾಕಿಬಿಡಿ. ಆದರೆ, ಅಧಿನಿಯಮಗಳಿಗನುಸಾರವಾಗಿ, ಕಾನೂನು ಬದ್ಧವಾಗಿ, ಮತ್ತು ಶಾಸ್ತ್ರೀಯವಾಗಿ ಸಭ್ಯ ಭಾಷೆಯನ್ನು ಉಪಯೋಗಿಸಿದ್ದರೂ ಕೂಡ, ನಾನು ಹಾಗೇ ಮಾತನಾಡಬೇಕು, ಹೀಗೆ ಮಾತನಾಡಬೇಕೆಂದು ಹೇಳಿದರೆ, ಅದು ನನ್ನ ಕೈಯಲ್ಲಿ ಆಗುವುದಿಲ್ಲ. ಸರ್ಕಾರದ ಲೋಪದೋಷಗಳನ್ನು ಎತ್ತಿತೋರಿಸುವುದು ನನ್ನ ಕರ್ತವ್ಯವೆಂದು ನಾನು ತಿಳಿದುಕೊಂಡಿದ್ದೇನೆ. The greatest living authority on the Constitution Ivor Jenning has said, "It is the duty of the opposition to oppose." ಬಹುಶಃ ಅದು ಅವರಿಗೆ ಗೊತ್ತಿಲ್ಲವೆಂದು ಕಾಣುತ್ತದೆ. ಅವರ ಮೆಚ್ಚುಗೆಗನುಗುಣವಾಗಿ ಮಾತನಾಡುವುದಕ್ಕೆ ನಾನಿಲ್ಲಿಗೆ ಬಂದಿಲ್ಲ. ಜನ ಆ ಕೆಲಸವನ್ನೂ ನನಗೆ ಕೊಟ್ಟಿಲ್ಲ. ನೀನು ವಿರೋಧ ಪಕ್ಷದಲ್ಲಿರು ಎಂದು ಜನ ನನಗೆ ಮತ ಕೊಟ್ಟಿದ್ದಾರೆ. ಸರ್ಕಾರವನ್ನು ಗಾಳಿಗೆ ತೂರುವುದು ನನ್ನ ಜವಾಬ್ದಾರಿ. ಆ ಕೆಲಸವನ್ನು ನಾನು ಮಾಡುತ್ತೇನೆ. ನನ್ನ ಜವಾಬ್ದಾರಿಯನ್ನು ಪಾಲಿಸುವಲ್ಲಿ ನನ್ನ ಶಕ್ತಿಮೀರಿ ದುಡಿಯುತ್ತೇನೆ. ಅದನ್ನು ಯಾರೂ ತಡೆಗಟ್ಟುವುದಕ್ಕೆ ಸಾಧ್ಯವಿಲ್ಲ. ಇಷ್ಟು ಮಾತ್ರ ಹೇಳುತ್ತೇನೆ. ರೈತರನ್ನು ತುಳಿಯುವುದಕ್ಕೆ ಪ್ರಯತ್ನ ಮಾಡಬೇಡಿ. ನಾನು ಸರ್ಕಾರವನ್ನು ಅಂಗಲಾಚಿಬೇಡುವುದಿಲ್ಲ. ರೈತರ ಸಮಸ್ಯೆಗಳಿಗೆ ಸಂಬಂಧಿಸಿದ ಕೆಲವು ಬೇಡಿಕೆಗಳನ್ನು ಇಡುತ್ತೇನೆ. ರೈತರ ಸಮಸ್ಯೆಗಳನ್ನು ಬಿಡಿಸಬೇಕೆಂದು ತಮಗೆ ಇಷ್ಟವಿದ್ದರೆ, ಇಚ್ಛೆ ಇದ್ದರೆ, ದೇವರು ಬುದ್ಧಿ ಕೊಟ್ಟಿದ್ದರೆ, ನಾಲ್ಕೈದು ಅಂಶಗಳನ್ನು ತಕ್ಷಣ ಸಭೆ ಮುಗಿಯುವುದರೊಳಗಾಗಿ ಇಲ್ಲಿ ಘೋಷಣೆ ಮಾಡಬೇಕು. ಇಲ್ಲದೆ ಹೋದರೆ ಚಳುವಳಿ ನಿಲ್ಲುವುದಿಲ್ಲವೆನ್ನುವುದು ನನ್ನ ಅಭಿಮತ.

ಮೊದಲನೆಯದಾಗಿ, ರೈತರು ಕೊಡಬೇಕಾದ ಸಾಲವನ್ನು ವಜಾ ಮಾಡುವುದು. ಈ ವಿಚಾರವಾಗಿ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆಯಲ್ಲಿ ಭಾಗವಹಿಸಿದಾಗಲೂ ನಾನು ಹೇಳಿದ್ದೇನೆ. ಈ ಕೆಲಸವನ್ನು ಇದೇ ಪಕ್ಷ ಅಧಿಕಾರದಲ್ಲಿರುವ ಮಹಾರಾಷ್ಟ್ರ ಸರ್ಕಾರ ಮಾಡಿದೆ, ತಮಿಳುನಾಡಿನ ಎಂ.ಜಿ.ಆರ್. ಸರ್ಕಾರ ಮಾಡಿದೆ. ಅದೇ ಪ್ರಕಾರ ಕರ್ನಾಟಕದಲ್ಲೂ ರೈತರು ಕೊಡಬೇಕಾದ ಸಾಲವನ್ನು ತಕ್ಷಣ ರದ್ದು ಮಾಡಬೇಕೆಂದು ಹೇಳುತ್ತೇನೆ. ಇದು ಮೊದಲನೆ ಕೆಲಸ.

ಎರಡನೆಯದಾಗಿ, ನ್ಯಾಯಾಂಗ ತನಿಖೆ ಮಾಡಲು ತಕ್ಷಣ ಘೋಷಣೆ ಮಾಡಬೇಕು, ಇದರಲ್ಲಿ ಹಿಂದು ಮುಂದು ನೋಡುವ ಅವಶ್ಯಕತೆ ಇಲ್ಲ. ನ್ಯಾಯಾಂಗ ವಿಚಾರಣೆ ಮಾಡಲಾಗುವುದೆಂದು ಮೊನ್ನೆ ಶನಿವಾರವೇ ಮಾನ್ಯ ಮುಖ್ಯ ಮಂತ್ರಿಗಳು ಘೋಷಣೆ ಮಾಡಿದ್ದರೆ ಬಹುಶಃ ಪರಿಸ್ಥಿತಿ ಎಷ್ಟು ವಿಕೋಪಕ್ಕೆ ಹೋಗುತ್ತಿತ್ತೆಂದು ನನಗನ್ನಿಸುವುದಿಲ್ಲ. ಆದುದರಿಂದ, ತಕ್ಷಣ ನ್ಯಾಯಾಂಗ ತನಿಖೆ ಕುರಿತು ಘೋಷಣೆಯಾಗಬೇಕ .

ಮೂರನೆಯದಾಗಿ, ರಾಸಾಯನಿಕ ಗೊಬ್ಬರದ ಬೆಲೆ ಕಡಿಮೆ ಮಾಡಬೇಕು. ಹೇಗೆ ಸ್ವಾಮಿ ರೈತ ಬದುಕುವುದು ? ಅವನು ಬೆಳೆ ಬೆಳೆದದ್ದನ್ನು ಮಾರಿದಾಗ, ಗೊಬ್ಬರಕ್ಕೆ ಹಾಕಿದ್ದ ಹಣವೂ ಬರದಿದ್ದರೆ ರೈತ ಬದುಕುವುದ ಹೇಗೆ ? ಆದುದರಿಂದ, ಸಬ್ಸಿಡಿ ರೂಪದಲ್ಲೋ ಅಥವಾ ಬೇರಾವ ರೂಪದಲ್ಲೋ ಅವನಿಗೆ ಸಹಾಯ ಮಾಡಬೇಕು. ಅಂತೂ, ಕೂಡಲೇ ರಾಸಾಯನಿಕ ಗೊಬ್ಬರದ ಬೆಲೆಯನ್ನು ಇಳಿಸಬೇಕು.

ಆಹಾರ ಪದಾರ್ಥಗಳ ಬೆಲೆಗಳನ್ನು ನಿಯಂತ್ರಿಸಿ ಕಡಿಮೆ ಮಾಡಲು ನೀವು ಏನಾದರೂ ಬೇಕಾದರೂ ಮಾಡಿ ಎಂದು ದೇವೇಗೌಡರು ಹೇಳಿದರು. ಆಹಾರ ಪದಾರ್ಥಗಳ ಬೆಲೆಗಳನ್ನು ನಿಯಂತ್ರಣ ಮಾಡುವುದರಲ್ಲಿ ರಾಜ್ಯ ಸರ್ಕಾರದವರಷ್ಟೇ ಹೊಣೆಯಲ್ಲ, ಕೇಂದ್ರ ಸರ್ಕಾರದ್ದು ಹೊಣೆ ಇದೆಯೆಂದು ಹೇಳಿದ್ದಾರೆ.

SRI SHEERNALY CHANDRASHEKAR —I raise a point of order. The motion of adjournment comes under rule 50. The matter must be specific and of recent incident. This being so, the Chair should not permit the member to speak at length unless the adjournment motion is admitted. I want a ruling from the Chair.

CHAIRMAN. I agree that it should be a definite matter of public importance but the Hon. member is making preliminary submissions.

SRI A. LAKSHMI SAGAR.—When I rose to speak on the motion, as called by you, I was only making my submissions.

SRI A. B. JAKANUR.—This practice of tactics is going on right from the beginning.

SRI A. LAKSHMI SAGAR.—There is a saying in law, my friend Mr. Chandrashekhar will readily accept that. "Custom outweighs the written text of laws." The practice of this House has been that. I should like to remind my friend Sri Chandrasekhar of the practice which has been invariably followed in this House at any rate during the period I have been a member of this House. If he does not understand it, the mistake is not mine.

CHAIRMAN.—As I have already told you, he is making a preliminary submission. While doing so, I do understand sometimes he has gone beyond the scope. Never the less, in the interest of allowing subject to be discussed, I allow him to speak.

SRI SHEERNALY CHANDRASHEKHAR.—Sir You must not allow this motion If you allow this matter to be discussed, then you will be admitting the motion.

CHAIRMAN.—I have permitted him to speak. That is sufficient for your purpose.

SRI A. LAKSHMI SAGAR.—I strongly object to the use of the expression 'tactics'. I am not requesting you to expunge it, let it be on record. But I take strong objection for the word 'tactics', because he has used that word.

ಸಭಾಪತಿಯವರು.—ಅವರು ಪ್ರಿಲಿಮಿನರಿಯಾಗಿ ಹೇಳುತ್ತಿದ್ದಾರೆ. ಪ್ರಿಲಿಮಿನರಿಯಾಗಿ ವಿಚಾರವನ್ನು ಹೇಳತಕ್ಕ ಕಾಲದಲ್ಲಿ ಅವರು ಎಷ್ಟು ಮಾತನಾಡಬೇಕಾಗಿತ್ತೋ ಅದಕ್ಕಿಂತ ಮೀರಿ ಮಾತನಾಡಿದ್ದಾರೆನ್ನುವ ಭಾವನೆ ನಿಮಗೆ ಇರಬಹುದು. ವಿಷಯ ಪ್ರಾಮುಖ್ಯವಾಗಿರುವುದರಿಂದ ಅವರಿಗೆ ಹೆಚ್ಚಿನ ಅವಕಾಶ ಕೊಟ್ಟಿದ್ದೇನೆ. ನೀವು ಅದನ್ನು ಪ್ರಶ್ನೆ ಮಾಡುವ ಹಾಗಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ, ನನ್ನ ಸಲಹೆ ರೈತ ಮುಖಂಡರುಗಳನ್ನು ಬೆಂಗಳೂರಿಗೆ ಕರೆಸಿ ಸಂಧಾನ ನಡೆಸಬೇಕು. ಸಂಧಾನ ಯಾವ ಮಟ್ಟದಲ್ಲಿ ಆಗಬೇಕೆಂದರೆ ಇವತ್ತು ಅನೇಕ ಜನ ರೈತ

ಮುಖಂಡರುಗಳು ಜೈಲಿನಲ್ಲಿದ್ದಾರೆ. ಕೆಲವು ಜನ ರೈತ ಮುಖಂಡರುಗಳು ಭೂಗತವಾಗಿ ತಲೆತಪ್ಪಿಸಿ ಕೊಂಡಿದ್ದಾರೆ. ಮುಕ್ತ ವಾತಾವರಣ ಇರಬೇಕು. ಮುಕ್ತ ವಾತಾವರಣದಲ್ಲಿ ಈ ಸಮಸ್ಯೆಗಳನ್ನು ಬಗೆ ಹರಿಸುವುದಕ್ಕೆ ಸರ್ಕಾರ ತಕ್ಕ ಕ್ರಮಗಳನ್ನು ಕೈಗೊಳ್ಳಬೇಕು. ಯಾವ ಯಾವ ಭಾಗದಲ್ಲಿ ಈ ಚಳುವಳಿ ನಡೆಯುತ್ತಿದೆ ; ಅಲ್ಲಿರತಕ್ಕ ಎಲ್ಲ ರೈತ ಮುಖಂಡರುಗಳನ್ನು ಕರೆಸಿ ಮಾತನಾಡುವುದು ಸೂಕ್ತವಾದುದು. ಈ ರೀತಿ ಮಾಡಿದರೆ ಈ ಸಮಸ್ಯೆಯ ಪರಿಹಾರಕ್ಕೆ ತಕ್ಷಣ ಪರಿಹಾರ ಸಿಗತ್ತದೆಂಬುದು ನನ್ನ ಅಭಿಪ್ರಾಯ. ಜೈಲಿನಲ್ಲಿರತಕ್ಕ ರೈತ ಮುಖಂಡರುಗಳನ್ನು ಬಿಡುಗಡೆ ಮಾಡಬೇಕು. ಭೂಗತವಾಗಿರತಕ್ಕ ರೈತ ನಾಯಕರುಗಳ ಮೇಲೆ ಇರತಕ್ಕ ದೂರುಗಳನ್ನು ವಾಪಸ್ಸು ತೆಗೆದುಕೊಳ್ಳಬೇಕು. ರೈತರ ನ್ಯಾಯವಾದ ಬೇಡಿಕೆಗಳನ್ನು ಒಪ್ಪಿ ಸರ್ಕಾರ ತೀರ್ಮಾನ ಮಾಡದೇ ಹೋದರೆ ಈ ಸಮಸ್ಯೆ ಬಗೆಹರಿಯುವುದಿಲ್ಲ. ಮಾನ್ಯ ಪಟೇಲರು ಹೇಳಿದ ಹಾಗೆ ಸರ್ಕಾರ ತನ್ನ ತೀರ್ಮಾನವನ್ನು ಘೋಷಣೆ ಮಾಡದೇ ಹೋದರೆ ಈ ಜಾಗ ಬಿಡುತ್ತೇವೆ: ಅವರ ಜೊತೆಗೆ ನಾವು ಹೋಗುತ್ತೇವೆ. ನಮಗೆ ಸಾವು ಇದ್ದರೆ ಅವರ ಜೊತೆಯಲ್ಲಿ ಸಾಯೋಣ, ಜೀವ ಉಳಿದರೆ ಉಳಿಯಲಿ. ಆದ್ದರಿಂದ ಈ ವಿಚಾರವನ್ನು ಸರ್ಕಾರ ತಿಳಿಯಾಗಿ ತೆಗೆದು ಕೊಳ್ಳಬಾರದು, ಈ ವಿಚಾರವನ್ನು ತೀವ್ರವಾಗಿ ಪರಿಹಾರ ಮಾಡಬೇಕೆಂದು ನಾನು ತೀಕ್ಷ್ಣವಾಗಿ, ಕಡ್ಡಾಯವಾಗಿ ಸರ್ಕಾರಕ್ಕೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ ಈ ತಿಂಗಳು ೨೧ನೇ ತಾರೀಖು ನರಗುಂದ, ನವಲುಗುಂದದಲ್ಲಿ ನಡೆದಂತ ಘಟನೆಗಳ ಬಗ್ಗೆ ಈ ಸಭೆಯಲ್ಲಿ ಚರ್ಚೆ ನಡೆದಿದೆ. ಮೊನ್ನೆ ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆ ಕೊಟ್ಟಿದ್ದಾರೆ. ಅದು ಕೇವಲ ಅಧಿಕಾರಿಗಳು ಕೊಟ್ಟಂತ ಹೇಳಿಕೆ. ಅದನ್ನು ಮುಖ್ಯಮಂತ್ರಿಗಳು ಸರ್ಕಾರದ ಮುಖ್ಯಸ್ಥರಾಗಿ ಕೊಟ್ಟಿದ್ದಾರೆ. ಜನತೆಯ ಪ್ರತಿನಿಧಿಯಾಗಿ ಮುಖ್ಯಮಂತ್ರಿಗಳ ಹೇಳಿಕೆ ಇದರಲ್ಲಿ ಇಲ್ಲ. ರೈತರ ಚಳುವಳಿಯ ಬಗ್ಗೆ ಒಂದು ಪದ ಕೂಡ ಇದರಲ್ಲಿ ಇಲ್ಲ. ಎರಡು ತಿಂಗಳಿಂದ ಶಾಂತಿಯುತವಾಗಿ ಚಳುವಳಿ ಮಾಡುತ್ತಿರುವಂತ ರೈತರಿಗೆ ಈ ಹೇಳಿಕೆ ಹಿಡಿಸು ವುದಿಲ್ಲವೆಂದು ಹೇಳಿದ್ದೇನೆ. ಇದಾದ ಮೇಲೆ, ಮುಖ್ಯಮಂತ್ರಿಗಳು ಅಲ್ಲಿಗೆ ಹೋಗಿದ್ದಾಗ ಕೆಲವಾರು ಮಾತುಗಳನ್ನು ಹೇಳಿದ್ದಾರೆ. ಏನು ಹೇಳಿದ್ದಾರೆ ಅಂದರೆ, ನರಗುಂದ ಮತ್ತು ನವಲುಗುಂದ ಚಳುವಳಿಯ ಹಿಂದೆ ಯಾರು ಯಾರು ನಾಯಕರಿದ್ದಾರೆ ಅವರ ಒಂದು ಪಟ್ಟಿಯನ್ನು ಕೊಡಿ ಎಂದು ಕೇಳಿದ್ದಾರೆ. ರೈತರುಗಳು ಚಳುವಳಿಯಲ್ಲಿ ಟ್ರ್ಯಾಕ್ಟರುಗಳನ್ನು ಉಪಯೋಗಿಸಿದ್ದಾರೆ, ಆ ನಂಬರುಗಳನ್ನು ಕೊಡಿ ಎಂದು ಕೂಡ ಕೇಳಿದ್ದಾರೆ. ಹಾಗಾದರೆ ಇದು ದೊಂಬಿ ಗಲಾಟೆ ಎಂದು ಸರ್ಕಾರದ ಒಂದು ಅಭಿಪ್ರಾಯವೆ ? ಇವತ್ತು ಮುಖ್ಯಮಂತ್ರಿಗಳ ಹೇಳಿಕೆ ಮೇಲೆ ಅನೇಕ ಜನ ರೈತರು, ರೈತ ಸಂಘಗಳು ಹೇಳಿಕೆಯನ್ನು ನೀಡಿ, ಇವತ್ತು ಸರ್ಕಾರಕ್ಕೆ ರೈತರ ಚಳುವಳಿಯ ಬಗ್ಗೆ ವಿಶ್ವಾಸ ಇಲ್ಲ. ಸಮಾಜ ಘಾತುಕ ಚಳುವಳಿ ಎಂದು ಮಾನ್ಯ ಮುಖ್ಯಮಂತ್ರಿಗಳು ಅರ್ಥಮಾಡಿಕೊಂಡಿದ್ದಾರೆ ಎಂದು ಹೇಳಿಕೆ ಕೊಟ್ಟಿದ್ದಾರೆ. ೨೧ರ ರೈತರ ಚಳುವಳಿಯ ಜೊತೆಗೆ ಇದನ್ನೇ ಉಪಯೋಗಿಸಿಕೊಂಡು ಬೆಲೆ ಏರಿಕೆ ವಿರುದ್ಧ ಕೂಡ ಚಳುವಳಿ ಶುರುವಾಗಿದೆ. ಬೆಲೆ ಏರಿಸಿರುವವರು ಸಮಾಜ ಘಾತುಕರಲ್ಲವೆ ? ಸಾಮಾನ್ಯವಾಗಿ ವ್ಯಾಪಾರಸ್ಥರು ಇರಬಹುದು ? ಹೋಟೆಲ್ ಮಾಲೀಕರು ಇರಬಹುದು ? ಸರ್ಕಾರಿ ಅಧಿಕಾರಿಗಳು ಇರಬಹುದು ? ಅವರ ಜೊತೆಗೆ ಇವರು ಕೂಡ ಶಾಮೀಲಾಗಿರುತ್ತಾರೆ. ಇವತ್ತು ರೈತರು ಬೆಳೆಯುತಕ್ಕ ಪದಾರ್ಥಗಳಿಗೆ ಸರಿಯಾದ ಬೆಲೆ ಸಿಗುತ್ತಿಲ್ಲ. ಇವತ್ತು ಸರ್ಕಾರ ರೈತರ ಬಹಳಷ್ಟು ಸಮಸ್ಯೆಗಳನ್ನು ಪರಿಹರಿಸುವ ಗೋಜಿಗೆ ಹೋಗಿಲ್ಲ. ಇವತ್ತು ಇವರು ಉತ್ಪತ್ತಿ ಮಾಡುವಂತ ಜನ ಏನಿದ್ದಾರೆ ಇವರುಗಳಿಗೆ ಮಧ್ಯ ವರ್ತಿಗಳು, ಸಮಾಜ ಘಾತುಕ ಶಕ್ತಿಗಳು ಅಂದರೆ ಅಧಿಕಾರಿಗಳು ಇರಬಹುದು, ರೆವಿನ್ಯೂ ಇಲಾಖೆಯ ಅಧಿಕಾರಿಗಳಿರಬಹುದು, ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಇರಬಹುದು. ಪೋಲೀಸಿನವರು ಇರಬಹುದು, ಇವರು ಉತ್ಪಾದನೆ ಮಾಡಿದ ಪದಾರ್ಥಗಳಿಗೆ ಅಡಚಣೆ ತಂದು ಸರಿಯಾದ ಬೆಲೆ ಸಿಗದಂತೆ ಮಾಡುತ್ತಾರೆ. ಸಮಾಜ ಘಾತುಕ ಶಕ್ತಿಗಳು ರೈತರಿಂದ ಆಹಾರ ಪದಾರ್ಥಗಳನ್ನು ಕಡಿಮೆ ಬೆಲೆಗೆ ಕೊಂಡು ಹೆಚ್ಚಿನ ಲಾಭಗಳಿಸುವ ದೃಷ್ಟಿಯಿಂದ ಬೆಲೆಗಳನ್ನು ಏರಿಸುತ್ತಾರೆ.

ಅಧ್ಯಕ್ಷರೆ, ಇವೊತ್ತು ಮಧ್ಯವರ್ತಿಗಳು ಸಮಾಜಘಾತುಕರೆ ಹೊರತು, ಶಾಂತಿಯಿಂದ ಹೋರಾಟ ನಡೆಸತಕ್ಕವರು ಸಮಾಜಘಾತುಕರಲ್ಲ. ಇವೊತ್ತು ದೊಂಬಿ, ಗಲಾಟೆ ಅಂತ ಸಾಮಾನ್ಯವಾಗಿ ಮಾತ ನಾಡಿದ್ದರಿಂದ ರಾಜ್ಯಾದ್ಯಂತ ಹರಡಲಿಕ್ಕೆ ಕಾರಣವಾಯಿತು. ಬೆಲೆ ಏರಿಕೆ ವಿಚಾರದಲ್ಲಿ ಅಲ್ಲಿ ಭಾಗವಹಿಸಿದಂಥ ಜನರು ಮೊದಲು ಶಾಂತಿಯಿಂದ ಮೆರವಣಿಗೆ ಹೋಗಿ ಅದರ ಬಗ್ಗೆ ಪ್ರತಿ ಭಟನೆ ಮಾಡಿ ತಹಶೀಲ್ದಾರರಿಗೋ ಅಥವಾ ಬೇರೆ ಯಾವುದೋ ಅಧಿಕಾರಿಗೆ ಮನವಿ ಕೊಟ್ಟು ಬಂದಮೇಲೆ ಬೇರೆ ಯಾರೋ ಸಮಾಜಘಾತುಕರು ಇದನ್ನು ಮಾಡಿರಬಹುದು. ಸುಮಾರು ೫ ರಿಂದ ೧೦

ಸಾವಿರದ ವರೆಗೆ ಯಾವ ಜನ ಹೋಗಿ ಮೆರವಣಿಗೆಯಲ್ಲಿ ಹೋಗಿ ಪ್ರತಿಭಟನೆ ಸೂಚಿಸಿದರು ಅವರೆಲ್ಲರೂ ಸಮಾಜ ಘಾತುಕರು ಅಂತ ತೀರ್ಮಾನ ಮಾಡಬಾರದು.

(ಶ್ರೀ ಎಸ್. ಮುನಿರಾಜು ಅವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಅಧ್ಯಕ್ಷರೆ, ಇವೊತ್ತು ಬಿಜಾಪುರದಲ್ಲಿ ಇರತಕ್ಕ ವ್ಯಾಪಾರಸ್ಥರು ಬೆಲೆಗಳನ್ನು ಇಳಿಸಿದ್ದಾರೆ. ಅಲ್ಲಿ ಯಾವುದೇ ರೀತಿಯ ಬಂದ್ ಆಗಿಲ್ಲ. ಅಲ್ಲಿರತಕ್ಕ ವ್ಯಾಪಾರಸ್ಥರು, ಹೋಟೆಲ್ ಮಾಲೀಕರು, ಈ ವಿಚಾರದ ತೀವ್ರತೆಯನ್ನು ಅರ್ಥಮಾಡಿಕೊಂಡು ಬೆಲೆಯನ್ನು ಕಡಿಮೆ ಮಾಡಿದ್ದಾರೆ. ಅದಕ್ಕೆ ಜನತೆ ಮನ್ನಣೆ ಕೊಡುತ್ತಾರೆ. ಇವೊತ್ತು ಒಬ್ಬ ಖಾಸಗಿ ವ್ಯಕ್ತಿ ಬ್ಲಾಕ್‌ಮಾರ್ಕೆಟಿಯರ್ಸ್ ಹತ್ತಿರ ಎರಡು ಮೂಟೆ ಸಿಮೆಂಟ್ ಬೇಕು ಅಂತ ಹೋದಾಗ ಅವನು ೩೦ ರೂಪಾಯಿ ಬೆಲೆ ಬಾಳತಕ್ಕದ್ದಕ್ಕೆ ೬೦ ರೂಪಾಯಿ ಕೊಡಬೇಕು ಅಂತ ಹೇಳಿದಾಗ ಆತನ ಮೇಲೆ ಪ್ರತಿಭಟನೆ ಮಾಡಲಿಕ್ಕೆ ಆಗುವುದಿಲ್ಲ. ಅದೇ ರೀತಿ ಒಂದು ಕಿಲೋ ಸಕ್ಕರೆಗೆ ಒಂಭತ್ತು ರೂಪಾಯಿ ಕೊಡಬೇಕೆಂದು ಬ್ಲಾಕ್‌ಮಾರ್ಕೆಟಿಯರ್ಸ್ ಕೇಳಿದಾಗ ಪ್ರತಿಭಟನೆ ಮಾಡಲಿಕ್ಕೆ ಆಗುವುದಿಲ್ಲ, ಆಗ ಅವನು ಪೋಲೀಸ್ ಇಲಾಖೆಯಲ್ಲಿ ಹೋಗಿ ಕಂಪ್ಲೇಂಟ್ ಕೊಟ್ಟರು ತೆಗೆದುಕೊಳ್ಳುವುದಿಲ್ಲ, ಆಹಾರ ಇಲಾಖೆಯಲ್ಲಿ ಹೋಗಿ ಕಂಪ್ಲೇಂಟ್ ಕೊಟ್ಟರು ತೆಗೆದುಕೊಳ್ಳುವುದಿಲ್ಲ. ಇವೊತ್ತು ಒಂದು ಸಂಘದ ಸಂಘಟನೆ ಇದ್ದಾಗ ಅವರಿಗೆ ಧೈರ್ಯ ಬರುತ್ತದೆ. ಇಂತಹ ಸಂದರ್ಭದಲ್ಲಿ ಹಿಂದೆ ಹೆಚ್ಚು ಹಣ ಕೊಟ್ಟು ಮನ ನೊಂದಿರುವುದರಿಂದ ಒಂದು ಕಲ್ಲು ಹಾಕಲಿಕ್ಕೆ ಧೈರ್ಯ ಬರುತ್ತದೆ. ಹಿಂದೆ ಯಾರು ಯಾರು ಬ್ಲಾಕ್‌ಮಾರ್ಕೆಟಿಯರ್ಸ್ ಅಂತ ನೋಡಿಕೊಂಡು ಇವೊತ್ತು ಕಲ್ಲು ಹೊಡೆದಿದ್ದು ಇರಬಹುದು. ಇದೇ ಸರ್ಕಾರದ ಮುಖ್ಯಮಂತ್ರಿಗಳು ಬ್ಲಾಕ್‌ಮಾರ್ಕೆಟಿಯರ್ಸ್ ಆಹಾರಪದಾರ್ಥ ಮಾರುವವರು ಇರಲಿ. ಅಥವಾ ಇನ್ನು ಬೇರೆ ಯಾವುದೇ ಪದಾರ್ಥ ಮಾರುವವರು ಇರಲಿ ಅವರನ್ನೆಲ್ಲಾ ಪ್ರಿವೆನ್‌ಟೀವ್ ಡಿಟೆನ್‌ಷನ್ ಆ್ಯಕ್ಟ್‌ನಲ್ಲಿ ಅವರನ್ನು ಹಿಡಿದು ಅವರ ಫೋಟೋಗಳನ್ನು ಹಾಕಿಸುತ್ತೇನೆ ಅಂತ ಹೇಳಿದ್ದರು. ಇವೊತ್ತಿನವರೆಗೆ ಯಾರ ಯಾರ ಫೋಟೋಗಳು ಪತ್ರಿಕೆಗಳಲ್ಲಿ ಬಂದಿದೆ. ಸುಮಾರು ಆರು ತಿಂಗಳಿಂದಲೂ ಒಬ್ಬರದೂ ಫೋಟೋ ಬಂದಿಲ್ಲ. ಈ ರೀತಿ ಆದರೆ ಜನತೆ ಹೇಗೆ ಸರ್ಕಾರದಲ್ಲಿ ವಿಶ್ವಾಸ ಇಡಲಿಕ್ಕೆ ಸಾಧ್ಯ. ಇದುವರೆಗೂ ಇವರು ಹೇಳಿದಂಥ ವಿಚಾರದಲ್ಲಿ ಯಾವುದೇ ಪಾಲನೆ ಮಾಡದೇ ಇದ್ದಾಗ ಇವರ ಮೇಲೆ ಜನತೆಗೆ ಹೇಗೆ ವಿಶ್ವಾಸ ಬರುತ್ತದೆ. ಇವೊತ್ತು ಉತ್ಪಾದನೆ ಮಾಡತಕ್ಕ ರೈತರಿಗೆ ಅಧಿಕಾರಿಗಳಿಂದ ಶೋಷಣೆಯಾಗಿದೆ. ಸರ್ಕಾರದಿಂದ ರೈತರಿಗೆ ಆಗಬೇಕಾದ ಕೆಲಸಗಳು ಆಗಿಲ್ಲ. ರೈತರ ಬೇಡಿಕೆಗಳು ಏನಿವೆ ಅವುಗಳನ್ನು ಒಪ್ಪಿಕೊಂಡು ಅವರಿಗೆ ಪೂರ್ಣವಾದ ಪರಿಹಾರ ಕೊಡಬೇಕು. ಬ್ಲಾಕ್‌ಮಾರ್ಕೆಟಿಯರ್ಸ್‌ಗಳಿಂದ ಸಮಾಜಘಾತುಕ ವ್ಯಕ್ತಿಗಳಾಗಿರುವುದರಿಂದ ಇವೊತ್ತು ಬಳಕೆದಾರರಿಗೆ ತೊಂದರೆಯಾಗಿದೆ. ಸರ್ಕಾರಕ್ಕೆ ಬ್ಲಾಕ್‌ಮಾರ್ಕೆಟಿಯರ್ಸ್ ಯಾರು ಅಂತ ಗೊತ್ತು, ಪೋಲೀಸ್ ಇಲಾಖೆಗೆ ಗೊತ್ತಿದೆ, ಆಹಾರ ಇಲಾಖೆಗೆ ಗೊತ್ತಿದೆ. ತಾವು ಸರಿಯಾದ ರೀತಿಯಲ್ಲಿ ಕ್ರಮ ತೆಗೆದುಕೊಂಡು ಬೆಲೆಗಳನ್ನು ಕಡಿಮೆ ಮಾಡಿದರೆ, ಅವರ ಪ್ರಚೋದನೆಗಳು ಬರುವುದಿಲ್ಲ. ಇವೊತ್ತು ಎರಡು ಸಮಸ್ಯೆಗಳಿವೆ. ಒಂದು ಉತ್ಪಾದಕರ ಸಮಸ್ಯೆ, ಎರಡು ಬಳಕೆದಾರರ ಸಮಸ್ಯೆ. ಈ ಮಧ್ಯೆ ಇರುವ ಮಧ್ಯವರ್ತಿಗಳು ಏನಿದ್ದಾರೆ ಅವರನ್ನು ಹತ್ತಿಕ್ಕಬೇಕೇ ಹೊರತು ಬೇರೆ ಇನ್ನು ಏನೂ ಇಲ್ಲ. ಈ ವಿಚಾರದಲ್ಲಿ ಸರ್ಕಾರ ಕೇವಲ ಅಧಿಕಾರಿಗಳನ್ನು ಬಿಟ್ಟರೆ ಆಗುವುದಿಲ್ಲ. ನಾವು ನ್ಯಾಯಾಂಗ ತನಿಖೆ ಆಗಬೇಕು ಅಂತ ಏನು ಒತ್ತಾಯ ಹಾಕಿದ್ದೇವೆ ಅದನ್ನು ತಾವು ಒಪ್ಪಿಕೊಂಡರೆ ಆಗ ಎಲ್ಲಾ ವಿಚಾರಗಳು ಹೊರಗೆ ಬರುತ್ತದೆ. ಸಮಾಜಘಾತಕರು ಯಾರೇ ಇರಲಿ ಅವರು ಹೊರಗೆ ಬರುತ್ತಾರೆ. ಪೋಲೀಸರು ಮರಣ ಹೊಂದಿರುವುದನ್ನು ಯಾರೂ ಒಪ್ಪಿಕೊಳ್ಳುವುದಿಲ್ಲ. ಅವರ ನೋವನ್ನು ತೋರ್ಪಡಿಸಿಕೊಳ್ಳುವ ಸಮಯದಲ್ಲಿ ಆಗಿರಬಹುದು. ಆದರೆ ಇದರ ಹಿನ್ನೆಲೆ ಏನು ಅಂತ ಅರ್ಥ ಮಾಡಿಕೊಳ್ಳಬೇಕು. ಇವೊತ್ತು ಶರೀರದ ಒಳಭಾಗದಲ್ಲಿ ಆಗಿರತಕ್ಕ ಹುಣ್ಣಿಗೆ ಮೇಲುಭಾಗದಲ್ಲಿ ಔಷಧಿ ಹಾಕಿದರೆ ಅದು ಹೋಗುವುದಿಲ್ಲ. ನ್ಯಾಯಾಂಗ ತನಿಖೆಯನ್ನು ಮಾಡಿಸಿದರೆ ಅದು ಹೊರಗೆ ಬರುತ್ತದೆ. ರೈತರ ಚಳುವಳಿ ನಾಯಕರು ಏನಿದ್ದಾರೆ ಅದರಲ್ಲಿ ಅನೇಕ ಜನ ನಿರಪರಾಧಿಗಳಿದ್ದಾರೆ ನಾವು ನೋಡಿಕೊಂಡು ಬಂದಿದ್ದೇವೆ. ನರಗುಂದದಲ್ಲಿ ಅವೊತ್ತು ಆ ಜನ ಏಟುಬಿದ್ದವರನ್ನು ಆಸ್ಪತ್ರೆಗೆ ಸಾಗಿಸುವ ಏರ್ಪಾಡು ಮಾಡದೇ ಇದ್ದರೆ ಇನ್ನೆಷ್ಟೋ ಜನ ಸಾಯುತ್ತಿದ್ದರು. ಯಾವ ಜನರು ಏಟು ಬಿದ್ದಂತವರನ್ನು ಆಸ್ಪತ್ರೆಗೆ ಸಾಗಿಸಲಿಕ್ಕೆ ಪ್ರಯತ್ನ ಮಾಡಿದ್ದಾರೆ ಆ ಜನರನ್ನು ತೆಗೆದುಕೊಂಡು ಹೋಗಿ ಜೈಲಿನಲ್ಲಿ ಹಾಕಿದ್ದೀರಿ, ಅವರನ್ನು ಸಮಾಜಘಾತುಕರನ್ನಾಗಿ ಮಾಡಿದರೆ ಹೇಗೆ? ಸರ್ಕಾರದ ಮುಖ್ಯಮಂತ್ರಿಗಳವರ

ಆಡಳಿತದಲ್ಲಿರುವಂತ ಒಳಾಡಳಿತ ಇಲಾಖೆ ಏನಿದೆ ಅವರ ಕರ್ತವ್ಯ ಇದೆ, ಇವೊತ್ತು ನಿರಪರಾಧಿಗಳು ಯಾರಿದ್ದಾರೆ ಅವರನ್ನು ತಕ್ಷಣವೇ ಬಿಡುಗಡೆ ಮಾಡುವುದು ಒಳ್ಳೆಯದು ಉತ್ಪಾದಕರ, ಬಳಕೆದಾರರ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಬೇಕು. ಆ ನಾಯಕರನ್ನು ಕರೆಸಿ ಪರಿಹಾರ ಮಾಡಬೇಕು. ಇನ್ನು ನರಗುಂದ, ನವಲಗುಂದದಲ್ಲಿ ನಡೆದಂಥ ಘಟನೆ ಬಗ್ಗೆ ನ್ಯಾಯಾಂಗ ತನಿಖೆ ಆಯಿತು ಅಂದರೆ ಜನಗಳಲ್ಲಿ ಸರ್ಕಾರದ ಬಗ್ಗೆ ವಿಶ್ವಾಸ ಬರುತ್ತದೆ. ಯಾವುದೇ ಸಂದರ್ಭದಲ್ಲಿಯೂ ಎಲ್ಲೆ ಮೀರಿದಾಗ ಸರ್ಕಾರ ನಮ್ಮ ಸಹಾಯಕ್ಕೆ ಬರುತ್ತದೆ ಎನ್ನುವ ವಿಶ್ವಾಸ ಜನರಲ್ಲಿ ಬರುತ್ತದೆ. ಆದುದರಿಂದ ಸರ್ಕಾರ ನ್ಯಾಯಾಂಗ ತನಿಖೆಗೆ ಒಪ್ಪಿಕೊಳ್ಳಬೇಕು. ಹಾಗೆ ನಿರಪರಾಧಿಗಳನ್ನು ಬಿಡುಗಡೆ ಮಾಡಬೇಕು. ರೈತರ ಬಳಕೆದಾರರ ಮುಖ್ಯ ನಾಯಕರ ಪ್ರತಿನಿಧಿಗಳನ್ನು ಸ್ಥಳೀಯವಾಗಿ ಕರೆಯಿಸಿ ಅವರ ಸಮಸ್ಯೆಗಳಿಗೆ ಪರಿಹಾರ ಹುಡುಕಬೇಕೆಂದು ಮಾನ್ಯ ಅಧ್ಯಕ್ಷರಲ್ಲಿ ಕೇಳಿಕೊಂಡು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ರಮೇಶ್‌ಕುಮಾರ್ (ಶ್ರೀನಿವಾಸಪುರ).—ಅಧ್ಯಕ್ಷರೆ, ನಾನು ಈ ಸಂದರ್ಭದಲ್ಲಿ ಒಂದೇ ಒಂದು ಮಾತನ್ನು ತಿಳಿಸಲಿಕ್ಕೆ ಇಷ್ಟಪಡುತ್ತೇನೆ. ಈಗಾಗಲೇ ವಿರೋಧ ಪಕ್ಷದ ಎಲ್ಲ ಧುರೀಣರು ಸಾಕಷ್ಟು ಪ್ರಸ್ತಾಪ ಮಾಡಿ ವಿಷಯದ ಗಂಭೀರತೆಯನ್ನು ತಮ್ಮ ಗಮನಕ್ಕೆ ತರುವುದಕ್ಕೆ ಬಹಳ ಸತತ ಪ್ರಯತ್ನ ಪಟ್ಟಿದ್ದಾರೆ. ಮತ್ತೆ ನಾನು ಅದರ ಬಗ್ಗೆ ರಿಪೀಟ್ ಮಾಡಲಿಕ್ಕೆ ಹೋಗುವುದಿಲ್ಲ. ನಾನು ಒಂದೇ ಒಂದು ಮಾತನ್ನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಇವೊತ್ತು ಬಂದೂಕ ಬಲದಿಂದ ಈ ದೇಶವನ್ನು ಆಳಲಿಕ್ಕೆ ಸಾಧ್ಯವಿಲ್ಲ. ಚರಿತ್ರೆಯಲ್ಲಿ ಅನೇಕ ಘಟನೆಗಳು ಬಂದಿರತಕ್ಕದ್ದು ನಮ್ಮ ಕಣ್ಣೆದುರಿನಲ್ಲಿಯೇ ಇದೆ. ಹಾಗೆ ಮಾಡಿದವರು ಗಾಳಿಗೆ ಹೋಗಿದ್ದಾರೆ. ಇವೊತ್ತು ಯಾವ ಕುತೂಹಲದಿಂದ, ಯಾವ ಕಳಕಳಿಯಿಂದ ಆತ್ಮಪೂರ್ವಕವಾಗಿ ರೈತರ ಪರವಾಗಿ ಬೇಡಿಕೆಗಳನ್ನು ತಮ್ಮ ಮುಂದೆ ಇಟ್ಟಿದ್ದಾರೆ ಆ ಎಲ್ಲಾ ಬೇಡಿಕೆಗಳಿಗೂ ಸರ್ಕಾರ ತಕ್ಷಣ ಒಪ್ಪಿಗೆ ಕೊಡಬೇಕು. ಈ ಸಭೆಯ ಅಸ್ತಿತ್ವ, ಸರ್ಕಾರದ ಅಸ್ತಿತ್ವ, ನಮ್ಮ ಇಡೀ ಸಮಾಜ ವ್ಯವಸ್ಥೆಯ ಅಸ್ತಿತ್ವ ಏನಿದೆ, ಅದು ರೈತರ ಮೇಲೆ ಆಧಾರಬದ್ಧವಾಗಿದೆ. ಅವರ ಮನೋಭಾವಕ್ಕೆ ಗೌರವ ಕೊಡಬೇಕೆಂದು ಹೇಳಿ ಎರಡು ಮಾತುಗಳನ್ನು ಹೇಳಲಿಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಅಧ್ಯಕ್ಷರೇ, ಸಣ್ಣದಾಗಿ ಪ್ರಾರಂಭವಾಗಿ ಭೂಮಿ ಹೊಂದಿದ ರೈತರ ಮತ್ತು ಬಳಕೆದಾರರ ಚಳುವಳಿ ಇವೊತ್ತು ಬೃಹದಾಕಾರವಾಗಿ ನಮ್ಮ ರಾಜ್ಯದಲ್ಲಿ ಹರಡುತ್ತಿದೆ. ೨೬ನೇ ತಾರೀಖು ಶನಿವಾರ ಏನು ಈ ಸದನದಲ್ಲಿ ಚರ್ಚೆಯಾಯಿತು, ಆ ಚರ್ಚೆಯಾದ ನಂತರ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಟ್ಟರು. ಅದು ಆದ ಮೇಲೆ ಈ ರಾಜ್ಯದಲ್ಲಿ ಚಳುವಳಿ ನಿಲ್ಲುತ್ತದೆ ಎಂದು ನಿರೀಕ್ಷಣೆ ಎಲ್ಲರಿಗೂ ಇತ್ತು ಅದರಲ್ಲೂ ಸರ್ಕಾರ ನಡೆಸುತ್ತಿರತಕ್ಕಂತಹವರಿಗೆ ಮುಖ್ಯವಾಗಿ ಇತ್ತು ಎಂದು ಕಾಣುತ್ತದೆ. ಇವತ್ತು ಏನಾಗಿದೆ ಎಂದರೆ ಎಲ್ಲ ಕಡೆ ಈ ಚಳುವಳಿ ಹರಡುತ್ತಿದೆ ಜನಗಳು ದಿಕ್ಕೆಟ್ಟಿದ್ದಾರೆ. ಸಿಟ್ಟಿಗೆದ್ದಿದ್ದಾರೆ. ಸಿಟ್ಟಿಗೆದ್ದು ಗುಂಪಾಗಿ ಸೇರಿ ಸಭೆಯನ್ನು ಮಾಡುತ್ತಿದ್ದಾರೆ. ಅಷ್ಟೇ ಅಲ್ಲ ಅವರಿಗೆ ಮನಸ್ಸಿಗೆ ಬಂದ ರೀತಿಯಲ್ಲಿ ವರ್ತನೆ ಮಾಡತಕ್ಕಂತಹ ವಾತಾವರಣ ಸೃಷ್ಟಿಯಾಗುತ್ತಿದೆ. ಅದಕ್ಕೆ ಕಾರಣ ಸರ್ಕಾರದ ಪ್ರತಿಕ್ರಿಯೆ ಕೊಟ್ಟಂತಹ ಉತ್ತರ ಕಾರಣವಾಗಿದೆ. ಅಲ್ಲಿ ಏನಾಗಿದೆ ಅಂತ ಹೇಳುತ್ತಿದ್ದೇನೆ ಎಂದರೆ ಈ ಪೋಲೀಸಿನವರು ತಮ್ಮ ಕರ್ತವ್ಯವನ್ನು ಪರಿಪಾಲನೆ ಮಾಡಬಾರದು ಅಂತ ನಾನು ಹೇಳುತ್ತಿಲ್ಲ, ಶಾಂತಿಭಂಗವಾದಾಗ ಶಾಂತಿ ಪರಿಪಾಲನೆ ಮಾಡತಕ್ಕಂತಹದ್ದು ಸರ್ಕಾರದ ಕರ್ತವ್ಯ ಮತ್ತು ಪೋಲೀಸಿನವರ ಕರ್ತವ್ಯ. ಆದರೆ ಈಗ ನಡೆಯುತ್ತಿರತಕ್ಕಂತಹ ಚಳುವಳಿ ಏನಿದೆ, ಇದಕ್ಕೆ ಪೋಲೀಸಿನವರು ಮಾಡಿರತಕ್ಕಂತಹ ಲಾಠಿಪ್ರಹಾರ ಮತ್ತು ಗೋಲಿಬಾರ್ ಇದು ಶಾಂತಿಯನ್ನು ಪರಿಪಾಲನೆ ಮಾಡುವುದಕ್ಕೆ ಪ್ರಯೋಗಿಸಿದಂತಹ ವಸ್ತುವಲ್ಲ ಎಂಬುದಾಗಿ ನಾನು ಸ್ಪಷ್ಟವಾಗಿ ಹೇಳುವುದಕ್ಕೆ ತಯಾರಾಗಿದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಟ್ಟರು. ಅವರು ಉತ್ತರ ಕೊಡುವುದಕ್ಕಿಂತ ಮುಂಚೆ ನಾನು ಸದನದಲ್ಲಿ ಒಂದು ಮಾತನ್ನು ಹೇಳಿದ್ದೆ. ಅದೇನೆಂದರೆ ಶಾಂತಿಯಾದಾಗ ಉತ್ತರ ಕೊಡಿ ಅಂತ ಹೇಳಿದ್ದೆ. ಶಾಂತಿ ನೆಲೆಸಿದ ಮೇಲೆ ಉತ್ತರ ಕೊಟ್ಟಿದ್ದರೆ ಬಹಳ ಚೆನ್ನಾಗಿತ್ತು. ನಾನು ಮಧ್ಯಾಹ್ನದ ಮೇಲೆ ಸದನಕ್ಕೆ ಬರಲಿಲ್ಲ. ದೀರ್ಘವಾದ ಉತ್ತರವನ್ನೇ ಕೊಟ್ಟಿದ್ದಾರೆ. ದೀರ್ಘವಾದ ಉತ್ತರವನ್ನು ಕೊಡುವಾಗ ಬಳಸಿದ ಭಾಷೆ, ಬಳಕೆಯ ವಸ್ತು ನಿರೂಪಣೆ ಮತ್ತು ಅವರ ಹೇಳಿಕೆ ಏನಿತ್ತು, ಅದನ್ನು ಕೇಳಿದ ಮೇಲೆ ಸಮಾಧಾನಕರವಾಗಿ ಇರಬೇಕೆಂದು ಹುನಸ್ಸು ಮಾಡಿದಂತಹವರು ಸ್ವಲ್ಪ ಸಿಟ್ಟಿಗೆದ್ದಿದ್ದಾರೆ. ಪ್ರಚೋದನೆ ಬರುವ ರೀತಿಯಲ್ಲಿ ಅವರ

ಹೇಳಿಕೆ ಇತ್ತು. ಸಮಾಜ ಘಾತುಕ ಶಕ್ತಿಗಳು ಇದರ ಹಿನ್ನೆಲೆಯಲ್ಲಿದ್ದಾರೆ, ರೈತರು ಮಾಡಿದಂತಹ ಚಳುವಳಿ ಅಲ್ಲ ಎಂಬುದಾಗಿ ಹೇಳಿದ್ದಾರೆ. ಇದರಿಂದ ಏನಾಗಿದೆ ಎಂದರೆ ಚಳುವಳಿಯಲ್ಲಿ ಭಾಗಿಗಳಾದವರು, ರೈತರು ಇರಬಹುದು, ಅಥವಾ ಬಳಕೆದಾರರು ಇರಬಹುದು ಮತ್ತೆ ಭೂಮಿ ಹೊಂದಿರತಕ್ಕಂತಹವರೆ ಇರಬಹುದು ಆದರೆ ಇವರನ್ನು ಸಮಾಜ ವಿರೋಧಿ ಶಕ್ತಿಗಳು ಎಂಬ ಪ್ರಶ್ನೆ ಅವರ ಮನಸ್ಸನ್ನು ಭೇದಿಸಿದಂತಾಗಿದೆ. ಆ ರೀತಿ ಭೇದಿಸಿದಾಗ ಬರತಕ್ಕಂತಹ ಉತ್ತರ ಈ ರೀತಿಯ ಚಳುವಳಿಯ ಪ್ರವೃತ್ತಿ ಬರುತ್ತದೆ. ಇದನ್ನು ಯಾರೇ ಆಗಲಿ ರಾಜಕೀಯ ಭಾವನೆಯಿಂದ ಹೇಳಬೇಡಿರೆಂದು ಮೊದಲನೆಯ ದಿವಸವೇ ಪ್ರಸ್ತಾಪ ಮಾಡಿದ್ದೇನೆ. ಏಕೆಂದರೆ ಅದೂ ಉಂಟು. ಬಳಕೆ ಮಾಡತಕ್ಕಂತಹ ವಸ್ತುಗಳ ಬೆಲೆ ಜನವರಿ ತಿಂಗಳಿನಿಂದ ಇವತ್ತಿನವರೆಗೂ ಎಷ್ಟು ಏರಿದೆ ಎಂದರೆ ವಿಪರೀತಿ ಏರಿರತಕ್ಕಂತಹದ್ದು ನಮಗೂ ಗೊತ್ತಿದೆ ತಮಗೊತ್ತಿದೆ ಆದ್ದರಿಂದ ಈ ರೀತಿಯ ಚಳುವಳಿಗೆ ಯಾರು ಕಾರಣ ? ಜನಗಳು ಕಾರಣವೇ ? ಅಥವಾ ರಾಜಕಾರಣಿಗಳು ಕಾರಣವೇ? ಅಥವಾ ಸರ್ಕಾರದವರು ಕಾರಣವೇ ಎಂಬುದಾಗಿ ಹೇಳಿದಾಗ, ನಾನು ಸ್ಪಷ್ಟವಾಗಿ ನೇರವಾಗಿ ತಮ್ಮ ಮುಂದೆ ಹೇಳುವುದೇನೆಂದರೆ ಸರ್ಕಾರವೇ ಕಾರಣ ಅಂತ ಹೇಳುತ್ತಿದ್ದೇನೆ. ನಾನು ಬಡ್ಜೆಟ್ ಭಾಷಣದ ಮೇಲೆ ಮಾತನಾಡುವಾಗ ಒಂದು ಮಾತನ್ನು ಹೇಳಿದ್ದೆ. ಅದೇನೆಂದರೆ ಬೆಲೆ ಎಷ್ಟಾದರೂ ಏರಲಿ, ಆದರೆ ಜನಗಳು ಖರ್ಚು ಮಾಡತಕ್ಕಂತಹ ಶಕ್ತಿ ಅವರಿಗೆ ಉತ್ಪಾದನೆ ಮಾಡತಕ್ಕಂತಹ ರೀತಿಯಲ್ಲಿ ವಾತಾವರಣವನ್ನು ನಿರ್ಮಾಣ ಮಾಡಿ ಅಂತ ಹೇಳಿದ್ದೆ. ಪರ್ಚೇಸಿಂಗ್ ಪವರನ್ನು ಜಾಸ್ತಿ ಮಾಡಿದಾಗ ವ್ಯಾಪಾರಸ್ತರು ಬೆಲೆಯನ್ನು ಏರಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ ಅವರು ಯಾರನ್ನೂ ಬಿಟ್ಟಿದ್ದಿಲ್ಲ ಅಂತ ಹೇಳಿದ್ದೆ. ಆದರೆ ಬಡವರು ಮತ್ತು ಕೂಲಿಕಾರ ಜನಗಳು ಖರ್ಚು ಮಾಡಿರತಕ್ಕಂತಹ ಶಕ್ತಿ ಎಷ್ಟು ಇದೆ ಎಂದರೆ ಬಹಳ ಕನಿಷ್ಟ ಮಟ್ಟದಲ್ಲಿರುತ್ತದೆ ಏರುತ್ತಿರುವ ಬೆಲೆಗಳು ಮತ್ತು ಅವನು ಖರ್ಚು ಮಾಡತಕ್ಕಂತಹ ಶಕ್ತಿಯ ಅಂತರಕ್ಕೆ ಹೋಲಿಸಿದರೆ ಅದು ಬಹಳ ಅಗಾಧವಾಗಿದೆ. ಆದ್ದರಿಂದ ಜನಗಳ ಮನಸ್ಸು ಬೆಂದು ಬೆಂದು ನೋಡಿ ನೋಡಿ ಬೇಸತ್ತು, ರಾಜಕಾರಣಿಗಳೂ ನಮ್ಮ ರಕ್ಷಣೆಗೆ ಬಂದಿಲ್ಲ, ಮತ್ತು ಸರ್ಕಾರವೂ ನಮ್ಮ ರಕ್ಷಣೆಗೆ ಬಂದಿಲ್ಲ ಎನ್ನುವಂಥ ಒಂದು ವಾತಾವರಣ ನಿರ್ಮಾಣವಾದಾಗ ಜನಗಳು ಯಾವ ರೀತಿ ವರ್ತನೆ ಮಾಡಬೇಕೆಂಬುದನ್ನು ನಾವು ಯೋಚನೆ ಮಾಡಬೇಕು. ನಾನು ಸಂಸಾರಿಕನಾಗಿದ್ದೇನೆ. ಮನೆಗೆ ನಾವು ಕೊಟ್ಟಂತಹ ಹಣ ಸಾಕಾಗುವುದಿಲ್ಲ, ಪ್ರತಿಯೊಂದು ಪದಾರ್ಥಗಳ ಬೆಲೆಯೂ ಮೂರರಷ್ಟು ಹೆಚ್ಚಾಗಿವೆ ನಮಗೇ ಹಾಗೆ ಅನ್ನಿಸಿದ ಮೇಲೆ ಇನ್ನು ಬಡವರು ಯಾವ ರೀತಿ ಜೀವನ ಮಾಡುತ್ತಿದ್ದಾರೆಂಬುದನ್ನು ನಾವುಗಳೆಲ್ಲರೂ ಯೋಚನೆ ಮಾಡಬೇಕಾದಂತಹ ವಿಷಯ. ಜನ ಏಕೆ ಸುಮ್ಮನಿದ್ದಾರೆಂದರೆ ಕಳೆದ ೬ ತಿಂಗಳಿಂದಲೂ ನನಲ್ಲೇ ನಾನು ಪ್ರಶ್ನೆ ಹಾಕಿಕೊಂಡು ಕಾಲ ಕಳೆದಿದೇನೆ. ಈವತ್ತಿನದಿವಸ ತಾನೇ ತಾನಾಗಿ ಜನ ಬೇಸತ್ತು ಸರ್ಕಾರದಿಂದ ಏನು ರಕ್ಷಣೆ ಸಿಕ್ಕುವುದಿಲ್ಲ, ಪರಿಹಾರ ಸಿಕ್ಕುವುದಿಲ್ಲ ಎಂಬುದಾಗಿ ತಿಳಿದುಕೊಂಡು ಈ ಸ್ಥಿತಿಗೆ ಬಂದು ನಿಂತಿದ್ದಾರೆ. ಎದೆ ಸೆಟೆದುಕೊಂಡು ನಿಂತುಕೊಂಡಿದ್ದಾರೆ ಇದರಲ್ಲಿ ಯಾವುದೇ ರಾಜಕಾರಣಿಗಳ ಕೈವಾಡ ಇಲ್ಲ ಎಂಬುದಾಗಿ ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಹೀಗಿರುವಾಗ ನಿಮ್ಮ ಸರ್ಕಾರದ ಕರ್ತವ್ಯ ಏನು ? ಗಂಗಾವತಿಯಲ್ಲಿ ಜನ ಗುಂಪಾಗಿ ಸೇರಿಕೊಂಡು ಲೂಟಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ.

ಶ್ರೀ ಭೀಮಣ್ಣ ಖಂಡ್ರೆ.—ಇಷ್ಟೆಲ್ಲಾ ಹಾಳು ಮಾಡಿದವರು ನೀವು.

ಶ್ರೀ ಬಿ. ಬಸವಲಿಂಗಪ್ಪ.—ಇದರಲ್ಲಿ ನಾವು ನೀವು ಅಂತ ವಾದ ಮಾಡುವುದಲ್ಲ. ಈಗ ಏನು ರಾಜ್ಯಭಾರ ಮಾಡತಕ್ಕಂತಹ ಜನ ನೀವು ಇದ್ದೀರಿ, ನೀವು ಬೆಲೆಯನ್ನು ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಏನು ಪ್ರಯತ್ನ ಮಾಡಿದ್ದೀರಿ ? ಸರ್ಕಾರದವರು ಯಾರು ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡಲಿಲ್ಲ. ಈ ದೇಶದಲ್ಲಿ ಯಾರೂ ಸರ್ಕಾರಕ್ಕೂ ಮತ್ತು ರೈತರಿಗೂ ಮಧ್ಯಸ್ತಗಾರರು ಅಂತ ವ್ಯಾಪಾರಸ್ತರಿದ್ದಾರೆ, ಅವರೇ ಈ ಎಲ್ಲ ಸಮಸ್ಯೆಗಳನ್ನು ಸೃಷ್ಟಿ ಮಾಡತಕ್ಕಂಥವರು. ಕಡಿಮೆ ಬೆಲೆಯಲ್ಲಿ ಸಾಮಗ್ರಿಗಳನ್ನು ಕೊಂಡು ತಮ್ಮಲ್ಲಿ ಶೇಖರಣೆ ಮಾಡಿಟ್ಟುಕೊಂಡು ಕೃತಕ ಬೆಲೆಯನ್ನು ಏರಿಸುವ ಆ ಜನರು ಏನಿದ್ದಾರೆ, ಅವರು ಇವತ್ತಿನ ದಿವಸ ಜನಗಳ ರಕ್ತವನ್ನು ಹೀರುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಸರ್ಕಾರದವರು ಇವರ ಮೇಲೆ ಯಾವುದೇ ನಿಯಂತ್ರಣವನ್ನು ಮಾಡುವುದಕ್ಕೆ ಪ್ರಯತ್ನ ಮಾಡಲಿಲ್ಲ. ಆದ್ದರಿಂದ ಇವತ್ತು ಜನರಿಗೆ ಬೇರೆ ಮಾರ್ಗ ಏನಿದೆ ? ಜನಗಳು ದಂಗೆ ಏಳತಕ್ಕಂತಹದ್ದು ಒಂದೇ ಒಂದು ಮಾರ್ಗ. ಗಂಗಾವತಿಯಲ್ಲಿ ಫೈರಿಂಗ್ ಆಗಿದೆ. ಯಾರು ವ್ಯಾಪಾರಸ್ತರಿದ್ದಾರೆ, ಅವರು ಸುಲಭ ಬೆಲೆಯನ್ನು ಕೊಟ್ಟು ಜನಗಳ ಹತ್ತಿರ ಆಹಾರ ಧಾನ್ಯಗಳನ್ನು ಕೊಂಡು ಕೊಂಡು ಗೋಡೌನ್‌ನಲ್ಲಿಟ್ಟು ಜಾಸ್ತಿ ಲಾಭ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದಾರೆ, ಅಂತಹವರನ್ನು ಲೂಟಿ ಮಾಡುವುದಕ್ಕೆ

ಜನ ಇವತ್ತು ದಂಗೆ ಎದ್ದಿದ್ದಾರೆ. ಅಂತಹದ್ದರಲ್ಲಿ ನೀವು ಏನು ಮಾಡುತ್ತೀರಿ ಅವರನ್ನು ? ಗುಂಡಿಕ್ಕಿ ಕೊಲ್ಲುತ್ತೀರಾ ? ಬೇರೆ ಮಾರ್ಗದಿಂದ ಇದನ್ನು ತಪ್ಪಿಸುವುದಕ್ಕಾಗುವುದಿಲ್ಲವೇ ? ಶ್ರೀಮಾನ್ ಗುಂಡೂರಾವ್‌ರವರು ನನ್ನ ಸ್ನೇಹಿತರು. ಅವತ್ತೂ ಸ್ನೇಹಿತರು ಇವತ್ತೂ ಸ್ನೇಹಿತರು. ಮುಂದೆಯೂ ಸ್ನೇಹಿತರು. ಇದರಲ್ಲಿ ಯಾರೂ ಡಿಸ್‌ಪ್ಯೂಟ್ಸನ್ನು ಮಾಡಬೇಡಿ. ತಾವು ರಾಜ್ಯಭಾರಮಾಡುತ್ತಿದ್ದೀರಿ. ನಾವು ಸ್ನೇಹಿತರೆಂದರೆ ಅದು ಮನೆಯಲ್ಲಿ, ಇಲ್ಲಿ ಅಲ್ಲ. ತಾವು ಇಂದು ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದೀರಿ. ರಾಜ್ಯಭಾರ ನಡೆಸುತ್ತಿದ್ದೀರಿ ರಾಜ್ಯಭಾರವನ್ನು ನಡೆಸುವಾಗ ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು, ಜನಗಳ ನೆಮ್ಮದಿಯನ್ನು ಕಾಪಾಡುವುದಕ್ಕೆ ಪ್ರಯತ್ನ ಮಾಡದಿದ್ದರೆ ಏನು ಪ್ರಯೋಜನ ? ಜನವರಿ ತಿಂಗಳಲ್ಲಿ ನಿಮಗೆ ಓಟು ಕೊಟ್ಟರು. ಅಂದು ಓಟು ಕೊಟ್ಟ ಸಮಯದಲ್ಲಿ ಇದ್ದಂತಹ ಪರಿಸ್ಥಿತಿಗೂ ಇವತ್ತಿಗೂ ಏನಾಗಿದೆ ? ಎಂಬುದನ್ನು ದಯಮಾಡಿ ಯೋಚನೆ ಮಾಡಿ. ನೀವು ಇದೇ ರೀತಿ ಮಾಡುತ್ತಾ ಹೋದರೆ ಮುಂದೆ ಏನಾಗುತ್ತದೆ ಎಂಬುದನ್ನು ಯೋಚನೆ ಮಾಡಿದ್ದೀರಾ ? ಅವರ ಹತ್ತಿರ ನೀವು ಪುನಃ ಓಟು ಕೇಳುವುದಕ್ಕೆ ಹೋಗಬೇಕಾಗುತ್ತದೆ ನಿಮ್ಮ ಹಿತ ದೃಷ್ಟಿಯಿಂದಲೇ ನಾನು ಈ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ವಿ. ವಿ. ಭಾವಿ. ಮಾನ್ಯ ವಿರೋಧಪಕ್ಷದ ಉಪನಾಯಕರು ಇವತ್ತು ರೈತರ ಬಗ್ಗೆ ಮತ್ತು ಬೆಲೆ ಏರಿಕೆಯ ಬಗ್ಗೆ ಎಷ್ಟೊಂದು ಕಳಕಳಿಯನ್ನು ತೋರಿಸುತ್ತಿದ್ದಾರೆ. ಅದಕ್ಕಾಗಿ ನಾನು ಅವರಿಗೆ ಕೃತಜ್ಞತೆಯನ್ನು ಅರ್ಪಿಸುತ್ತಿದ್ದೇನೆ. ಆದರೆ ಅವರು ಹಿಂದೆ ಕಂದಾಯ ಮಂತ್ರಿಗಳಾಗಿದ್ದಾಗ ನರಗುಂದ್ ಮತ್ತು ನವಲಗುಂದ್ ಪ್ರದೇಶಕ್ಕೆ ಭೇಟಿ ಕೊಟ್ಟಿದ್ದಾರೆ, ಇದೇ ರೀತಿ ವಾಟರ್ ರೇಟ್ ಮತ್ತು ಬೆಟರ್‌ಮೆಂಟ್ ಲೆವಿಯನ್ನು ಕಡಿಮೆ ಮಾಡಬೇಕೆಂದು ಬೇಡಿಕೆಯನ್ನು ರೈತರು ಅವರ ಮುಂದೆ ಇಟ್ಟಾಗ ಆಗಲೂ ಇದೇ ರೀತಿ ೫೦೦ ರೂ. ಗಳಿಂದ ೧೫೦೦ ರೂ. ಗಳವರೆಗೆ ನಿಗದಿ ಮಾಡಿದ್ದರು. ಆಗ ಇವರು ಅದು ಸಾಲದು ಇನ್ನೂ ಹೆಚ್ಚು ಮಾಡಬೇಕು, ರೈತರು ಹೆಚ್ಚಿ ಹೋಗಿದ್ದಾರೆ ಎಂಬುದಾಗಿ ಆದೇಶವನ್ನು ಕೊಟ್ಟಿದ್ದಾರೆ. ಈಗ ಇವರು ರೈತರ ಬಗ್ಗೆ ಮತ್ತು ಬೆಲೆ ಏರಿಕೆ ಬಗ್ಗೆ ಏನೊಂದು ಅನುಕಂಪ, ಕಳಕಳಿ ತೋರಿಸುತ್ತಿದ್ದಾರೆ, ಇದೆ ಕಳಕಳಿ ಆಗ ಎಲ್ಲಿ ಹೋಗಿತ್ತು ಎಂಬುದಾಗಿ ನಾನು ಅವರನ್ನು ಕೇಳುತ್ತಿದ್ದೇನೆ.

† ಶ್ರೀ ಜೆ. ಎಚ್. ಪಟೇಲ್.—ನೀವು ಮಾಡಿದ್ದು. ನೀವು ಮಾಡಿದ್ದು ಎಂದು ಹೇಳುತ್ತಿದ್ದೀರ. ಒಂದು ಮಗು ಹುಟ್ಟಿದಾಗ ಆ ಹೆಂಗಸಿಗೆ ಯಾರು ಗಂಡ ಇರುತ್ತಾನೋ ಅವನದೇ ಆ ಮಗು ಎಂದು ಹೇಳುತ್ತಾರೆಯೋ ಹೊರತು ಹಿಂದೆ ಯಾರು ಇದ್ದರು ಅವರ.........(ನಗು).

ಶ್ರೀ ವಿ. ವಿ. ಭಾವಿ.—ಮಗು ಮಗುವಾಗಿಯೇ ಇಲ್ಲ ಅದು ಬೆಳೆದಿದೆ ಸ್ವಾಮಿ.

ಶ್ರೀ ಬಿ. ಬಸವಲಿಂಗಪ್ಪ.—ನಾನು ಹಿಂದೆ ಏನು ಹೇಳಿದ್ದೆ ಅದನ್ನೇ ನಾನು ಇಂದೂ ಹೇಳುತ್ತಿದ್ದೇನೆ. ನರಗುಂದ ಹಾಗೂ ನವಲಗುಂದದಲ್ಲಿ ಬೆಟರ್‌ಮೆಂಟ್ ಲೆವಿ ಹಾಗೂ ವಾಟರ್ ಟ್ಯಾಕ್ಸ್ ಏನು ಇದೆ ಆ ಬಗ್ಗೆ ಅವತ್ತಿನಿಂದಲೂ ಕೇಳುತ್ತಿದ್ದಾರೆ. ಮಲಪ್ರಭ ಹಾಗೂ ಘಟಪ್ರಭಾ ಕೆಳಗೆ ಸಾಹುಕಾರರೂ ಇದ್ದಾರೆ ಹಾಗು ಬಡವರೂ ಸಹಾ ಇದ್ದಾರೆ. ಆಗ ಅಲ್ಲಿನ ಸಾಹುಕಾರರು ಬಹಳ ಗಲಾಟೆ ಮಾಡುತ್ತಿದ್ದರು ಈಗ ಬಡವರು ಇರಬಹುದೆಂದು ಕಾಣುತ್ತದೆ. ಆಗ ೧೦೦ ಎಕರೆ ೨೦೦ ಎಕರೆ ಜಮೀನು ಇರುವವರು ಈ ಬಗ್ಗೆ ಗಲಾಟೆ ಮಾಡುತ್ತಿದ್ದರು ಆಗ ಅಲ್ಲಿ ಟೈಲ್ ಎಂಡರ್ಸ್ ಏನಿದ್ದಾರೆ ಅವರಿಗೆ ನೀರೇ ಸಿಗುತ್ತಾ ಇರಲಿಲ್ಲ. ಹಾಗೂ ಜವಳು, ಸವಳು ಭೂಮಿ ಎಂದು ಏನು ಇದೆ ಅಂತಹ ಜಾಗವನ್ನು ಹೊಂದಿದ ಜನರು ಏನಿದ್ದಾರೆ ಅಂತಹವರಿಗೆ ರಿಯಾಯಿತಿ ಕೊಡತಕ್ಕದ್ದು ಎಂದು ತೀರ್ಮಾನ ಮಾಡಿ ಆ ಬಗ್ಗೆ ಆದೇಶವನ್ನು ಕೊಟ್ಟು ಪರೀಕ್ಷೆ ಮಾಡಿ ಅದಕ್ಕೆ ಸರಿಯಾದ ತಿದ್ದುಪಡಿ ಮಾಡಬೇಕೆಂದು ಪ್ರಯತ್ನ ಮಾಡಿದ್ದೇವೆ. ಇದು ಮಾನ್ಯ ಸದಸ್ಯರಿಗೆ ಗೊತ್ತಿಲ್ಲವೆಂದು ಕಾಣುತ್ತದೆ. ಗೊತ್ತಿಲ್ಲದಿದ್ದರೆ ಕಂದಾಯ ಇಲಾಖೆಯ ಮಂತ್ರಿಗಳಾದ ಶ್ರೀ ಬಂಗಾರಪ್ಪನವರಿಗೆ ಕೇಳಿ ತಿಳಿದುಕೊಳ್ಳಲಿ.

ಹೀಗೆ ವಿಪರೀತವಾಗಿ ಬೆಲೆ ಏನು ಏರುತ್ತಿದೆ ಅದನ್ನು ನಿಯಂತ್ರಣ ಮಾಡತಕ್ಕದ್ದು ಸರ್ಕಾರದ ಆದ್ಯ ಕರ್ತವ್ಯ ಈ ಜನರ ಮನಸ್ಸಿನಲ್ಲಿ ಏನಿದೆ ಅದನ್ನು ಕೆರಳಿಸುವುದಕ್ಕೆ ದಯಮಾಡಿ ನೀವು ಹೋಗಬೇಡಿ. ಹಿಂದೆ ಪೋಲೀಸಿನವರಿಗೂ ಹಾಗೂ ಜನತೆಗೂ ಘರ್ಷಣೆ ಆಗಿರತಕ್ಕದ್ದನ್ನು ಯಾವತ್ತು ನೋಡಿದ್ದೀರಾ ? ಇವತ್ತು ನೋಡುತ್ತಿದ್ದೇವೆ. ಪೋಲೀಸಿನವರು ಎಲ್ಲೆ ಮೀರಿ ಜನರ ಮೇಲೆ ಈ ರೀತಿ ವರ್ತಿಸುತ್ತಿರುವು

ದನ್ನು ನಾವು ಇವತ್ತು ನೋಡುತ್ತಿದ್ದೇವೆ. ಹಿಂದೆ ಯಾವತ್ತೂ ಇಂತಹ ಒಂದು ಸಂಘರ್ಷ ಪೋಲೀಸರ ಮತ್ತು ಜನತೆಯ ಮೇಲೆ ನಡೆದಿದೆ ಸ್ವಾಮಿ ? ಯಾಕೆ ಇದಕ್ಕೆ ಅವಕಾಶವನ್ನು ತಾವು ಕೊಡುತ್ತಿದ್ದೀರಿ? ಗಂಗಾವತಿಯಲ್ಲಿ ೪ ಜನ ಸತ್ತಿದ್ದಾರೆ. ಇದಕ್ಕೆ ಕಾರಣರು ಯಾರು? ಗುಂಡು ಹೊಡೆದು ಕೊಂದಿದ್ದೀರಿ. ಅವರುಗಳು ಸತ್ತುಹೋಗಿದ್ದಾರೆ. ಆದರೆ ಈ ಬಗ್ಗೆ ನಿಮ್ಮ ಒಂದು ಹಿತದೃಷ್ಟಿಯಿಂದ ಹೇಳುತ್ತಿದ್ದೇನೆ, ಏನು ಬಳಕೆದಾರರೂ ಮತ್ತು ರೈತರು ಚಳುವಳಿ ಮಾಡುತ್ತಿದ್ದಾರೆ ಇದು ಸಾಮಾನ್ಯವಾಗಿರತಕ್ಕ ಚಳುವಳಿಯಲ್ಲ. ಹೀಗೆ ಪ್ರಾರಂಭವಾಗಿರತಕ್ಕದ್ದು ನಮ್ಮನ್ನು ನಿಮ್ಮನ್ನು ಎಲ್ಲರನ್ನೂ ಸುಡತಕ್ಕ ಒಂದು ಚಳುವಳಿಯಾಗಿದೆ. ಆದ್ದರಿಂದ ನಾನು ತಮಗೆ ಎಚ್ಚರಿಕೆ ಕೊಡುತ್ತಿದ್ದೇನೆ ಇದನ್ನು ತಾವು ಹಗುರವಾಗಿ ಕಾಣಬೇಡಿ. ಕಾನೂನು ಇದೆ ಎಂದು ಏನಾದರೂ ಮಾಡುವುದಕ್ಕೆ ಹೋಗಬೇಡಿ. ರೈತರ ಮುಖಂಡರನ್ನು ಕರೆದು ಅವರ ಜೊತೆಯಲ್ಲಿ ಮಾತನಾಡಿ, ಅವರ ಕಷ್ಟವನ್ನು ನಿವಾರಿಸಲು ಪ್ರಯತ್ನ ಮಾಡುವುದನ್ನು ಬಿಟ್ಟು ತದ್ವಿರುದ್ಧವಾಗಿ ನೋಡಿಕೊಂಡರೆ ಶಾಂತಿ ನೆಲೆಸುವುದಕ್ಕೆ ಸಾಧ್ಯವಾಗುವುದಿಲ್ಲ. ನಿಮ್ಮನ್ನು ನೋಡಿದರೆ ಕಳಕಳಿಯಾಗುತ್ತದೆ. ಏಕೆಂದರೆ ತಾವು ೬ ತಿಂಗಳ ಹಿಂದೆ ರಾಜ್ಯಭಾರವನ್ನು ಹೊತ್ತು ನಡೆಸುತ್ತಿದ್ದೀರಿ. ಯಾವ ರೀತಿಯಲ್ಲಿ ಪೋಲೀಸಿನವರನ್ನು ಹತೋಟಿಯಲ್ಲಿ ಇಟ್ಟುಕೊಳ್ಳಬೇಕು, ಯಾವ ರೀತಿಯಲ್ಲಿ ಅವರಿಂದ ಕೆಲಸವನ್ನು ತೆಗೆದುಕೊಳ್ಳಬೇಕು ಎಂಬುದು ಅಷ್ಟಾಗಿ ನಿಮಗೆ ಗೊತ್ತಿಲ್ಲವೆಂದು ಕಾಣಿಸುತ್ತದೆ. ಈ ದೇಶದ ಆಡಳಿತ ವರ್ಗ ಏನಿದೆ ಅದನ್ನು ಕೈಯಲ್ಲಿ ಇಟ್ಟುಕೊಂಡು ಯಾವರೀತಿ ಜನರಿಗೆ ಉಪಯುಕ್ತವಾಗುವಂತಹ ಕೆಲಸವನ್ನು ಮಾಡಿಸಬೇಕು ಎನ್ನುವ ಒಂದು ತಿಳುವಳಿಕೆ ಕಡಿಮೆಯಿದೆಯೆಂದು ನಮಗೆ ಮನವರಿಕೆಯಾಗುತ್ತಾ ಇದೆ. ಆಡಳಿತ ಮಾಡತಕ್ಕಂಥ ತಿಳುವಳಿಕೆ ಇಲ್ಲವೆಂದು ಕಾನೂನಿನ ಅಮಲಿನಲ್ಲಿ ಏನು ಬೇಕಾದರೂ ಮಾಡಬಹುದು ಎಂಬ ಭಾವನೆಯನ್ನು ಇಟ್ಟುಕೊಳ್ಳುವುದಕ್ಕೆ ಹೋಗಬೇಡಿ. ಇವತ್ತು ಏನು ನಿಲುವಳಿ ಸೂಚನೆಯನ್ನು ತರಲಾಗಿದೆ ಅದು ನ್ಯಾಯವಾಗಿರತಕ್ಕದ್ದು. ಕಾನೂನು ಬದ್ಧವಾಗಿರತಕ್ಕದ್ದು. ಮಾನ್ಯ ಮುಖ್ಯ ಮಂತ್ರಿಗಳು ಈ ಬಗ್ಗೆ ಶನಿವಾರ ನ್ಯಾಯಾಂಗ ತನಿಖೆಗೆ ಒಪ್ಪಿಕೊಳ್ಳುತ್ತಾರೆಂದು ತಿಳಿದುಕೊಂಡಿದ್ದೆ ಅವರ ಮನಸ್ಸಿನಲ್ಲಿ ನ್ಯಾಯಾಂಗ ತನಿಖೆ ಮಾಡಬೇಕೆಂದು ಇದೆ. ಅದನ್ನು ಅವರು ಸದನದ ಹೊರಗೆ ಹೇಳಿದ್ದಾರೆ. ಅವರ ಮನಸ್ಸಿನಲ್ಲಿ ಈ ರೀತಿ ಇದೆ. ಏಕೆಂದರೆ ಅವರು ಇನ್ನೂ ಚಿಕ್ಕವಯಸ್ಸಿನವರಿದ್ದಾರೆ, ಯುವಕರಿದ್ದಾರೆ. ಅವರು ಇನ್ನೂ ಇರಬೇಕು, ಬಾಳಬೇಕು, ಬದುಕಬೇಕು. ಇವೆಲ್ಲಾ ಆಗಬೇಕಾದರೆ ಅವರು ರೈತರನ್ನು ಕಟ್ಟಿಕೊಳ್ಳಬೇಕು. ರೈತರನ್ನು ತಮ್ಮ ಜೊತೆಯಲ್ಲಿಯೇ ಇಟ್ಟುಕೊಳ್ಳಬೇಕು. ರೈತರ ಒಂದು ಸಂಕಷ್ಟ ಏನಿದೆ ಅದರ ಪರಿಹಾರಕ್ಕೆ ಶ್ರಮಪಡಬೇಕು. ಆದ್ದರಿಂದ ವಿರೋಧ ಪಕ್ಷದವರು ಇವತ್ತಿನ ದಿವಸ ನಿಲುವಳಿಯನ್ನು ಏನು ತಂದಿದ್ದಾರೆ, ಅದನ್ನು ತಮಗೆ ಕಾಣಿಕೆಯ ಸ್ವರೂಪದಲ್ಲಿ ತಂದಿದ್ದಾರೆ, ಹಾಗೆಂದು ತಾವು ತಿಳಿದುಕೊಳ್ಳಬೇಕು. ಅದನ್ನು ಕಾಣಿಕೆ ಎಂದು ತಿಳಿದುಕೊಂಡು ನಾವು ಏನು ನ್ಯಾಯಾಂಗ ತನಿಖೆ ಮಾಡಬೇಕೆಂದು ಹೇಳಿದ್ದೇವೆ, ಅದರ ಬಗ್ಗೆ ಮನ್ನಣೆ ಕೊಡಬೇಕು. ಇದಕ್ಕೆ ತಾವು ಒಪ್ಪಿ. ತಾವು ಈ ರೀತಿ ಕೆಲಸ ಮಾಡುವುದರಿಂದ ದೇಶದಲ್ಲಿ ಹಬ್ಬತಕ್ಕ ಚಳುವಳಿಯನ್ನು ತಾವು ನಿಲ್ಲಿಸಿದ ಹಾಗೆ ಆಗುತ್ತದೆ. ಇಲ್ಲದಿದ್ದರೆ ಅದು ಜಿಲ್ಲೆ ಜಿಲ್ಲೆಗೆ ಹಬ್ಬಿದರೆ ಇದನ್ನು ತಡೆಗಟ್ಟುವುದಕ್ಕೆ ಕಷ್ಟವಾಗುತ್ತದೆ. ಪೋಲೀಸಿನವರೂ ಇಲ್ಲಿ ಸತ್ತಿದ್ದಾರೆಂದು ಮಿಲಿಟರಿ ತಂದರೆ ಆಗುತ್ತದೆಯೇ ? ಆಗುವುದಿಲ್ಲ. ಆದ್ದರಿಂದ ವಿರೋಧ ಪಕ್ಷದವರು ಏನು ಸಲಹೆಯನ್ನು ಮಾಡಿದ್ದಾರೆ, ಅದನ್ನು ದಯಮಾಡಿ ಸಾವಧಾನದಿಂದ ಪರಿಶೀಲನೆ ಮಾಡಿ. ಗಂಗಾವತಿಯಲ್ಲಿ ೪ ಜನ ಸತ್ತಿದ್ದಾರೆ. ನವಲಗುಂದ, ನರಗುಂದದಲ್ಲಿ ಜನ ಸತ್ತಿದ್ದಾರೆ. ಇಲ್ಲಿ ನ್ಯಾಯಾಂಗ ತನಿಖೆ ಮಾಡಿ ಒಂದು ತೀರ್ಮಾನವನ್ನು ತೆಗೆದುಕೊಳ್ಳಿ. ನನ್ನ ಮಾತನ್ನು ಕೇಳಿ. ನಾನು ಸ್ನೇಹಿತನಾಗಿ ಹೇಳುತ್ತಿದ್ದೇನೆ. ದಯಮಾಡಿ ನನ್ನ ಮಾತನ್ನು ಕೇಳಿ. ನ್ಯಾಯಾಂಗ ತನಿಖೆ ಮಾಡಿ. ಈ ಒಂದು ಚಳುವಳಿಗೆ ಯಾರು ಮುಖಂಡರಾಗಿದ್ದಾರೆ ಅವರನ್ನು ಕರೆಸಿ ಅವರ ಸಂಕಷ್ಟವನ್ನು ಕೇಳಿ. ಅವರ ಒಂದು ಬೇಡಿಕೆಗಳು ಏನಿವೆ ಅವುಗಳನ್ನು, ಕರೆಸಿಕೇಳಿ. ಆ ನಂತರ ಆ ಬಗ್ಗೆ ನಿರ್ಣಯವನ್ನು ತೆಗೆದುಕೊಳ್ಳಿ. ಈಗ ಮಾನ್ಯ ಮುಖ್ಯ ಮಂತ್ರಿಗಳು ಉತ್ತರಕೊಟ್ಟ ನಂತರ ನಾವು ಮುಂದೆ ಏನೇನು ಕೆಲಸ ಮಾಡಬೇಕು ಎನ್ನುವುದನ್ನು ನಾವು ತೀರ್ಮಾನ ಮಾಡುತ್ತಿದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳು ಸಾವಧಾನವಾದ ಉತ್ತರವನ್ನು ಕೊಡಬೇಕೆಂಬುದನ್ನು ಒಪ್ಪುತ್ತಾರೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಪಂಪಾಪತಿ (ದಾವಣಗೆರೆ).—ಮಾನ್ಯ ಅಧ್ಯಕ್ಷರೇ, ೨೧ನೇ ತಾರೀಖಿನಿಂದ ೨೮ನೇ ತಾರೀಖಿನವರೆವಿಗೂ ಅನೇಕ ಘಟನೆಗಳು ನಡೆದಿದ್ದು ಅನೇಕ ಜನರು ಸತ್ತಿದ್ದಾರೆ, ಇನ್ನೂ ಎಷ್ಟು ಜನ ಸಾಯುತ್ತಾರೋ ಗೊತ್ತಿಲ್ಲ. ಇದನ್ನು ನಿಲ್ಲಿಸುವುದಕ್ಕೆ ಆಗುವುದಿಲ್ಲವೇ? ಈಗಲಾದರೂ ಮಾನ್ಯ ಮುಖ್ಯ

ಮಂತ್ರಿಗಳು ವಿರೋಧ ಪಕ್ಷದವರು ಏನೊಂದು ನಿಲುವಳಿಯನ್ನು ತಂದಿದ್ದಾರೆ ಅವನ್ನು ಒಪ್ಪಿಕೊಂಡು ಈ ನ್ಯಾಯಾಂಗ ತನಿಖೆ ನಡೆಸುವುದಕ್ಕೆ ಅವರು ಪ್ರಯತ್ನ ಮಾಡಬೇಕು. ಬಂದನದಲ್ಲಿ ಇಟ್ಟಿರುವವರನ್ನು ಜಾಗ್ರತೆ ಬಿಡುಗಡೆ ಮಾಡಬೇಕು. ಇವತ್ತು ಪೋಲೀಸಿನವರು ಸತ್ತಿದ್ದಾರೆ. ಅವರೂ ಕೂಡಾ ನಮ್ಮ ಸ್ನೇಹಿತರೇ. ಇವತ್ತು ರೈತರೂ ಕೂಡಾ ಸತ್ತಿದ್ದಾರೆ. ಆ ಸತ್ತಿರತಕ್ಕವರ ಆತ್ಮಶಾಂತಿಗಾಗಿ ಇವತ್ತು ನಾವು ವಿರೋಧ ಪಕ್ಷದವರು ಕಪ್ಪು ಬ್ಯಾಡ್ಜ್ ಧರಿಸಿದ್ದೇವೆ ಮತ್ತು ಈ ಒಂದು ದುರಾಡಳಿತದ ವಿರುದ್ಧ ಈ ಒಂದು ಬ್ಯಾಡ್ಜ್ ಧರಿಸಿದ್ದೇವೆನ್ನುವುದನ್ನು ಹೇಳುತ್ತೇನೆ. ಇದು ಮುಂದುವರಿಯಬಾರದು. ಇದು ಮುಂದುವರಿದರೆ ಎಲ್ಲಿಗೆ ಮುಟ್ಟುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಇವತ್ತು ಮಲಪ್ರಭಾದಲ್ಲಿ ಆದದ್ದು ನಾಳೆ ತುಂಗಭದ್ರಾವನ್ನು ಮುಟ್ಟುತ್ತದೆ ಕಬ್ಬು ಬೆಳೆಗಾರರಿಗೆ ಏನೊಂದು ಅನುಕೂಲವನ್ನು ಮಾಡಲಾಗಿದೆ ಆ ರೀತಿ ರೈತರಿಗೆ ಒಂದು ತಕ್ಕ ಬೆಲೆಯನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡದಿದ್ದರೆ ತುಂಗಭದ್ರಾ ದಂಡೆಗೂ ಇದು ಹಬ್ಬುತ್ತದೆಂದು ನಾನು ಹೇಳುತ್ತೇನೆ.

೩-೩೦ ಪಿ. ಎಂ.

ಅಲ್ಲಿರತಕ್ಕಂಥ ರೈತರೂ ಕೂಡ ಎಚ್ಚರಗೊಂಡಿದ್ದಾರೆ, ಸಂಘಟಿತರಾಗುತ್ತಿದ್ದಾರೆ. ತಮಗೆ ಆಗುತ್ತಿರುವ ಅನ್ಯಾಯವನ್ನು ಎದುರಿಸದೆ ಬಿಡುವುದಿಲ್ಲ ಎನ್ನುವ ನಿರ್ಧಾರವನ್ನು ಕೈಗೊಂಡಿದ್ದಾರೆ. ಅಧಿಕಾರಿಗಳೇ ಆಗಲಿ, ಮಾನ್ಯ ಮುಖ್ಯ ಮಂತ್ರಿಗಳೇ ಆಗಲಿ ಅದನ್ನು ಆಲೋಚನೆ ಮಾಡಿ ಅರ್ಥ ಮಾಡಿ ಕೊಂಡು ರೈತರ ಹೋರಾಟ ಏನು ನಡೆಯುತ್ತಿದೆ ಅದನ್ನು ಮುಕ್ತಾಯಗೊಳಿಸಬೇಕು. ಗಂಗಾವತಿ ಯಲ್ಲಿ ನಾಲ್ಕುಜನ ಮರಣ ಹೊಂದಿದ್ದಾರೆ. ಅನೇಕ ಜನರಿಗೆ ಗುಂಡಿನ ಏಟು ಬಿದ್ದಿರುತ್ತದೆ. ನಾಲ್ಕು ಜನ ಅಲ್ಲಿ ಸಾಯಬೇಕಾದರೆ ಎಷ್ಟು ಜನಕ್ಕೆ ನೋವಾಗಿರುತ್ತದೊ ಇನ್ನು ಎಷ್ಟು ಜನ ಸತ್ತಿರುತ್ತಾರೋ ಅದನ್ನು ಹೇಳುವುದಕ್ಕೆ ಬರುವುದಿಲ್ಲ. ಕೂಡಲೆ ಅವರುಗಳಿಗೆಲ್ಲ ಪರಿಹಾರವನ್ನು ಒದಗಿಸತಕ್ಕಂಥ ವ್ಯವಸ್ಥೆ ಯಾಗಬೇಕು. ಈವತ್ತಿನ ದಿವಸ ವಿನಾ ಕಾರಣವಾಗಿ ಯಾರು ಯಾರು ದಸ್ತಗಿರಿಯಾಗಿರುತ್ತಾರೋ ಅವರಿ ಗೆಲ್ಲ ಹಿಂಸೆಯನ್ನು ಕೊಡತಕ್ಕಂಥ ಕಾರ್ಯ ನಡೆಯುತ್ತಿದೆ. ಅದನ್ನು ತಾವು ತಡೆಗಟ್ಟಬೇಕು. ಪೋಲೀಸಿನವರಿಗೆ ತಾಕೀತುಮಾಡಿ ಯಾರಿಗೆ ನೋವಾಗಿರುತ್ತದೆ, ಆ ನೋವಾಗಿರತಕ್ಕಂಥವರಿಗೆ ಶಾಂತಿ ಯುಂಟಾಗಲು ಅವರಿಗೆ ಮುಂದೆ ಅನಾನುಕೂಲವಾಗದಂತೆ ತಡೆಯುವುದಕ್ಕೆ ಸರ್ಕಾರಕ್ಕೆ ಸಾಧ್ಯವಿರುತ್ತದೆ

ಆ ಕಾರ್ಯವನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡುತ್ತಾರೆನ್ನುವ ಭರವಸೆ ನನಗೆ ಇದೆ. ಆದುದ ರಿಂದ ನ್ಯಾಯಾಂಗ ತನಿಖೆ ವ್ಯವಸ್ಥೆಯನ್ನು ಮಾಡಿದರೆ ಈವತ್ತಿನ ದಿವಸ ಆಗಿರತಕ್ಕಂಥ ಅನ್ಯಾಯವನ್ನು ಸರಿಪಡಿಸುವುದಕ್ಕೆ ಸಾಧ್ಯವಾಗುತ್ತದೆ. ಈವತ್ತು ಏನು ನಿಲುವಳಿ ಸೂಚನೆಯನ್ನು ತಂದಿರುತ್ತಾರೆ ಅದಕ್ಕೆ ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ಚರ್ಚೆ ಮಾಡಿ ತೀರ್ಮಾನವನ್ನು ಮಾಡಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಜಿ. ಎಸ್. ಶಿವನಂಜಪ್ಪ (ಬೆಳ್ಳಾವಿ).—ಮಾನ್ಯ ಅಧ್ಯಕ್ಷರೇ ಈ ನಿಲುವಳಿ ಸೂಚನೆ ಬಗ್ಗೆ ರಾಜಕಾರಣವನ್ನು ಬಳಸಿಕೊಳ್ಳುತ್ತಿರುವುದು ಈಗಿರತಕ್ಕಂಥ ಸರ್ಕಾರ ಕೂಡದು ಎಂದು ಹೇಳುತ್ತೇನೆ. ಈವತ್ತಿನ ದಿವಸ ರೈತರ ಸಮಸ್ಯೆ ಬಂಗಿಲೆದ್ದಿದೆ. ಇದು ಈವತ್ತಿನ ದಿವಸದ ಪ್ರಶ್ನೆಯಲ್ಲ. ಶ್ರೀಮಾನ್ ಗುಂಡೂರಾಯರು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಭಾನುವಾರ ಬೆಳಿಗ್ಗೆ ಅವರ ಮನೆಯಲ್ಲಿ ಮಾತು ಕತೆಯನ್ನು ನಡೆಸಿದಾಗ ವಿವರಿಸಿದ್ದೇನೆ. ತುಮಕೂರಿನಲ್ಲಿಯೂ ಕೂಡ ಸಣ್ಣಪುಟ್ಟ ಕೆರೆಗಳ ಬಗ್ಗೆ ಜನರಲ್ ವಾಟರ್ ರೇಟ್ ಹಾಕಿರುವುದರಿಂದ ತೊಂದರೆಯಾಗಿದೆ ನಾವು ಏತಕ್ಕೆ ಚಳುವಳಿಯನ್ನು ಮಾಡಬಾರದೆಂದು ಹೇಳಿ ರೈತರು ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಸೋಮವಾರ ಅಥವಾ ಮಂಗಳವಾರ ಚಳುವಳಿಯನ್ನು ಮಾಡಲು ಅಂತಿಮವಾಗಿ ಇಟ್ಟುಕೊಂಡಿರುತ್ತಾರೆ. ಪ್ರಸ್ತುತ ಆಡಳಿತಕ್ಕೆ ಶ್ರೀಮಾನ್ ಗುಂಡೂರಾಯರು ಬಂದಿರುತ್ತಾರೆ, ಅವರು ಈ ಸಮಸ್ಯೆಯನ್ನು ಬಗೆಹರಿಸಲೇಬೇಕು ಎಂದು ಕೇಳಿಕೊಳ್ಳು ತ್ತೇನೆ. ಈ ಒಂದು ಸಮಯದಲ್ಲಿ ಸರ್ಕಾರದ ಗಮನಕ್ಕೆ ಒಂದು ವಿಷಯವನ್ನು ತರುವುದೆಂದರೆ ಯಾವುದೇ ರೈತ ಸಾಲ ತೆಗೆದುಕೊಂಡು ಮೋಸ ಮಾಡಿರುವುದು ತಮ್ಮ ಗಮನಕ್ಕೆ ಬಂದಿರುತ್ತದೆಯೇ ಎಂದು ಕೇಳುತ್ತೇನೆ. ಕೋಟ್ಯಾಂತರ ರೂಪಾಯಿ ಲೂಟಿ ಮಾಡಿರತಕ್ಕಂಥವರಿಗೆ ಏನು ಮಾಡುತ್ತೀರಿ? ರೈತರು ಐದು ರೂಪಾಯಿ ಕೊಡಲಿಲ್ಲವೆಂದರೆ ಅವನ ಮನೆ ಮಠವನ್ನು ಜಪ್ತಿ ಮಾಡಿಸುತ್ತೀರಿ. ಅಧಿಕಾರಿ ಗಳಿಗಂತೂ ರೈತರು ಎಂದರೆ ಕನಿಕರವೇ ಇರುವುದಿಲ್ಲ. ಕೈಗಾರಿಕೋದ್ಯಮಿಗಳು ಕೈಗಾರಿಕಾ ಕ್ಷೇತ್ರವೆಂದು

ಹಗಲಿನಲ್ಲೊಂದು ಬೋರ್ಡ್ ರಾತ್ರಿಗೊಂದು ಬೋರ್ಡ್ ಹಾಕಿಕೊಳ್ಳುತ್ತಾರೆ. ಅವರು ಈವತ್ತು ಮೈಸೂರಿನಲ್ಲಿದ್ದರೆ ನಾಳೆ ಬೆಂಗಳೂರು, ನಾಳಿದ್ದು ತುಮಕೂರಿನಲ್ಲಿ ಒಂದು ಬೋರ್ಡನ್ನು ಹಾಕಿಕೊಂಡು ಲಕ್ಷಾಂತರ ರೂಪಾಯಿಗಳನ್ನು ಲೂಟಿ ಮಾಡುತ್ತಿರುತ್ತಾರೆ. ಅದನ್ನು ಪರಿಗಣನೆಗೆ ತೆಗೆದುಕೊಳ್ಳಲಿಕ್ಕೆ ನಿಮ್ಮಿಂದ ಸಾಧ್ಯವಾಗುತ್ತಿಲ್ಲ. ರೈತರು ಸಮಸ್ಯೆ ಬಹಳ ಕಡಿಮೆ ಇರುತ್ತದೆ. ಸಣ್ಣ ಹಿಡುವಳಿದಾರರು, ಮಾರ್ಜಿನಲ್ ಫಾರ್ಮರ್ಸ್ ಅವರುಗಳು ತೆಗೆದುಕೊಂಡ ಸಾಲವನ್ನು ವಜಾ ಮಾಡಿದರೆ ನಿಜವಾಗಿಯೂ ಕೂಡ ನಿಮಗೆ ಕೀರ್ತಿ ಬರುತ್ತದೆ ರೈತನು ಇಂದು ಏನು ಬೆಳೆಯುತ್ತಾನೆ, ಅದನ್ನು ಅವರು ಮಾರಿದ ಮೇಲೆ ಮತ್ತೆ ಅದನ್ನೇ ಅವನು ಕೊಂಡುಕೊಳ್ಳಬೇಕೆಂದರೆ ನಾಲ್ಕರಷ್ಟು ಜಾಸ್ತಿ ಕೊಡಬೇಕಾಗಿರುತ್ತದೆ. ಹೀಗಿರಬೇಕಾದರೆ ಅವನು ಹೇಗೆ ಜೀವನ ಮಾಡಬೇಕು? ಎಂದು ಕೇಳುತ್ತೇನೆ. ತಾವು ನಿಜವಾಗಿಯೂ ರೈತರ ಬಗ್ಗೆ ಮೊನ್ನೆ ದಿವಸ ವಿಶ್ವಾಸದಿಂದ ಹೇಳಿಕೆಯನ್ನು ಕೊಟ್ಟಿದ್ದೀರಿ. ದುರ್ದೈವ ಅಷ್ಟರಲ್ಲಿಯೇ ಗಂಗಾವತಿಯಲ್ಲಿ ನಾಲ್ಕು ಜನರ ಸಾವು ಆಗಿರುತ್ತದೆ ಇದರಿಂದ ನಿಮ್ಮ ಮಾತಿನಲ್ಲಿ ಈವತ್ತಿನ ದಿವಸ ಅನುಮಾನಕ್ಕೆ ನಮಗೆ ಆಸ್ಪದ ಬಂದಿರುತ್ತದೆ. ಅನುಮಾನ ಬಗೆಹರಿಸಬೇಕಾದರೆ ಅವರಿಗೆ ಏನೇನು ಸವಲತ್ತುಗಳನ್ನು ಕೊಡಬೇಕಾಗಿರುತ್ತದೋ ಆ ಎಲ್ಲ ಸವಲತ್ತುಗಳನ್ನು ಕೊಡಬೇಕು. ಅವರದು ನ್ಯಾಯವಾದ ಬೇಡಿಕೆಯಾಗಿರುತ್ತದೆ. ಹಿಂದೆ ೫೦೦ ರೂಪಾಯಿ ಇದ್ದಂಥ ಗೊಬ್ಬರದ ಬೆಲೆ ಈವತ್ತಿನ ದಿವಸ ೧೫೦೦ ರೂಪಾಯಿಯಾಗಿರುತ್ತದೆ. ೧೪೦೦ ರೂಪಾಯಿ ಇದ್ದುದು ಈವತ್ತಿನದಿವಸ ಎರಡು ಸಾವಿರ ರೂಪಾಯಿಗಳಾಗಿರುತ್ತದೆ. ಹೀಗಿರುವಾಗ ರೈತನು ಯಾವರೀತಿ ಬೆಳೆಯನ್ನು ಬೆಳೆಯಬೇಕು. ಮತ್ತು ಏತಕ್ಕೆ ತಾನೇ ಬೆಳೆಯಬೇಕು ಎಂದು ಕೇಳುತ್ತೇನೆ. ಅನ್ನಕೊಡತಕ್ಕಂಥ ರೈತನನ್ನು ಕಡೆಗಣಿಸಬಾರದು. ಈವತ್ತಿನದಿವಸ ಅನ್ನವನ್ನು ಕೊಡತಕ್ಕಂಥವರು ಯಾರು ಇರುತ್ತಾರೆ, ಆದ್ದರಿಂದ ಸರ್ಕಾರವನ್ನು ನಾನು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ರೈತರ ಸಮಸ್ಯೆ ಏನು ಇರುತ್ತದೆ ಅದನ್ನು ಆದಷ್ಟು ಜಾಗ್ರತೆಯಾಗಿ ಬಗೆಹರಿಸಿದರೆ ದೇವರು ನಿಮ್ಮನ್ನು ಕಾಪಾಡುತ್ತಾನೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಆರ್. ಗುಂಡೂರಾವ್ (ಮುಖ್ಯಮಂತ್ರಿಗಳು).—ಸನ್ಮಾನ್ಯ ಸಭಾಧ್ಯಕ್ಷರೇ ಸುಮಾರು ಐದುಗಂಟೆಕಾಲಕ್ಕೂ ಮೀರಿ ಗಂಗಾವತಿಯಲ್ಲಿ ನಡೆದ ಗೋಲಿಬಾರ್ ವಿಚಾರದಲ್ಲಿ ನಿಲುವಳಿ ಸೂಚನೆಯನ್ನು ಕಳುಹಿಸಿದಂಥ ಅನೇಕ ಸನ್ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಎಲ್ಲರೂ ಮೊನ್ನೆ ದಿವಸ ನರಗುಂದ, ನವಲಗುಂದ ಬಗ್ಗೆ ಏನು ಮಾತನಾಡಿದರೋ ಅದೇ ಮಾತುಗಳನ್ನು ಈವತ್ತಿನ ದಿವಸ ಕೂಡ ಆಡಿದ್ದಾರೆ. ಶ್ರೀಮಾನ್ ಬೊಮ್ಮಾಯಿಯವರು ಪ್ರಾರಂಭ ಮಾಡಿ, ಶ್ರೀಮಾನ್ ದೇವೇಗೌಡರು ಮಾತನಾಡಿದ ಮೇಲೆ ಮುಕ್ತಾಯವಾಯಿತು. ಅವತ್ತಿನ ದಿವಸ ಮಾತನಾಡಿದ್ದನ್ನು ಈವತ್ತು ಪುನಃ ಅದೇ ಮಾತುಗಳನ್ನು ಮಾತನಾಡಿದ್ದಾರೆಯೇ ಹೊರತು ಬೇರೆ ಯಾವ ಹೊಸ ವಿಷಯವನ್ನು ಅವರು ಮಾತನಾಡಲಿಲ್ಲ. ಈಗ ಅವರು ಮಾತನಾಡಿದ್ದು ಹೊಸವಿಷಯವೆಂದರೆ ಗಂಗಾವತಿಯಲ್ಲಿ ನಡೆದಂಥ ಗೋಲಿಬಾರ್ ಏನು ಇದೆ ಅದನ್ನು ರಾಜಕೀಯ ಸಮಸ್ಯೆಯನ್ನಾಗಿ ಮಾಡಿಕೊಂಡು. ಈವತ್ತಿನದಿವಸ ಮಾತನಾಡಿದವರು ಸ್ಪಷ್ಟಪಡಿಸಿದ್ದಾರೆ. ಪುನಃ ನಾನು ಅದನ್ನೆ ಹೇಳುವಾಗ ರೈತರು ಈ ಕೆಲಸವನ್ನು ಮಾಡುವವರೇ ಅಲ್ಲ. ಈವತ್ತಿಗೂ ನಮ್ಮ ದೇಶದ, ನಮ್ಮ ರಾಜ್ಯದ ರೈತರು ಎಂಥವರು ಎಂಬುದು ಗೊತ್ತಿರುತ್ತದೆ. ರೈತರ ಮನೋಭಾವ ಗೊತ್ತಿದೆ. ರೈತರು ತಮ್ಮ ಬೇಡಿಕೆಯನ್ನು ಸಲ್ಲಿಸಲಿಕ್ಕೆ ಸಂಘಟನೆಯಾಗುತ್ತಾರೆಂದು ನಾನು ಹೇಳುವುದಿಲ್ಲ. ರೈತರು ತಮಗೆ ಬೇಕಾದ ಸಹಾಯವನ್ನು ಕೇಳಲಿಕ್ಕೆ ಸರ್ಕಾರ ಮುಂದೆ ಬರುತ್ತಾರೆಂದು ಹೇಳುವುದಿಲ್ಲ, ಆದರೆ ರೈತರು ತಹಸೀಲ್‌ದಾರರ ಆಫೀಸನ್ನು ಸುಡಲಿಕ್ಕೆ ಹೋಗುವುದಿಲ್ಲ. ರೈತರು ಪೆಟ್ರೋಲ್ ಬಂಕ್‌ಗಳನ್ನು ಸುಡಲಿಕ್ಕೆ ಹೋಗುವುದಿಲ್ಲ. ರೈತರು ಅಂಗಡಿಗಳನ್ನು ಲೂಟಿ ಮಾಡುವುದಕ್ಕೆ ಹೋಗುವುದಿಲ್ಲ. ಈಗಲು ಹೇಳುತ್ತೇನೆ, ಮೊನ್ನೆ ದಿವಸವೂ ಹೇಳಿದ್ದೇನೆ, ಇದೆಲ್ಲ ನಡೆಯುತ್ತಿರುವುದು ರೈತರ ಹೆಸರಿನಲ್ಲಿ ದುಷ್ಕರ್ಮಿಗಳು, ಆಂಟಿ ಸೋಶಿಯಲ್ ಎಲಿಮೆಂಟ್ಸ್ ಈ ಕೆಲಸಗಳನ್ನು ಮಾಡುತ್ತಿರುತ್ತಾರೆ. ತಾವು ರೈತ ಪ್ರತಿನಿಧಿಗಳು. ಅದಕ್ಕಾಗಿ ನಾನು ಹೇಳಿದೆ. ಮೊನ್ನೆಯ ದಿವಸ ಸುಮಾರು ೬-೭ ಗಂಟೆಗಳ ಕಾಲ ನೀವು ಚರ್ಚೆಮಾಡಿದ್ದನ್ನು ಕೇಳಿ ಅನಂತರ ಸುಮಾರು ಒಂದೂವರೆ ಗಂಟೆಕಾಲ ನಾನು ನಿಮಗೆ ಉತ್ತರ ಕೊಟ್ಟಿದ್ದೇನೆ. ಈಗ ಮತ್ತೇ ಅದೇ ಉತ್ತರವನ್ನೇ ರಿಪೀಟ್ ಮಾಡಬೇಕಾಗಿದೆ. ಮೊನ್ನೆಯದಿವಸ ನೀವು ಏನು ಮಾತನಾಡಿದ್ದೀರಿ ಇವತ್ತೂ ಅದೇ ವಿಚಾರವನ್ನೇ ಮಾತನಾಡಿದ್ದೀರಿ, ಹೊಸ ವಿಚಾರವನ್ನು ಏನನ್ನೂ ಮಾತನಾಡಿಲ್ಲ. ಗಂಗಾವತಿ ವಿಚಾರದಲ್ಲಿ ಯಾರಾದರೂ

ಪ್ರಸ್ತಾಪ ಮಾಡಿದ್ದಿದ್ದರೆ ಅದರ ಬಗ್ಗೆ ನಾನು ತಮಗೆ ಉತ್ತರವನ್ನು ಕೊಡುತ್ತಿದ್ದೆ. ನನ್ನ ಹತ್ತಿರ ಸ್ಟೇಟ್‌ಮೆಂಟನ್ನು ಸಿದ್ಧ ಮಾಡಿ ಇಟ್ಟುಕೊಂಡಿದ್ದೆ. ಈಗಲೂ ತಮಗೆ ಹೇಳುತ್ತೇನೆ, ನಮ್ಮ ರಾಜ್ಯದಲ್ಲಿ ರೈತರು ಇಂಥ ಅಹಿತಕರ ಕೆಲಸವನ್ನು ಎಂದೂ ಮಾಡುವವರಲ್ಲ. ಚಳುವಳಿಗಳು ನಮ್ಮ ರಾಜ್ಯದಲ್ಲಿ ನಡೆಯುತ್ತಿರುವುದು ಹೊಸದೇನೂ ಅಲ್ಲ. ೧೯೭೩ನೇ ಇಸವಿಯಲ್ಲಿ ಬೆಲೆ ಏರಿಕೆಯಾದಾಗ ಏನು ನಡೆಯಿತೆಂಬುದನ್ನು ನಾನು ನೋಡಿದ್ದೇನೆ. ಆಗ ಬಹಳ ಬಂದ್‌ಗಳು ಆಗಿವೆ ಎಂದು ಮಾನ್ಯ ಸದಸ್ಯರುಗಳಾದ ಶ್ರೀಮಾನ್ ಲಕ್ಷ್ಮೀಸಾಗರ್‌ರವರೂ ಶ್ರೀಮಾನ್ ಬೊಮ್ಮಾಯಿಯವರೂ ಹೇಳಿದ್ದಾರೆ. ಆಗ ಬಂದ್‌ಗಳು, ಗೋಲಿಬಾರ್‌ಗಳೂ ಆಗಿದ್ದರೂ ಅಂಥಾದ್ದೇನೂ ಆಗಿಲ್ಲ. ಇದನ್ನು ಹೇಳುವಾಗ ಕೆಲವರು ತಮ್ಮದೇ ಆದ ಒಂದು ಧಾಟಿಯಲ್ಲಿ ಹೇಳಿದರು. ಮಾನ್ಯ ಶ್ರೀ ಬಸವಲಿಂಗಪ್ಪನವರು ನನ್ನನ್ನು ಕುರಿತು ಮಾತನಾಡುತ್ತಾ, ನೀವು ಇನ್ನೂ ಯುವಕರಾಗಿದ್ದೀರಿ, ಸರ್ಕಾರದಲ್ಲಿ ಇನ್ನೂ ಕೆಲವು ದಿವಸ ಮುಂದುವರಿಯಬೇಕೆಂದು ಹೇಳಿದರು. ಅವರ ಸ್ನೇಹಿತತನಕ್ಕೆ ನಾನು ಸಂತೋಷಪಡುತ್ತೇನೆ. ನೀವು ಈ ಹಿಂಸೆಯನ್ನು ನಿಲ್ಲಿಸದಿದ್ದರೆ, ಸಾವಿರಾರು ಜನ, ವಿದ್ಯಾರ್ಥಿಗಳು ಶಾಲೆಗೆ ಹೋಗದೆ ಹಿಂಸಾಚಾರಕ್ಕೆ ಒಳಗಾಗುತ್ತಾರೆ ಇದರಿಂದ ತಮ್ಮ ತಮ್ಮ ಮಕ್ಕಳನ್ನು ವಿದ್ಯಾಭ್ಯಾಸಕ್ಕೋಸ್ಕರ ಹಾಸ್ಟೆಲ್‌ಗಳಲ್ಲಿ ಬಿಟ್ಟಿರತಕ್ಕ ತಾಯಿ ತಂದೆಗಳು, ಒಂದು ಹೊತ್ತು ಊಟಮಾಡಿಕೊಂಡು ಕಾರ್ಖಾನೆಗಳಲ್ಲಿ ಬೆಳಗಿನಿಂದ ಸಾಯಂಕಾಲದವರೆಗೂ ಕಷ್ಟಪಟ್ಟು ದುಡಿಯತಕ್ಕ ಜನ ಯಾರಿದ್ದಾರೆ ಅವರ ಶಾಪ ತಮಗೆ ಬರುತ್ತದೆ. ಎಂದೆಲ್ಲ ಹೇಳಿದರೂ, ಇಷ್ಟಾಗುವವರೆಗೂ ಮಾನ್ಯ ಸರ್ಕಾರದವರು ಸುಮ್ಮನೆ ಕೂತಿರುತ್ತಾರೆಂದು ನೀವು ತಿಳಿದುಕೊಳ್ಳಬೇಡಿ ನಾವು ಎಂದಿಗೂ ಸುಮ್ಮನಿರುವುದಿಲ್ಲ. ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಮಾನ್ಯ ಸದಸ್ಯರಾದ ಶ್ರೀಮಾನ್ ಶಿವನಂಜಪ್ಪನವರನ್ನು ನಾನು ಕೇಳುತ್ತೇನೆ. ನಮಗೆ ಸ್ವಾತಂತ್ರ್ಯ ಬಂದಾಗಿನಿಂದ ಇಂಥ ರೈತರ ಸಮಸ್ಯೆಗಳು ದೇಶದ ಮುಂದೆ ರಾಜ್ಯದ ಮುಂದೆ ಬಂದಿರಲಿಲ್ಲವೆ? ಆಗಿನ ಸರ್ಕಾರಗಳಿಗೆ ಇದರ ಮೇಲೆ ಗಮನ ಇರಲಿಲ್ಲವೆ? ಈಗ ನಮ್ಮ ಸರ್ಕಾರ ಬಂದಮೇಲೆ ಮಾತ್ರ ಇಂಥ ಸಮಸ್ಯೆಗಳು ಬಂದಿವೆಯೆ? ಈ ವಿಚಾರ ರೈತರಿಗೂ ಗೊತ್ತಿದೆ. ಮಾನ್ಯ ಸದಸ್ಯರಾದ ಶ್ರೀಮಾನ್ ಲಕ್ಷ್ಮೀಸಾಗರ್‌ರವರು ಮಾತನಾಡುತ್ತಾ ದಿನಪತ್ರಿಕೆಯಲ್ಲಿ ಬಂದಿದ್ದ ವಿಚಾರದ ಸಂಬಂಧದಲ್ಲಿ ರೋಣ ಕ್ಷೇತ್ರದ ಸದಸ್ಯರು ರಾಜೀನಾಮೆ ಕೊಡಬೇಕೆಂದು ಹೇಳಿದರು.? ನಾನಾದರೂ ಅವರನ್ನು ಕೇಳುತ್ತೇನೆ. ಅವರು ಏತಕ್ಕೆ ರಾಜೀನಾಮೆಯನ್ನು ಕೊಡಬೇಕು? ಯಾರೋ ನಾಲ್ಕು ಜನ ಕೂತುಕೊಂಡಿದ್ದಾಗ ಮಾತನಾಡಿಕೊಂಡವರು ಹೇಳಿರಬಹುದು, ಅಥವಾ ಯಾವುದೇ ಚುನಾವಣೆಯಲ್ಲೂ ನಿಲ್ಲದಿರುವವರು ಹೇಳಿರಬಹುದು, ಅಥವಾ ಚುನಾವಣೆಯಲ್ಲಿ ನಿಂತು ಡಿಪಾಜಿಟ್ ಹಣವನ್ನು ಕಳೆದುಕೊಂಡಿರುವವರು ಹೇಳಿರಬಹುದು, ನಾನು ಈಗಲೂ ಹೇಳುತ್ತಿದ್ದೇನೆ, ಅಂಥವರು ಯಾರಾದರೂ ಇದ್ದರೆ ಮುಂದೆ ಬಂದು ಹೇಳಲಿ. ಬೇಕಾದರೆ ಚುನಾವಣೆಗೂ ನಿಲ್ಲಲಿ. ಯಾರಿಗೆ ಸರ್ಕಾರ ನಡೆಸುವುದಕ್ಕೆ ಅರ್ಹತೆ ಇದೆ ಎಂಬುದನ್ನು ಜನರೇ ಇನ್ನೊಮ್ಮೆ ತೀರ್ಮಾನಿಸಲಿ. ಆದರೆ ಈ ರೀತಿ ನಮ್ಮ ಸರ್ಕಾರವನ್ನು ಹೆದರಿಸುತ್ತೇವೆಂದು ಯಾರಾದರೂ ಹೇಳುವುದಾದರೆ ಅದು ಕನಸಿನ ಮಾತು ಎನ್ನುವುದನ್ನು ಸ್ಪಷ್ಟವಾಗಿ ಹೇಳುತ್ತೇನೆ.

ಮಾನ್ಯ ಅಧ್ಯಕ್ಷರೆ, ಇನ್ನೂ ಒಂದು ಮಾತನ್ನು ಹೇಳಬಯಸುತ್ತೇನೆ. ಹಿಂದೆ ಯಾವ ಯಾವ ಸರ್ಕಾರ ಇದ್ದಾಗ ಏನೇನು ಕೆಲಸಗಳನ್ನು ಮಾಡಿದ್ದಾರೆ ಎಂಬುದನ್ನು ಬೇಕಾದರೆ ಹೇಳುವುದಕ್ಕೆ ಸಿದ್ಧವಾಗಿದ್ದೇನೆ. ಹಿಂದಿನ ಸರ್ಕಾರದ ನೀತಿ ಏನಿತ್ತು. ಆಗಿನ ವಿದೇಶಾಂಗ ನೀತಿ ಏನಿತ್ತು ಎಂಬುದನ್ನು ನಾನು ಈಗ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಅವರು ಹೇಳುವುದಾದರೆ ನಾನೂ ಕೂಡ ಇದನ್ನು ಹೇಳಬೇಕಾಗುತ್ತದೆ. ನಮ್ಮ ಸರ್ಕಾರ ಬಂದು ೬ ತಿಂಗಳಾಗಿದೆ. ಇಷ್ಟರಲ್ಲೇ ಈ ರಾಜ್ಯದ ಎಲ್ಲ ಸಮಸ್ಯೆಗಳನ್ನೂ ಬಗೆಹರಿಸುವುದಕ್ಕಾಗುವುದಿಲ್ಲ. ಎಲ್ಲ ವಿಚಾರಗಳನ್ನೂ ತಿಳಿದುಕೊಳ್ಳುವುದಕ್ಕೂ ಆಗುವುದಿಲ್ಲ. ಇದೇನು ಅಲ್ಲಾವುದ್ದೀನನ ಮತ್ತು ಅದ್ಭುತ ದೀಪ ಅಲ್ಲ. ಇದು ಅದ್ಭುತ ದೀಪವಾಗಿದ್ದಿದ್ದರೆ ಹೇ ದೀಪ ನನಗೆ ೩ ಕೆಜಿ ಸಕ್ಕರೆ ತಂದುಕೊಡು, ಹೇ ದೀಪ ಈಗ ಪೆಟ್ರೋಲ್ ಬೆಲೆ ಜಾಸ್ತಿಯಾಗಿದೆ ನಮಗೆ ಪೆಟ್ರೋಲ್ ತಂದುಕೊಡು, ಎಂದು ಕೇಳಬಹುದಾಗಿತ್ತು. ಆದರೆ ಇದು ಅದ್ಭುತದೀಪ ಅಲ್ಲ. ಈಗಲೂ ಹೇಳುತ್ತೇನೆ, ಈ ಅಸೆಂಬ್ಲಿ ಒಳಗೆ ಅಥವಾ ಹೊರಗೆ ಒಂದು ಸಭೆಯನ್ನು ಕರೆದು ಈ ಸರ್ಕಾರ ಬಂದಮೇಲೆ ದಿನಬಳಕೆಯ ವಸ್ತುಗಳ ಬೆಲೆ ಬಹಳ ಜಾಸ್ತಿಯಾಗಿದೆ, ಇದಕ್ಕೆ ಈ ಸರ್ಕಾರ ಕಾರಣ, ಆದ್ದರಿಂದ ಈ ಸರ್ಕಾರವನ್ನು ಕೆಳಗಿಳಿಸಿ ಚುನಾವಣೆ ಮಾಡೋಣವೆಂದು ನೀವೂ ಹೇಳಿ: ಈ ದಿನಬಳಕೆ ವಸ್ತುಗಳ ಬೆಲೆ ಏರಿಕೆಗೆ ನಮ್ಮ ಸರ್ಕಾರ ಕಾರಣವಲ್ಲವೆಂದು ನಾನು ಹೇಳುತ್ತೇನೆ. ಚುನಾವಣೆಗೆ ನಿಲ್ಲಿ, ನಾವು ಗೆದ್ದು

ಬಂದರೆ ಇಲ್ಲಿ ಕೂತುಕೊಳ್ಳುತ್ತೇನೆ. ಇಲ್ಲ ನೀವು ಗೆದ್ದು ಬಂದರೆ ಇಲ್ಲಿ ನಾವೇ ಅಲ್ಲಿ ಹೋಗಿ ಕೂತುಕೊಳ್ಳುತ್ತೇವೆ. ಇದರಲ್ಲಿ ಆಕಾಶ ತಲೆಯಮೇಲೆ ಬಿದ್ದುಹೋಗುವುದು ಏನೂ ಇಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಚುನಾವಣೆಗೆ ಡೇಟ್ ಯಾವತ್ತು ಎಂಬುದನ್ನು ಗೊತ್ತುಮಾಡಿ.

ಶ್ರೀ ಆರ್. ಗುಂಡೂರಾವ್.—ನೀವು ರೈತರ ಪರವಾಗಿರುವವರಾದ್ದರಿಂದ ನಿಮಗೆ ಏತಕ್ಕೆ ಆ ಭಯ ಈ ಸರ್ಕಾರದ ಮೇಲೆ ಬಹಳ ಅಪಾದನೆಗಳು ಬಂದಿವೆ, ದೇಶದಲ್ಲಿ ಬಹಳ ಪ್ರಕ್ಷುಬ್ಧ ಪರಿಸ್ಥಿತಿ ಉಂಟಾಗಿದೆ ಎಂದು ಹೇಳುತ್ತಿದ್ದೀರಿ. ಇವತ್ತು ಬೆಂಗಳೂರನ್ನು ಬಂದ್ ಮಾಡುವುದಕ್ಕೆ ಈ ಊರಿನಲ್ಲಿರತಕ್ಕ ೨೦ ಲಕ್ಷ ಜನರೂ ಬೇಕಾಗಿಲ್ಲ. ಕೇವಲ ೨೦ ಜನ ಆದರೆ ಸಾಕು ಇಡೀ ಬೆಂಗಳೂರನ್ನೇ ಬಂದ್ ಮಾಡಬಹುದು.

ತಮಗೆ ಒಂದು ಉದಾಹರಣೆ ಕೊಡುವುದಾದರೆ, ಆನಂದರಾವ್ ಸರ್ಕಲ್‌ನಲ್ಲಿ ಬಸ್ಸುಗಳಿಗೆ ಕಲ್ಲುಗಳನ್ನು ಹೊಡೆಯುತ್ತಿದ್ದಾರೆ ಅಲ್ಲಿ ಭಾರಿ ಗಲಾಟೆಯಾಗುತ್ತಿದೆ ಎಂದು ಕೆ.ಎಸ್.ಆರ್.ಟಿ.ಸಿ.ಯವರಿಗೆ ಅಂದರೆ ಆ ಡಿಪೋವಿಗೆ ಒಂದು ಫೋನ್ ಮಾಡಿದರೆ ಸಾಕು ಬಸ್ಸುಗಳು ಒಂದೂ ಹೊರಗೆ ಬರುವುದಿಲ್ಲ. ಕೇವಲ ಒಂದೇ ಒಂದು ಫೋನ್ ಕಾಲ್‌ನಿಂದ ಬಸ್‌ಗಳು ಹೊರಗೆ ಬರುವುದನ್ನು ನಿಲ್ಲಿಸಬಹುದು. ಇದೇನು ಅಂಥಾ ಮಹಾ ದೊಡ್ಡ ಕೆಲಸವಲ್ಲ. ನಾನು ಆಗಲೇ ಹೇಳಿದಂತೆ ನಮ್ಮ ರಾಜ್ಯದ ರೈತರು ಯಾವತ್ತೂ ಇಂಥ ದುಷ್ಕೃತ್ಯಗಳಿಗೆ ಇಳಿಯುವುದಿಲ್ಲ. ತಮ್ಮ ಬೇಡಿಕೆಗಳನ್ನು ಸರ್ಕಾರದ ಗಮನಕ್ಕೆ ತರಲು ಶಾಂತಿಯುತವಾಗಿ ಪ್ರದರ್ಶನ ಮಾಡುತ್ತಾರೆ. ತಮಗೆ ಸ್ಪಷ್ಟವಾಗಿ ಹೇಳುತ್ತಿದ್ದೇನೆ, ಯಾರ್ಯಾರು ದೊಡ್ಡ ದೊಡ್ಡ ಭೂ ಮಾಲೀಕರು ಇದ್ದಾರೆ, ಕೋಟ್ಯಾಂತರ ರೂಪಾಯಿಗಳನ್ನು ಸರ್ಕಾರಕ್ಕೆ ತೆರಿಗೆ ಕೊಡುವುದನ್ನು ತಪ್ಪಿಸಿಕೊಳ್ಳುತ್ತಿದ್ದಾರೆ, ಅಂಥವರು ಕಳೆದ ೩೦ ವರ್ಷಗಳಿಂದಲೂ ಆಯಾಯ ಊರುಗಳಲ್ಲಿ, ಜಿಲ್ಲೆಗಳಲ್ಲಿ ಪಟ್ಟಭದ್ರ ಹಿತಾಸಕ್ತಿಗಳಿದ್ದಾರೆ ಅವರು ಇಂಥ ಪ್ರಚೋದನೆಗಳನ್ನು ಮಾಡಿ ಏನೂ ತಿಳಿಯದ, ಮುಗ್ಧ ಜನತೆಯನ್ನು ಆಹುತಿಗೆ ತಳ್ಳುತ್ತಿದ್ದಾರೆ. ಈಗ ನರಗುಂದ, ನವಲಗುಂದಗಳಲ್ಲಿ ಆಗಿರತಕ್ಕ ಗಲಭೆಯಲ್ಲಿ ರೈತರು ಸೇರಿದ್ದಾರೆಯೆ ? ಅಲ್ಲಿಗೆ ರೈತರು ಬಂದಿದ್ದಾರೆಯೆ? ಎಂದರೆ ಇಲ್ಲ. ರೈತರ ಹೆಸರಿನಲ್ಲಿ ಬೇರೆ ಜನ ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳಲು ಇಂಥ ಕೃತ್ಯಗಳನ್ನು ಮಾಡುತ್ತಿದ್ದಾರೆ. ನನಗೆ ತಿಳಿದಿರುವಂತೆ ರೈತರು ಶಾಂತಿಯುತವಾಗಿ ಸಮ್ಮೇಳನಗಳನ್ನು ಮಾಡುತ್ತಾರೆ, ತಮ್ಮ ಬೇಡಿಕೆಗಳನ್ನು ಸರ್ಕಾರದ ಗಮನ ಸೆಳೆಯಲು ಶಾಂತಿಯುತ ಪ್ರದರ್ಶನಗಳನ್ನು ಮಾಡುತ್ತಾರೆ. ತಮಗೆಲ್ಲಾ ಗೊತ್ತಿರುವಂತೆ ಮಂಡ್ಯದಲ್ಲಿ ಇವತ್ತು ಮೆರವಣಿಗೆ ಇತ್ತು, ಅಲ್ಲಿ ಯಾವುದಾದರೂ ಅಹಿತಕರ ಘಟನೆಗಳು ನಡೆಯಿತೆ ? ಸರ್ಕಾರ ಎಂದರೆ ಪ್ರತಿಯೊಂದು ವಿಚಾರವನ್ನೂ ಚೆನ್ನಾಗಿ ತಿಳಿದಿರತಕ್ಕ ಬ್ರಹ್ಮ ಎಂದು ಯಾರಾದರೂ ತಿಳಿದುಕೊಂಡಿದ್ದರೆ ಅದು ಖಂಡಿತ ತಪ್ಪು ಎಂದು ಹೇಳಬಯಸುತ್ತೇನೆ. ಆದ್ದರಿಂದ ಇವತ್ತು ಸಮಸ್ಯೆಗಳು ಏನು ಇರಬಹುದು ಎನ್ನುವುದನ್ನು ನೋಡಬೇಕು, ಆ ಜಾಗದಲ್ಲಿ ಕುಳಿತು ಮಾನ್ಯ ವಿರೋಧಪಕ್ಷದ ನಾಯಕರು ಕಂದಾಯ ವಜಾ ಮಾಡಬೇಕು ಎಂದು ಹೇಳಿದರು. ಕೆಲವು ಸದಸ್ಯರು ಇನ್ನು ಕೆಲವು ಸ್ನೇಹಿತರು ಪೂರ್ತಿ ಕಂದಾಯವನ್ನು ವಜಾಮಾಡಿದಷ್ಟಕ್ಕೇ ರೈತರು ತೃಪ್ತಿಯಾಗುವುದಿಲ್ಲವೆಂದು ಹೇಳಿದರು. ಬೇಕಾದರೆ ಈ ಬಗ್ಗೆ ನಾವು ನೀವು ಕುಳಿತು ವಿಚಾರಮಾಡೋಣ ಮಾನ್ಯ ಬೊಮ್ಮಾಯಿಯವರು ೨೨ ಬೇಡಿಕೆಗಳನ್ನು ಇಟ್ಟು ಅದನ್ನು ನಮಗೆ ಕಳುಹಿಸಿದ್ದಾರೆ. ಎಲ್ಲಗೂ ಸೇರಿ ೨೨ ಬೇಡಿಕೆಗಳನ್ನೂ ಒಪ್ಪಬೇಕು ಎಂದರೆ ಒಪ್ಪೋಣ. ಅದಕ್ಕೆ ನನ್ನದೇನು ಅಭ್ಯಂತರವಿಲ್ಲ ನಾನು ಯುವಜನ ಸೇವಾ ಮಂತ್ರಿ ಆಗಿದ್ದಾಗ ಬೇಕಾದಷ್ಟು concessions ಕೊಟ್ಟು ನನಗೆ ಅಭ್ಯಾಸವಿದೆ. ಹಾಕಿಯಲ್ಲಿ ಗೆದ್ದರು ಎಂದರೆ ಒಂದು ಸಾವಿರ ರೂಪಾಯಿ ಬಹುಮಾನ ಕೊಡುವುದು, ಸ್ವಿಮಿಂಗ್‌ನಲ್ಲಿ ಗೆದ್ದರು ಎಂದರೆ ೫ ಸಾವಿರ ರೂಪಾಯಿ ಬಹುಮಾನ ಕೊಡುವುದು ಈ ರೀತಿ ಅನೇಕ ಬಹುಮಾನಗಳನ್ನು ಕೊಟ್ಟು ಕೊಟ್ಟು ಅಭ್ಯಾಸವಾಗಿ ಹೋಗಿದೆ. ಸಮಸ್ಯೆ ರೈತರಿಗೆ ಇದ್ದರೆ ಅದನ್ನು ನೋಡೋಣ. ಆದರೆ ಗಂಗಾವತಿಯಲ್ಲಿ ನಡೆದದ್ದು ಏನು, ಸದಸ್ಯರು ಏನು ಹೇಳಿದ್ದಾರೆ ಅದನ್ನೆಲ್ಲಾ ಪ್ರೊಸಿಡಿಂಗ್ಸ್ ತೆಗೆದುನೋಡಿ. ಆದ್ದರಿಂದ ನಾನು ಹೇಳುವುದು, ಏನೋ ಮಾತನಾಡಬೇಕು, ಮಾತನಾಡಿದರು, ಎಂದರೆ ಪ್ರಯೋಜನವಿಲ್ಲ. ಅಲ್ಲಿ ಬಂದ್ ಆಗಿದೆ ಇಲ್ಲಿ ಬಂದ್ ಆಗಿದೆ, ಎಲ್ಲೆಲ್ಲೋ ಬಂದ್ ಆಗಿದೆ, ಪತ್ರಿಕೆಯಲ್ಲಿ ಓದಿದೆ ಎಂದು ಕೆಲವು ಸದಸ್ಯರು ಹೇಳಿದರು ನಾನು ಕೂಡ ಇಲ್ಲ ಎಂದು ಹೇಳುತ್ತಿಲ್ಲ. ಈ ಬಂದ್‌ಗೆ ಕರೆ ಕೊಡುವವರು ಯಾರು? ಐದಾರು ಜನ ಅವರು ಎಲ್ಲೋ ಇರುತ್ತಾರೆ ಆದರೆ ಈ ಐದಾರು ಜನ ಮಾತ್ರ ಕರೆಕೊಟ್ಟಿದ್ದಾರೆಂದು ಪೋಲೀಸರು ಸುಮ್ಮನೆ ಕೂಡುವಂತಿಲ್ಲ, ಏಕೆಂದರೆ, ಬಂದ್ ಕರೆಯನ್ನು ಕೇಳಿದ ತಕ್ಷಣ ಅಂಗಡಿಯವರು ಅಂಗಡಿಗಳನ್ನು ಮುಚ್ಚಿಬಿಡುತ್ತಾರೆ ಅವರಿಗೆ ಹೆದರಿಕೆ ಏಕೆಂದರೆ ಒಂದು

ಕಲ್ಲು ಗಾಜಿಗೆ ಬಿದ್ದರೆ ಸಾಕು ಎಷ್ಟೋ ನಷ್ಟ ರಸ್ತೆಯಲ್ಲಿ ಹೋಗುವವರಿಗೂ ಕೂಡ ಗಾಬರಿಯಾಗುತ್ತದೆ. ಜನರೆಲ್ಲಾ ಕಕ್ಕಾಬಿಕ್ಕಿಯಾಗಿ ಓಡಲಿಕ್ಕೆ ಪ್ರಾರಂಭವಾಗುತ್ತಾರೆ. ನಾನು ಏನು ಹೇಳುತ್ತಿದ್ದೇನೆ ಎಂದರೆ, ಈ ತರಹ ಬಂದ್ ಕರೆಗೆ ಸಾರ್ವಜನಿಕವಾಗಿ ಸಮ್ಮತಿಯಿಲ್ಲದಿದ್ದರೂ, ಹೆದರಿಕೆಯಿಂದ ಜನರು ಅಂಗಡಿಗಳನ್ನು ಮುಚ್ಚುತ್ತಾರೆ. ಪತ್ರಿಕೆಯಲ್ಲಿ ಎಲ್ಲಾ ಕಡೆ ಬಂದ್ ಆಗಿದೆ ಎಂದು ಬಂದಿರುತ್ತದೆ ಆದರೆ ರೈತರಿಂದ ಬಂದ್ ಆಗಿದೆಯೋ ಎನ್ನುವುದು ನನ್ನ ಪಾಯಿಂಟ್.

ಶ್ರೀ ಎಸ್. ಆರ್. ಬೊಮ್ಮಾಯಿ :—ಮಾನ್ಯ ಮಂತ್ರಿಗಳಲ್ಲಿ ಒಂದು ವಿನಂತಿ ಏನೆಂದರೆ ಮೊನ್ನೆ ಬಿಜಾಪುರದಲ್ಲಿ ಮತ್ತು ಹುಬ್ಬಳ್ಳಿಯಲ್ಲಿ ಬೆಲೆ ಏರಿಕೆಯ ಬಗ್ಗೆ ಸಾರ್ವಜನಿಕರೇ ಜಿಲ್ಲಾಧಿಕಾರಿಗಳಿಗೆ ಮತ್ತು ತಹಸೀಲ್ದಾರ್‌ಗೆ ತಿಳಿಸಿದ್ದಾರೆ. ಬೆಲೆ ಏರಿಕೆ ವಿರುದ್ಧ ಮೆರವಣಿಗೆ ಹೋಗಿ ಬಂದ್‌ಗೆ ಕರೆ ಕೊಟ್ಟಿರುತ್ತಾರೆ.

ಶ್ರೀ ಆರ್. ಗುಂಡೂರಾವ್.—ತಮ್ಮ ಅಭಿಪ್ರಾಯ ಸರಿಯಿಲ್ಲವೆಂದು ನಾನು ಹೇಳುತ್ತಿಲ್ಲ. ಆದರೆ ೧ನೇ ತಾರೀಖು ಬಂದ್ ಆಚರಿಸುತ್ತೇವೆಂದು ಏನು ಕರೆ ಕೊಟ್ಟಿದ್ದರೂ ಅದನ್ನು ಆಚರಿಸಲಿಕ್ಕೆ ಸಾರ್ವಜನಿಕರೆಲ್ಲರಿಗೂ ಇಷ್ಟವಿರಲಿಲ್ಲ ಉದಾಹರಣೆಗೆ, ಇಡೀ, ಬೆಂಗಳೂರು ಬಂದ್, ಆಚರಿಸುತ್ತೇವೆಂದು ಹೇಳಿದ ತಕ್ಷಣ ಬಸ್ಸುಗಳ ಸಂಚಾರ ಅವ್ಯವಸ್ಥೆಯಾಗುತ್ತದೆ. ಅಂಗಡಿಗಳು ಮುಚ್ಚಿಬಿಡುತ್ತಾರೆ ಅಂದರೆ ಅವರಿಗೆಲ್ಲಾ ಬಂದ್ ನಡೆಸಬೇಕೆಂದು ಇಚ್ಛೆಯಿದೆ ಎಂದು ಅರ್ಥವಲ್ಲ, ಕೇವಲ ಭಯ. ಆದರೆ ಪ್ರತಿಯೊಂದು ಅಂಗಡಿಗೂ ಪೋಲೀಸ್ ಸಿಬ್ಬಂದಿ ಕೊಡುವುದಕ್ಕೆ ಆಗುವುದಿಲ್ಲ. ಕಲ್ಲು ಹೊಡೆಯುವಾಗ ಬಂದ್‌ಗೆ ಕರೆ ಕೊಟ್ಟವರು ಒಬ್ಬರೂ ಅಲ್ಲಿ ಇರುವುದಿಲ್ಲ. ಉದಾಹರಣೆಗೆ Expo-70 ಚಳುವಳಿ ಮಾಡಿದಾಗ ಮಾನ್ಯ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಗಳು ಆಗಿದ್ದರು, ಕರೆ ಕೊಟ್ಟವರು ನಾವು ಆದರೆ ನಾವು ಚಳುವಳಿಯಲ್ಲಿ ಭಾಗವಹಿಸಲಿಲ್ಲ, ಲೆಜಿಸ್ಲೇಟರ್ಸ್ ಹೋಂನಲ್ಲಿ ಕೂತುಕೊಂಡಿದ್ದೆವು. ಏಟು ತಿಂದವರು ಬೇರೆಯವರು. ಮಾನ್ಯ ಬಸವಲಿಂಗಪ್ಪನವರು ಮತ್ತು ನಾವೂ ಕೂಡ ಅದನ್ನು ಮಾಡಿದ್ದೆವು. ಆದ್ದರಿಂದ ಬಂದ್‌ಗೆ ಕರೆ ಕೊಟ್ಟವರು ಯಾರೂ ಹೋಗುವುದಿಲ್ಲ. ಇದನ್ನು ತಿಳಿದುಕೊಂಡಂತವರು ಒಂದು ಸೆಕ್ಷನ್ ಜನರು ಇರುತ್ತಾರೆ. ಸಿಕ್ಕಿದ್ದು ಸೀರುಂಡೆ ಎಂದು ಕೆಲವು ಜನ ಸೇರಿಕೊಂಡು ಅಂಗಡಿ ಬಸ್ಸು ಮುಂತಾದುವನ್ನೇ ಪುಡಿ ಪುಡಿ ಮಾಡಿ ಓಡಿಹೋಗುತ್ತಾರೆ. ಇಂತಹ ಸಂದರ್ಭದಲ್ಲಿ ಸರ್ಕಾರದವರು ಕೈಕಟ್ಟಿ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. ನೀವು ಇದ್ದರೂ ಅದನ್ನೇ ಮಾಡುವುದು, ನಾವು ಇದ್ದರೂ ಅದನ್ನೇ ಮಾಡುವುದು ನಾವು ನೀವು ಇಬ್ಬರೂ ಇಲ್ಲದೆ ಬೇರೆಯವರು ಬಂದರೂ ಅದನ್ನೇ ಮಾಡುತ್ತಾರೆ. ಶ್ರೀಮತಿ ಗಾಂಧಿಯವರನ್ನು ಅರೆಸ್ಟ್ ಮಾಡಿದಾಗ ತುಮಕೂರಿನಲ್ಲಿ ಲೂಟಿ ನಡೆಯಿತು. ಮಾನ್ಯ ಬೊಮ್ಮಾಯಿಯವರು ಮತ್ತು ಮೇಲ್ಮನೆ ಸದಸ್ಯರಾದ ಮಲ್ಲಿಕಾರ್ಜುನಯ್ಯನವರು ಇದರ ಬಗ್ಗೆ ಚರ್ಚೆ ಮಾಡಿದರು, ಹಿಂದಿನ ಸರ್ಕಾರ C. R. P. ಮತ್ತು B. S. F. ಕರೆಸಿದ್ದರು ಬೇಕಾದಷ್ಟು ಗಲಾಟೆ ನಡೆಯಿತು. ಹೀಗೆ ಆಗಿಯೇ ಆಗುತ್ತೆ, ತಾವು ಹೇಳಿದ್ದು ತಪ್ಪು ಎಂದು ಹೇಳುತ್ತಿಲ್ಲ. ಯಾರೇ ಮುಖ್ಯ ಮಂತ್ರಿಗಳಿರಲಿ, ಇದನ್ನು ತಪ್ಪಿಸುವುದಕ್ಕಾಗುವುದಿಲ್ಲ. ಹಿಂದೆ ಮೊರಾರ್ಜಿ ದೇಸಾಯಿಯವರು ಬೊಂಬಾಯಿಯಲ್ಲಿ ಮುಖ್ಯಮಂತ್ರಿಗಳಾಗಿದ್ದಾಗ ಎಷ್ಟು ಜನ ಗೋಲಿಬಾರ್‌ನಲ್ಲಿ ಸತ್ತರು? ಅದೇ ಮೊರಾರ್ಜಿ ದೇಸಾಯಿಯವರು ಪುನಃ ಪ್ರಧಾನಮಂತ್ರಿಗಳಾಗಲಿಲ್ಲವೆ ? ಈ ಸನ್ನಿವೇಶದಲ್ಲಿ ಒಂದು ತರಹ ಭಯ ಹುಟ್ಟಿಸುವುದಕ್ಕೆ ಪ್ರಯತ್ನ ಮಾಡುತ್ತಾರೆ ಅದಕ್ಕೆ ನಾವು ಭಯ ಬೀಳಲಿಕ್ಕೆ ತಯಾರಿಲ್ಲ. ಒಟ್ಟಿನಲ್ಲಿ ಸಮಸ್ಯೆ ಬಗೆಹರಿಸಬೇಕು. Yes. I am for it. I said it. Now also I am telling and I wil tell again. I am going to tell at each and every place wherever I go. We will talk to the people and we will ask what are their problems and we will examine why such problems have arisen and whether this Government or previous Government is responsible for them. We agree it is a problem. But, it cannot be solved in a day or two. It will take time ನಾವು ಬರೀ ಭಾಷಣ ಮಾಡಿದರೆ ಪ್ರಾಬ್ಲಮ್ ಸಾಲ್ವ್ ಆಗುತ್ತದೆಯೇ? ನಾಳೆ ನೀವೇ ಹೋಗಿ ಭಾಷಣ ಮಾಡಿ ನೀವು ಪಾಪುಲರ್ ಆಗುವುದಕ್ಕೆ ಸಾಧ್ಯವಿಲ್ಲ. ಈ ತರಹದಲ್ಲೇ ತಮಿಳುನಾಡಿನಲ್ಲಿ ನಡೆಯಲ್ಲಿಲ್ಲವೇ? ಬೇಕಾದಷ್ಟು ಉದಾಹರಣೆ ಕೊಡಬಲ್ಲೆ, ತಮಿಳುನಾಡಿನಲ್ಲಿ ೬೦ ಸಾವಿರ ಜನ ರೈತರು ಚಳುವಳಿ ಮಾಡಲಿಲ್ಲವೇ, ೩ ಸಾವಿರ ಜನ ಪೋಲೀಸರು ಸ್ಟ್ರೈಕ್ ಮಾಡಿದಾಗ ಎಷ್ಟೋ ಜನರನ್ನು ಡಿಸ್‌ಮಿಸ್ ಮಾಡಿದರು, ತಮಿಳುನಾಡಿನಲ್ಲಿ

ಮಾನ್ಯ ನಾರಾಯಣಸ್ವಾಮಿ ನಾಯಿಡುರವರ ಸಂಘಟನೆ ನಡೆಯಿತು, ಅವರು ಎಲ್ಲಾ ಬೇಡಿಕೆ ಈಡೇರಿಸಿದ್ದರೆ? ಪುನಃ ಜನ ಮುಖ್ಯಮಂತ್ರಿಗಳನ್ನಾಗಿ ಯಾರು ಅವರ ಚಳುವಳಿಯನ್ನು ಎದುರಿಸಿದರೋ ಅವರನ್ನೇ ತಂದರು. ಇದರಲ್ಲಿ ಸರ್ಕಾರ, ಅಥವಾ ಪಕ್ಷ ಅಥವಾ ವ್ಯಕ್ತಿ ಬರುವುದಿಲ್ಲ ಇನ್ನು ಗಂಗಾವತಿಯಲ್ಲಿ ಏನು ನಡೆದಿರುವುದು, ಎಂದರೆ ಬೆಲೆ ಏರಿಕೆ ವಿರುದ್ಧ ಮೆರವಣಿಗೆ ಹೋಗುತ್ತಿದ್ದಾರೆ, ಮಾಬ್ ಇದ್ದಾಗ ಯಾರು ಇದನ್ನು ವ್ಯವಸ್ಥೆ ಮಾಡಿರುತ್ತಾರೆ ಅವರ ಕಂಟ್ರೋಲ್‌ನಲ್ಲಿ ಮಾಬ್ ಇರುವುದಿಲ್ಲ. ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ಮೆರವಣಿಗೆ ಹೋಗಬೇಕು. ಅದನ್ನು ಯಾರೂ ಬೇಡವೆನ್ನುವುದಿಲ್ಲ. ಮನವಿ ಮಾಡಿದರೆ ಅದನ್ನು ಯಾರೂ ಬೇಡವೆನ್ನುವುದಿಲ್ಲ, ಆದರೆ ಹಿಂಸಾಚಾರಕ್ಕೆ ಹೋದಾಗ ಯಾರೂ ಕೈಕಟ್ಟಿ ಕುಳಿತುಕೊಳ್ಳುವುದಕ್ಕೆ ಸಾಧ್ಯವಿಲ್ಲ.

೪-ಪಿ. ಎಂ.

ಮೆರವಣಿಗೆ ಆರ್ಗನೈಜ್ ಮಾಡಿದ ಉದ್ದೇಶ ಒಳ್ಳೆಯದಿರುತ್ತದೆ. ಅದನ್ನು ಕೆಟ್ಟದ್ದು ಅಂತಾ ಹೇಳುವುದಕ್ಕಾಗುವುದಿಲ್ಲ. ಮೆರವಣಿಗೆ ಹೊರಟಾಗ ಯಾರೂ ಹತೋಟಿಯಲ್ಲಿರುವುದಿಲ್ಲ. ಮೆರವಣಿಗೆ ಹೊರಟ ಜನ ಪೆಟ್ರೋಲ್ ಬಂಕ್‌ಗ ಮುತ್ತಿಗೆ ಹಾಕುವುದು ಎಲ್ಲಾ ಅಂಗಡಿಗಳಿಗೂ ಕಲ್ಲು ಹೊಡೆಯುವುದು ಇಂತಹದ್ದೆಲ್ಲಾ ಹತೋಟಿಯಲ್ಲಿರಬೇಕಾಗುತ್ತದೆ. ಶ್ರೀಮಾನ್ ಜೆ. ಎಚ್. ಪಟೇಲ್ ಹೇಳಿದರು ಒಬ್ಬ ನ್ಯಾಯಧೀಶರ ಬಗ್ಗೆ. ಇವತ್ತು ದೇಶದಲ್ಲಿ ಬಡವರ ಸಂಖ್ಯೆ ಕಡಿಮೆಯಾಗುವುದಿಲ್ಲ. ಉದಾಹರಣೆಗೆ ಒಬ್ಬ ಕಂಬಳಿಯನ್ನು ಚಳಿಗೋಸ್ಕರ ಕದ್ದ, ಚಳಿಗೋಸ್ಕರ ಕದ್ದೆ ಅಂತಾ ಹೇಳಿದರೆ ಸುಮ್ಮನಿರಲಿಕ್ಕಾಗುತ್ತದೇನು? ಕಂಬಳಿ ಕದ್ದದ್ದು ತಪ್ಪು. ಅದಕ್ಕೋಸ್ಕರ ಶಿಕ್ಷೆಯಾಯಿತು. ನಾನು ಚಳಿಗೋಸ್ಕರ ಕದ್ದೆ ಕದಿಯಬೇಕಂತಾ ಕದಿಯಲಿಲ್ಲ ಅಂದರೆ ಹೇಗೆ? ಒಂದು ಊರಿನಲ್ಲಿ ಒಬ್ಬ ಪೋಲೀಸು ಆಫೀಸರು ಇದ್ದರು, ಒಬ್ಬ ಜಡ್ಜರು ಇದ್ದರು. ಜಡ್ಜ್ ಪೋಲೀಸು ಕೇಸುಗಳಲ್ಲಿ ಯಾವಾಗಲೂ ವಿರುದ್ಧವಾಗಿ ತೀರ್ಮಾನ ಕೊಡುತ್ತಿದ್ದರು. ಕಾರಣವೇನೆಂದರೆ ಜಡ್ಜ್ ಅವರನ್ನು ಪೋಲೀಸ್ ಆಫೀಸ್‌ನವರು ಸ್ಟೇಷನ್‌ಗೆ ಕಾರಿನ ವಿಚಾರದಲ್ಲಿ ಕರೆಸಿಬಿಟ್ಟರು ಅದನ್ನೇ ಮನಸ್ಸಿನಲ್ಲಿಟ್ಟುಕೊಂಡು ನ್ಯಾಯಧೀಶರು ಪೋಲೀಸಿನವರ ಯಾವುದೇ ಕೇಸುಗಳನ್ನು ತೆಗೆದುಕೊಂಡರು ವಿರುದ್ಧವಾಗಿ ತೀರ್ಮಾನಕೊಡುತ್ತಿದ್ದರು. 'Legally I am convinced, but morally I am not convinced. Hence. I am discharging him.' Though really he discharged, really the case is genuine for discharge, but still the High Court used to interfere in Writ. ಗಂಗಾವತಿಯಲ್ಲಿ ನಡೆದಂತಹ ರೈತರ ಸಂಘಟನೆಗೂ ಇವಕ್ಕೂ ಸಂಬಂಧವಿಲ್ಲ ರೈತರ ಚಳುವಳಿ ಜೊತೆಗೆ ಬೆಲೆ ಏರಿಕೆಯಾಗಿರತಕ್ಕಂತದ್ದು ನಿಜ ಆದರಲ್ಲಿ ಮುಚ್ಚಿಡುವ ಪ್ರಶ್ನೆ ಇಲ್ಲ. ಈ ಬೆಲೆ ಏರಿಕೆ ಎಲ್ಲಾ ಕಡೆಯೂ ಇದೆ, ಬೆಲೆ ಏರಿಕೆಯನ್ನು ನಾವು ಕೂಡ ಒಪ್ಪಿಕೊಳ್ಳುತ್ತೇವೆ'

ಶ್ರೀ ಬಿ. ಬಸವಲಿಂಗಪ್ಪ.—ರೈತರಿಗೆ ಮಾತ್ರ ಅಲ್ಲ. ಎಲ್ಲಾ ಬಳಕೆ ದಾರರಿಗೂ ತೊಂದರೆಯಾಗಿದೆ.

ಶ್ರೀ ಆರ್. ಗುಂಡೂರಾವ್.—ಸಂಸಾರದ ಕಷ್ಟಸುಖಗಳು ಈಗ ಗೊತ್ತಾಗುತ್ತಿದೆ? ಮಂತ್ರಿಪದವಿ ಹೋದಮೇಲೆ.

ಶ್ರೀ ಬಿ. ಬಸವಲಿಂಗಪ್ಪ.—ನಾನು ವ್ಯಾಕುಲ ಮಾಡುವುದಕ್ಕೆ ಹೋಗಲಿಲ್ಲ. ಹಿಂದೆನೂ ಕೂಡ ಹಣ ಕೊಡುತ್ತಿದ್ದೇ, ಆದರೆ ಈಗ ಎರಡರಷ್ಟು ಮೂರರಷ್ಟು ಬೆಲೆ ಜಾಸ್ತಿಯಾಗಿದೆ ಅಂತಾ ಮನೆಯಲ್ಲಿ ಕೇಳುತ್ತಿದ್ದಾರೆ, ಅದಕ್ಕೋಸ್ಕರ ಹೇಳುತ್ತಿದ್ದೇನೆ,

ಶ್ರೀ ಆರ್. ಗುಂಡೂರಾವ್.—ನೀವು ಹೇಳಿದ್ದು ತಪ್ಪಲ್ಲ. ಇದರ ಸಮಸ್ಯೆಗಳು ಎಲ್ಲರಿಗೂ ಸೇರಿದೆ. ಹಿಂದೆ ರಾಜ್ಯದಲ್ಲಿ ಇಂತಹ ಎಷ್ಟೋ ಘಟನೆಗಳ ನಡೆದಿವೆ ಇದು ಹೊಸದೇನು ಅಲ್ಲ. ಅದನ್ನು ಮುಂದುವರಿಸಿಕೊಂಡು ಹೋಗಬೇಕು ಅನ್ನುವ ಪ್ರಶ್ನೆಯಲ್ಲ ಇದರಬಗ್ಗೆ ನಾನು ನಿನ್ನೆ ಸ್ಪಷ್ಟವಾಗಿ ಹೇಳಿದ್ದೇನೆ. ಸರ್ಕಾರ ತಾವು ಹೇಳಿದ ರೀತಿಯಲ್ಲಿ ಮುಂದುವರಿಯಲು ಇಚ್ಛೆ ಇಲ್ಲ. ಹಿಂದೆಯೂ ಸಹ ಇದೇರೀತಿಯ ಸಮಸ್ಯೆಗಳು ಬಂದಾಗ ಆಗ ಮುಖ್ಯಮಂತ್ರಿಗಳು ಮತ್ತು ಗೃಹಮಂತ್ರಿಗಳು ಇರಲಿಲ್ಲವೇ?. ಲಕ್ಷ್ಮೀಸಾಗರ್‌ರವರು ಹೇಳಿದರು ರೈತರಿಗೆ ಗುಂಡು ಹಾಕುತ್ತಿದ್ದಾರೆಂದು. ರೈತರಿಗೆ ಯಾರು ಗುಂಡು ಹಾಕುತ್ತಾರೆ? ಮೆರವಣಿಗೆ ಹೊರಟಾಗ ಲಾ ಅಂಡ್ ಆರ್ಡರ್ ಮೇನ್‌ಟೈನ್ ಮಾಡುತ್ತೇವೆ. ಮೆರವಣಿಗೆ ಹೊರಟಾಗ ಗಲಾಟೆಗೆ ತಿರುಗಿದರೆ ಶಿಸ್ತು ಶಾಂತಿ ತರಬೇಕಾದರೆ ಲಾಠಿ

ಚಾರ್ಜ್ ಮಾಡಬೇಕಾಗುತ್ತದೆ. ಉದಾಹರಣೆಗೆ ಸೈನ್ಯ ಬರಬೇಕಾದರೆ ಮಧ್ಯದಲ್ಲಿ ದಾರಿಯಲ್ಲಿ ಸಿಕ್ಕಿದ ಗ್ರಾಮಗಳನ್ನು ಧ್ವಂಸಮಾಡಿಕೊಂಡು ಬರುತ್ತಾರೆ ಅಂತಹ ಸಂದರ್ಭದಲ್ಲಿ ಪೋಲೀಸಿನವರು ಲಾಠಿಚಾರ್ಜ್ ಮಾಡುವಾಗ ಅವರು ಇವರು ಅಂತಾ ಗಮನಿಸುವುದಕ್ಕೆ ಹೋಗುವುದಿಲ್ಲ; ಮಾಬ್‌ನಲ್ಲಿರುವಾಗ. ಮೊನ್ನೆ ಗದಗ್‌ಗೆ ಹೋಗಿದ್ದಾಗ ನೋಡಿದ್ದೇನೆ ೯ ವರ್ಷದ ಹುಡುಗನಿಗೆ ಲಾಠಿ ಏಟು ಬಿದ್ದಿದೆ. ನಾನು ಆ ಹುಡುಗ ನನ್ನು ಯಾಕೆ ಏಟು ಬಿತ್ತು ಅಂತಾ ಕೇಳಿದಾಗ ಗುಂಪಿನಲ್ಲಿ ನಿಂತು ನೋಡುತ್ತಿದ್ದೆ ಆಗ ಏಟು ಬಿತ್ತು ಅಂತಾ ಹೇಳಿದ ಪೋಲೀಸಿನವರು ಹೊಡೆಯುವಾಗ ಅವರು ಇವರು ಅಂತಾ ನೋಡುವುದಕ್ಕೆ ಹೋಗುವುದಿಲ್ಲ. ಈ ವಿಚಾರದಲ್ಲಿ ಶ್ರೀಮಾನ್ ಸುಬ್ಬಯ್ಯಶೆಟ್ಟರವರಿಗೆ ಗೊತ್ತಿದೆ ಅವರು ಅದೇ ಡಿಪಾರ್ಟ್‌ಮೆಂಟ್‌ನಲ್ಲಿದ್ದರೆಂದು ಕಾಣುತ್ತದೆ. ಆದ್ದರಿಂದ ಇವತ್ತು ಏನೋ ಆಯಿತು. ನಾನು ಹೇಳಿದ್ದೇನೆ ಬಹುಶ: ಇಂತಹ ಸಮಸ್ಯೆಗಳು ಬಂದಾಗ. We must take into confidence the opposition also. I discussed with them. I have explainted the whole thing to them On that day, I announced certain decisions, too. ರೈತರಿಗೆ ಈ ಗಳಿಗೆಯಲ್ಲಿಯೇ ಅನುಕೂಲ ಆಗಬೇಕೆಂದರೆ ಹೇಗೆ ಸಾಧ್ಯ. ಈ ಪ್ರಜಾಪ್ರಭುತ್ವದ ಒಂದು ಸಂಸದೀಯ ಆಡಳಿತವಿರುವಲ್ಲಿ ಆಗುಹೋಗುಗಳೇನು? ಬೇಡಿಕೆಗಳೇನು ಎಂಬುದನ್ನು ತೀರ್ಮಾನ ಮಾಡಬೇಕು. ಫೈನಾನ್ಸಿಯಲ್ ಇಂಪ್ಲಿಕೇಷನ್ ಅದರ ಪರಿಣಾಮ ಏನು ಎಂಬುದನ್ನು ಯೋಚನೆ ಮಾಡಬೇಕು. ಪರಿಹಾರ ಕೊಡಬೇಕೆಂದರೆ ಹೇಗೆ? ಅದನ್ನು ಯೋಚಿಸಬಾರದೇನು? ನೀವು ಕೇಳಿದಹಾಗೆ ನಾವು ಕೊಡುತ್ತಾ ಹೋದರೆ, ಇವತ್ತು ನಾನೊಂದು ಸಭೆಗೆ ಹೋಗಿದ್ದೆ ಅಲ್ಲಿ ಹೇಳುತ್ತಿದ್ದರು ೮೦ ಕೋಟಿ ೧೦೦ ಕೋಟಿ ಖೋತ ಆಗಿದೆಯೆಂದು ಯಾಕೆಂದರೆ! ರೈತರಿಗೆ ಹಣ ಸಹಾಯ ಮಾಡುವ ಫೈನಾನ್ಸಿಯಲ್ ಇನ್ಸ್‌ಟಿಟ್ಯೂಷನ್‌ಗಳು ಇದೇರೀತಿ ಕೊಟ್ಟ ಹಣವನ್ನು ವಾಪಸ್ಸು ಕೊಡಬೇಡಿ ಎಂದು ಅವರು ಕೇಳಿದಹಾಗೆ ಒಪ್ಪಿಕೊಂಡುಬಿಟ್ಟು, ಇವತ್ತು ಲಾಸ್ ಆಗುವ ಮಟ್ಟಕ್ಕೆ ಬಂದಿವೆಯಂತೆ ನಾವು ಯಾವುದನ್ನು ಮಾಡುವಾಗ ಅವರ ಸ್ಥಿತಿಗತಿಗಳೇನು ಎಂಬುದನ್ನು ನೋಡಬೇಕಾಗುತ್ತದೆ. ಲೆಕ್ಚರರ್ ಟ್ರಾನ್ಸ್‌ಫರ್ ಬೇಡ ಎಂದು ಹೇಳಿ ಮೊನ್ನೆ ಒಬ್ಬರು ಹೇಳುತ್ತಿದ್ದರು ಪರೀಕ್ಷೆನು ಬೇಡ ಟ್ರಾನ್ಸ್‌ಫರ್ ಕೂಡಬೇಡ, ಪರೀಕ್ಷೆ ಮಾಡಿದರೆ ಒಂದೇ ಜಾತಿಯವರಿಗೆ ಮಾರ್ಕ್ಸ್‌ಜಾಸ್ತಿ ಬರುತ್ತದೆ ಅಂತಾ ಹೀಗೆ ಎಲ್ಲನ್ನೂ ಬೇಡ ಅಂತಾ ಹೋದರೆ, ನಾವು ಒಪ್ಪಿಕೊಂಡರೆ! ಏನಾಗುತ್ತದೆಂದರೆ ಒರಿಸ್ಸಾದ ಒಬ್ಬರು ಚೇರ್ಮನ್‌ರು ಹೇಳಿದಹಾಗೆ ಎಲ್ಲಾ ಖೋತ ಆಗುತ್ತದೆ.

ಈ ದಿವಸ ಕ್ಲಾಸ್‌ಗಳಲ್ಲಿ ಓದುತ್ತಾ ಇರತಕ್ಕಂಥಾ ವಿದ್ಯಾರ್ಥಿಗಳನ್ನೆಲ್ಲಾ ಏನು ಪರೀಕ್ಷೆಯನ್ನು ನಡೆಸದೆ ಅವರೆಲ್ಲಾ ಪಾಸ್ ಎಂದು ಡಿಕ್ಲೇರ್ ಮಾಡಬೇಕು ಅಂತ ನೀವು ಹೇಳಿದರೂ ಕೂಡ ಅದೂ ಆಗ ಬಹುದು. ನಾವು ಹೀಗೆ ಮಾಡುವುದಾದರೆ ಪರೀಕ್ಷೆ ಏತಕ್ಕೆ ಮಾಡಬೇಕು ? ಆದರೆ ಹಾಗಲ್ಲಾ. ಏನಾದರೂ ಇದರಲ್ಲಿ ಅನ್ಯಾಯ ಇದ್ದರೆ ಯಾರಾದರೂ ಪಟ್ಟಭದ್ರಾಸಕ್ತಿಗಳಿಂದ ಕೂಡಿ ಈ ಜಾತಿಯವನಿಗೆ ಮಾರ್ಕ್ ಹೆಚ್ಚಾಗಿ ಬಂದಿದೆ ಆ ಜಾತಿಯವನಿಗೆ ಹೆಚ್ಚಾಗಿ ಮಾರ್ಕ್ ಬಂದಿಲ್ಲ ಅನ್ನುವ ನ್ಯೂನತೆಗಳೇನಾದರೂ ಇದ್ದರೆ ಅದನ್ನು ಚರ್ಚೆ ಮಾಡುವುದನ್ನು ಬಿಟ್ಟು ಪರೀಕ್ಷೆಯೇ ಬೇಡ ಅನ್ನುವುದಾದರೆ ಹೇಗೆ ? ಯಾರೂ ಡಾಕ್ಟರ್ ಪರೀಕ್ಷೆಯನ್ನೂ ಮಾಡಬೇಕಾಗಿಲ್ಲಾ, ಇಂಜಿನೀಯರ್ ಪರೀಕ್ಷೆಯನ್ನೂ ಮಾಡಬೇಕಾಗಿಲ್ಲಾ, ಯಾರು ಬೇಕಾದರೂ ಡಾಕ್ಟರ್ ಇಂಜನೀಯರ್ ಆಗಬಹುದು, ಇಂಜಿನೀಯರ್ ಡಾಕ್ಟರ್ ಆಗಬಹುದು. ಯಾರಿಗೂ ಯಾವ ಪರೀಕ್ಷೆಯೂ ಬೇಡ ಎಲ್ಲರೂ ಪಾಸ್ ಅನ್ನುವುದಾದರೆ ಆಗ ಎಲ್ಲರೂ ಕೂಡ ಕೈಚಪ್ಪಾಳೆ ತಟ್ಟುಬಿಡುತ್ತಾರೋ ಯಾರೂ ಯಾವ ಪಾಸನ್ನೂ ಮಾಡಬೇಕಾಗಿಲ್ಲಾ ಯಾರೂ ಏನೂ ಓದಲೇ ಬೇಕಾಗಿಲ್ಲಾ. ಹಾಗಾದರೆ ನನಗೂ ಕೂಡ ೩ ಜನ ಗಂಡುಮಕ್ಕಳು ಇದ್ದಾರೆ, ನಾನು ಹೇಳಿಬಿಡುತ್ತೇನೆ, ನೀವೆಲ್ಲಾ ಯಾರೂ ಓದಬೇಡಿ. ನೀವೆಲ್ಲರೂ ಬಿ.ಎ. ಪಾಸಾಗಿದ್ದೀರಿ ಎಂದು ಹೇಳಿಬಿಡುತ್ತೇನೆ. ಪರೀಕ್ಷೆ ಬೇಡ ಮೆರಿಟ್ ಬೇಡ ಎಂದರೆ ಆಮೇಲೆ ಅವರು ಕೇಳುವಂಥಾದ್ದನ್ನೆಲ್ಲಾ ಹೇಗೆ ಈಡೇರಿಸಬೇಕು ಹೇಳಿ.

ಶ್ರೀ ಜೆ.ಹೆಚ್. ಪಟೇಲ್.—ತಾವು ಹೀಗೆಲ್ಲಾ ಹೇಳುವಾಗ ಎಲೆಕ್ಷನ್ ಕೂಡ ಬೇಡ ಅಂತ ಹೇಳ ಬೇಡಿ.

ಶ್ರೀ ಆರ್. ಗುಂಡೂರಾವ್.—ನಿಮಗೇಕೆ ಭಯ.

ಶ್ರೀ ಜೆ.ಹೆಚ್. ಪಟೇಲ್.—ನಮಗೇನೂ ಭಯ ಇಲ್ಲ, ಆದರೆ ನೀವು ಏನಾದರೂ ಹಾಗೆ ಅಂದೀರಿ ಅನ್ನುವ ಭಯ ಅಷ್ಟೆ.

ಶ್ರೀ ಆರ್. ಗುಂಡೂರಾವ್.— ಎಲೆಕ್ಷನ್ ಬೇಡ ಎಂದರೆ ಇದರ ಅರ್ಥ ಏನು. ನಾವಾದರೂ ಬರುತ್ತೇವೆ ಅನ್ನುವ ಅರ್ಥವೇ ? ಅಥವಾ ಏನಾದರೂ ನಿಮಗೆ ಭಯವೇ ?

ಶ್ರೀ ಜೆ.ಹೆಚ್. ಪಟೇಲ್.—ನಮಗೆ ಏನೂ ಭಯ ಇಲ್ಲ. ಭಯ ಆಗುವುದು ನಿಮಗೆ.

ಶ್ರೀ ಆರ್. ಗುಂಡೂರಾವ್. —ನಮಗೇನೂ ಭಯ ಇಲ್ಲ. ಈಗ ಅದರಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ಮತ್ತು ಇತರ ಸದಸ್ಯರಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಇದು ಪಕ್ಷದ ಪ್ರತಿಷ್ಠೆ ಏನೂ ಅಲ್ಲ,ಅಥವಾ ಸರ್ಕಾರದ ಪ್ರತಿಷ್ಠೆ ಏನೂ ಅಲ್ಲ, ಮಾನ್ಯ ಲಕ್ಷ್ಮೀಸಾಗರ್‌ರವರು ಕನ್ನಡದಲ್ಲಿ ಮಾತನಾಡುವಾಗ ರೈತರಿಗೆ ಗುಂಡು ಹೊಡೆಯುತ್ತಿದ್ದಾರೆ ಅನ್ನುವ ಮಾತು ಹೇಳಿದರು. ಆ ಬಗ್ಗೆ ಹೇಳಬೇಕಾದರೆ ರೈತರು ನಮ್ಮ ಭಾಗದಲ್ಲೂ ಇದ್ದಾರೆ, ನಿಮ್ಮ ಭಾಗದಲ್ಲೂ ಇದ್ದಾರೆ, ಎಲ್ಲರ ಭಾಗದಲ್ಲೂ ಇದ್ದಾರೆ. ಯಾರೇ ಆಗಲಿ ಎಲೆಕ್ಷನ್ ಬಂದಾಗ ಅವರ ಹತ್ತಿರ ಹೋಗಲೇ ಬೇಕು, ಆ ಎಲೆಕ್ಷನ್‌ನಲ್ಲಿ ಬಂದಮೇಲೆ ನಂತರ ಅಧಿಕಾರಕ್ಕೆ ಬರಬೇಕು. ಹಾಗೇನೇ ಬರುವ ಹಾಗಿಲ್ಲಾ. ಈ ಸಮಸ್ಯೆ ಎಲ್ಲರ ಸಮಸ್ಯೆ, ಒಬ್ಬರದ್ದೇ ಅಲ್ಲ, ಆದರೆ ಇದರಲ್ಲಿ ಭಿನ್ನಾಭಿಪ್ರಾಯಗಳು ಇವೆ ಅಷ್ಟೆ. ನಾನೂ ಕೂಡ ರೈತರ ಉಪಾಧ್ಯಕ್ಷನಾಗಿದ್ದೆ. ಆದುದರಿಂದ ನನಗೂ ಕೂಡ ರೈತರ ಸಮಸ್ಯೆ ಏನು ಅನ್ನುವುದು ಗೊತ್ತಿದೆ. ಈಗ ಇರತಕ್ಕಂಥಾದ್ದು ಗಂಗಾವತಿ ಪ್ರಶ್ನೆ. ತಾವು ಹೇಳುತ್ತಾ ಇದ್ದೀರಿ ಆಂಟಿ ಪ್ರೈಸ್ ರೈಸ್ ಬಗ್ಗೆ ಅವರು ಶಾಂತಿಯುತವಾಗಿ ಪ್ರದರ್ಶನ ಮಾಡಿದರು ಎಂದು. ಅವರು ಶಾಂತಿರೀತಿಯಿಂದ ಹೋಗಿಲ್ಲಾ. ಅವರು ಲೂಟಿ ಮಾಡಿದ್ದಾರೆ, ಬೆಂಕಿ ಹಚ್ಚುವುದಕ್ಕೆ ಶುರುಮಾಡಿದ್ದಾರೆ, ಅನೇಕ ಅಂಗಡಿಗಳನ್ನು ಲೂಟಿ ಮಾಡುವುದಕ್ಕೆ ಹೋಗಿದ್ದಾರೆ ಇದನ್ನೆಲ್ಲಾ ನೋಡಿಕೊಂಡು ಇರುವುದಕ್ಕೆ ಸಾಧ್ಯವಿಲ್ಲಾ. ಆದುದರಿಂದ ನಾನು ಹೇಳುತ್ತೇನೆ ರೈತರ ಸಮಸ್ಯೆಗೂ ಇದಕ್ಕೂ ಸಂಬಂಧವಿಲ್ಲವೆಂದು. ರೈತರ ಬೇಡಿಕೆ ಬಗ್ಗೆ ಹೇಳಬೇಕಾದರೆ I have got still an open mind and I repeat that. ಈಗಲೂ ನಾನು ಹೇಳುತ್ತೇನೆ whatever concessions they want, if you all decide, I am prepared to accept them. I don't hesitate to do it. ತಾವು ಏನು ಹೇಳಿದರೂ ಕೂಡ ಸರಿಯೇ ? You have given me 22 demands. Out of them, whichever is immediately necessary we will do it. ನನಗೆ ಏನಾಗಬೇಕು. ನಾವು ಏತಕ್ಕೆ ಇಲ್ಲಿ ಹೆಚ್ಚು ಹೊತ್ತು ಕೂತುಕೊಳ್ಳಬೇಕು. ಇದರಿಂದ ದೇಶದಲ್ಲಿ ನಾವು ಶಾಂತಿಯನ್ನು ಹೆಚ್ಚಾಗಿ ಸ್ಥಾಪನೆ ಮಾಡುವುದರ ಬದಲು ಇನ್ನೂ ಹೆಚ್ಚಾಗಿ ಅಶಾಂತಿಯನ್ನು ವಹಿಸಿದರೆ ಅದಕ್ಕೆ ನಾವು ಎಚ್ಚರಿಕೆಯನ್ನು ವಹಿಸಬೇಕಾಗುತ್ತದೆ. I am not holding on to that. ಅದನ್ನು ಸಂಬಂಧಪಟ್ಟ ಇಲಾಖೆ ನೋಡಿಕೊಳ್ಳುತ್ತದೆ. ಈ ಆಂಟಿ ಪ್ರೈಸ್ ರೈಸ್ ಬಗ್ಗೆ ಈಗ ಏನು ನಡೆಯುತ್ತಾ ಇದೆ ಅದು ಈಗ ಶಾಂತಿಯಾಗಿದೆ, ಅವರು ಈಪೂತ್ತು ಏನೇನು ಸಮಸ್ಯೆಯನ್ನು ಇಟ್ಟಿದ್ದಾರೋ ಅದನ್ನು ಈಡೇರಿಸುವುದಕ್ಕೆ ಆಗಲಿ ಅಥವಾ ಮುಂದೆ ಯಾವ್ಯಾವ ಸಮಸ್ಯೆಗಳು ಬರುತ್ತದೆ ಅದನ್ನು ಈಡೇರಿಸುವುದಕ್ಕಾಗಲಿ, ಅದನ್ನೆಲ್ಲಾ ಒಂದೇ ದಿವಸದಲ್ಲಿ ಮಾಡುವುದಕ್ಕಾಗುವುದಿಲ್ಲ, ಇದು ದೇಶದ ಸಮಸ್ಯೆ ಆಗಿರುವುದರಿಂದ It depends on International trade Policy. ಅದು whether trade policy is correct or not ಗೊತ್ತಿಲ್ಲ. Why that trade policy was like this,ಎಂದು ಕೇಳಿದರೆ, that is a different issue ನಾನು ಅದನ್ನು ಹೇಳುವುದಕ್ಕೆ ಹೋಗುವುದಿಲ್ಲ. ಏತಕ್ಕೆಂದರೆ ನಾಳೆ ದಿವಸ ಏನಾದರೂ ಕೂಡ ಯಾವುದಾದರೂ ಪ್ರೈಸ್ ರೈಸ್ ಮಾಡಿಬಿಟ್ಟರೆ one fine morning, tomorrow or day after tomorrow ಬೇರೆ ದೇಶದವರು ಎಂದರೆ ಆಯಿಲ್ ಪ್ರೊಡ್ಯೂಸಿಂಗ್ ಕಂಟ್ರೀಸ್‌ನವರು ಏನಾದರೂ ಕೂಡ ಒಂದು ಲೀಟರ್‌ಗೆ ೨೮ ಡಾಲರ್ಸ್ ಎಂದು ಮಾಡಿಬಿಟ್ಟರೆ ಆವಾಗ ಇದ್ದಕ್ಕಿದ್ದ ಹಾಗೆ ಆಯಿಲ್ ಪ್ರೈಸ್ ಜಾಸ್ತಿಯಾಗಿಬಿಡುತ್ತದೆ, ಹಾಗೆಯೇ ರೈಲ್ವೆ ವ್ಯಾಗನ್‌ನವರು ಜಾಸ್ತಿಮಾಡಿಬಿಡುತ್ತಾರೆ. ಆಟೋದವರೂ ಹೆಚ್ಚು ಬೆಲೆ ಕೇಳುತ್ತಾರೆ. ನಾವೂ ನೀವೂ ಏನೂ ಮಾಡುವುದಕ್ಕಾಗುವುದಿಲ್ಲ. ಆವಾಗ ನಾವೂ ನೀವು ಬಾಯಿ ಮುಚ್ಚಿಕೊಂಡು ಕುಳಿತುಕೊಳ್ಳಬೇಕು, ಆಯಿಲ್ ಪ್ರೈಸ್ ಜಾಸ್ತಿಯಾದ ಹಾಗೆಲ್ಲಾ ನಾವು ಕೂಡ ಜಾಸ್ತಿ ಬೆಲೆ ಕೊಡಬೇಕಾಗುತ್ತದೆ. ಅದು ಬೇರೆ ವಿಷಯ. ಡೀಸಲ್ ರೇಟ್ ಮತ್ತಿತರ ಆಯಿಲ್ ಬೆಲೆ ಜಾಸ್ತಿಯಾದರೆ ಆಟೋ ಪ್ರೈಸ್ ಕೂಡ ಜಾಸ್ತಿಯಾಗುತ್ತದೆ ಆಟೋರಿಕ್ಷಾದವರು ಈಗಲೇ ಕೇಳುತ್ತಿದ್ದಾರೆ ನಮಗೆ ೧-೫೦ ಪೈಸೇ ಮಾಡಬೇಕು, ೧-೨೫ ಪೈಸೇ ಆದರೆ ನಮಗೇನೂ ಸಿಕ್ಕುವುದಿಲ್ಲ ಜಾಸ್ತಿ ಮಾಡಿ ಎಂದು ಕೇಳುತ್ತಿದ್ದಾರೆ. ಜನಗಳು ನಮಗೆ ಆಟೋ ಬೆಲೆ ಜಾಸ್ತಿ ಈಗ ೧-೨೫ ಇದ್ದುದನ್ನು ೧-೦೦ ರೂಪಾಯಿ ಮಾಡಿ ಎಂದು ಕೇಳುತ್ತಾರೆ. ಹೀಗೆ ಒಬ್ಬರು

ಜಾಸ್ತಿ ಮಾಡಿಕೊಡಿ ಎಂದು ಕೇಳುತ್ತಾರೆ ಇನ್ನೊಬ್ಬರು ಈಗ ಇರುವುದೇ ಜಾಸ್ತಿ ನಾವು ಅಷ್ಟು ಕೊಡುವುದಕ್ಕಾಗುವುದಿಲ್ಲ. ಕಡಿಮೆ ಮಾಡಿ ಎಂದು ಹೇಳುತ್ತಾರೆ. ನಾವು ಇವೆರಡನ್ನೂ ಕೂಡ ಕಂಟ್ರೋಲ್ ಮಾಡಬೇಕಾದರೆ ಸ್ವಲ್ಪ ಯೋಚನೆ ಮಾಡಬೇಕಾಗುತ್ತದೆ. ಅದಕ್ಕೆ ಸ್ವಲ್ಪ ಸಮಯ ಬೇಕಾಗುತ್ತದೆ ಏತಕ್ಕೆಂದರೆ ಈ ಆಯಿಲ್ ಅನ್ನು ನಾವು ಉತ್ಪಾದನೆ ಮಾಡುವುದಿಲ್ಲ. ಇದನ್ನು ಹೊರಗಿನಿಂದಲೇ ತರಿಸಬೇಕಾಗುತ್ತದೆ ಯಾವಾಗ ನಮ್ಮಲ್ಲಿ ಉತ್ಪಾದನೆ ಮಾಡುವುದಿಲ್ಲವೋ ಆವಾಗ ನಾವು ಇಲ್ಲಿ ಇರುವವರಿಗೆ ಸ್ವಲ್ಪ ಇನ್‌ಸೆನ್‌ಟೀವ್ ಕೊಡಬೇಕಾಗುತ್ತದೆ. ಹಿಂದೆ ಯಾವ ರೀತಿ ಕೊಟ್ಟಿದ್ದಾರೋ ಆರೀತಿ ಕೊಡಬೇಕಾಗುತ್ತದೆ. ಮಾನ್ಯ ವಿರೋಧಪಕ್ಷದ ನಾಯಕರು ಭಾಷಣ ಮಾಡುತ್ತಾ ಹೇಳಿದರು ನಾನು ಇದ್ದಾಗ ಈ ಛತ್ರಕ್ಕೆ ೧೧೦ ರೂಪಾಯಿ ಕೊಡಬೇಕೆಂದು ಸಮರ್ಥಿಸಿದ್ದೇನೆ ಅನ್ನುವ ಮಾತನ್ನು ಹೇಳಿದರು. ನಾನೂ ಕೂಡ ೧೫೫ ರೂಪಾಯಿ ಕೊಡಬೇಕೆಂದು ಸಮರ್ಥಿಸುತ್ತೇನೆ. ಆದರೆ ಆರೀತಿ ಸಮರ್ಥನೆ ಮಾಡಿದರೆ ಅವರು ಕೊಡಬೇಕಲ್ಲಾ, ಒಂದುವೇಳೆ ಅವರು ಕೊಡದೇ ಹೋದರೆ ನಾವು ಕೊಡಬೇಕಾಗುತ್ತದೆ, ಬೇರೆ ದಾರಿಯೇ ಇಲ್ಲಾ. ಬಹಳ ರಾಜ್ಯಗಳು ೧೫೫-೧೬೦ ರೂಪಾಯಿ ಕೊಡಬೇಕೆಂದು ಸಮರ್ಥಿಸಿದ್ದಾರೆ. ನಾವೂ ಕೂಡ ಜಾಸ್ತಿ ಕೊಡಬೇಕು ಎಂದು ಹೇಳುತ್ತೇವೆ. ಆದರೆ ಅವರು ಕೊಡಬೇಕಲ್ಲಾ. ಒಂದು ವೇಳೆ ಕೊಡದೇ ಹೋದರೆ ಅವರು ಇದ್ದಕ್ಕಿದ್ದ ಹಾಗೆ ಯಾವುದಾದರೂ ಒಂದು ಬೆಲೆಯನ್ನು ಗೊತ್ತು ಮಾಡಿ ಬಿಟ್ಟರೆ ಅದಕ್ಕಿಂತಲೂ ಜಾಸ್ತಿ ಬೆಲೆ ನಾವು ಕೊಡಬೇಕಾಗುವ ಸಂದರ್ಭ ಬಂದರೆ ನಮ್ಮ ಬಡ್ಜೆಟ್ಟಿನಲ್ಲಿ ಅದಕ್ಕೆ ಹಣ ಇಟ್ಟುಕೊಳ್ಳಬೇಕಾಗುತ್ತದೆ. ಯಾರೂ ಕೂಡ ಯಾರೇ ಆಗಲಿ ಸರ್ಕಾರದ ಯಾವ ಕೆಲಸ ಮಾಡಬೇಕಾದರೂ ಕೂಡ ದುಡ್ಡು ಖರ್ಚು ಮಾಡಬೇಕಾಗುತ್ತದೆ. ಆ ದುಡ್ಡನ್ನು ಖರ್ಚು ಮಾಡಬೇಕಾದರೆ ತಮ್ಮ ಜೇಬಿನಿಂದ ಕೊಡುವುದಿಲ್ಲ ಯಾವುದಾದರೂ ಕೆಲಸವನ್ನು ನಿಲ್ಲಿಸಬೇಕು, ಆ ದುಡ್ಡನ್ನು ಇಲ್ಲಿ ಕೊಡಬೇಕು. ಇಲ್ಲವೇ ಮಾಡುವಂಥಾ ಕೆಲಸವನ್ನು ಮುಂದುವರೆಸಿದರೆ ಈ ಕೆಲಸವನ್ನು ನಿಲ್ಲಿಸಬೇಕಾಗುತ್ತದೆ. ಬಿಟ್ಟಿನಲ್ಲಿ ಹೇಳುವುದಾದರೆ ಒಂದು ಕಡೆ ಕೆಲಸವನ್ನು ನಿಲ್ಲಿಸಿ ಮತ್ತೊಂದು ಕಡೆ ಕೆಲಸ ತೆಗೆದುಕೊಳ್ಳಬೇಕಾಗುತ್ತದೆ, ಇಲ್ಲವೇ ಆ ಕೆಲಸವನ್ನೇ ಮುಂದುವರೆಸಿದರೆ ಹೊಸದಾಗಿ ತೆಗೆದುಕೊಳ್ಳುವಂಥಾ ಕೆಲಸವನ್ನು ನಿಲ್ಲಿಸಬೇಕಾಗುತ್ತದೆ, ಎಲ್ಲ ಕೆಲಸವನ್ನೂ ತೆಗೆದುಕೊಳ್ಳಬೇಕಾದರೆ ಅಷ್ಟೊಂದು ದುಡ್ಡು ನಮಗೆ ಬೇಕಲ್ಲಾ. ಆದುದರಿಂದ ಮಾನ್ಯ ಅಧ್ಯಕ್ಷರೇ ಇದರಲ್ಲಿ ಹೆಚ್ಚುಗಾರಿಕೆ ಪಡಬೇಕಾದ್ದು ಏನೂ ಇಲ್ಲ. ಈಗ ನಮ್ಮ ಮುಂದಿರುವ ಪ್ರಶ್ನೆ ಗಂಗಾವತಿ ಪ್ರಶ್ನೆ. ಅಲ್ಲಿ ನಡೆದಿರತಕ್ಕಂಥಾ ಚಳುವಳಿ ಆಂಟಿಪ್ರೈಸ್‌ಗೋಸ್ಕರ ನಡೆದಿದ್ದು. ಅದಕ್ಕೂ ರೈತರ ಚಳುವಳಿಗೂ ಸಂಬಂಧವಿಲ್ಲಾ. ಆದುದರಿಂದ ಅದರ ಬಗ್ಗೆ ರೂಲ್ ನಂಬರ್ ೫೦ರ ಪ್ರಕಾರ ಅಡ್ಜರ್ನ್‌ಮೆಂಟ್ ಮೋಷನ್ ತರುವಂಥಾದ್ದು ಅವಶ್ಯಕತೆ ಇರಲಿಲ್ಲಾ. It is urgent law and order problem ತಾವು ಹೇಳಿದ ರೀತ್ಯಾ it is not an extra ordinary law and order problem ಆಗುವುದಿಲ್ಲ. ಹಿಂದೆಯೂ ಸಹ ಇದೇ ರೀತಿ ಬಂದು ಅದಕ್ಕೆ ಅಧ್ಯಕ್ಷರು ರೂಲಿಂಗ್ ಕೊಟ್ಟಿರುವ ಉದಾಹರಣೆಗಳು ಇವೆ, ಹಿಂದೆ ಇಂಥಾ ಗಲಾಟೆ ಗೊಂದಲಗಳು ಆಗಿರತಕ್ಕಂಥಾ ಉದಾಹರಣೆಗಳು ಇವೆ ಅದನ್ನೆಲ್ಲಾ ತಂದು ಓದಬೇಕು ಎನ್ನುವುದಾದರೆ ಓದುತ್ತೇನೆ. ೧-೧½ ವರ್ಷದ ರಿಕಾರ್ಡ್‌ಗಳೆಲ್ಲಾ ಇದೆ, ಇಂಥಾ ಗಲಭೆಗಳು ಆಗಲೂ ನಡೆದಿವೆ ಆವಾಗ ಏನು ಮಾಡಿದರು ಅವನ್ನೆಲ್ಲಾ ಆ ಪ್ರೊಸೀಡಿಂಗ್ಸ್‌ನಲ್ಲಿದೆ ಬೇಕಾದರೆ ತಂದು ಓದುತ್ತೇನೆ. ಇಂತಹ ಸನ್ನಿವೇಶ ಬಂದಾಗ ಸ್ಪೀಕರ್‌ರವರು ರೂಲಿಂಗ್ಸ್ ಕೊಟ್ಟಿದ್ದಾರೆ, ಬೇಕಾದಷ್ಟು ರೂಲಿಂಗ್ಸ್ ಕೊಟ್ಟಿದ್ದಾರೆ, ಎಷ್ಟೋ ಸಂದರ್ಭಗಳಲ್ಲಿ ಬೇಕಾದಷ್ಟು ಎವಿಡೆನ್ಸ್ ಬಂದು ತೀರ್ಮಾನ ತೆಗೆದುಕೊಂಡಿದ್ದಾರೆ. ಈಗ ಗಂಗಾವತಿ ಪ್ರಶ್ನೆ ಏನು ಬಂದಿದೆ. ಹಿಂದೆ ನಡೆದಿರತಕ್ಕಂಥಾ ಘಟನೆಗಳಿಗೂ ಈ ಘಟನೆಯನ್ನೂ ನೋಡಿದರೆ ಇದು, ಅದು ಅಂಥಾ ವಿಶೇಷ ಪರಿಸ್ಥಿತಿ ಎಂದು ನಾನು ತಿಳಿದುಕೊಂಡಿಲ್ಲಾ. ಅಲ್ಲಿ ಸಾಮಾನ್ಯ ನಾಗರೀಕರ ಮೇಲೆ, ಸಾಮಾನ್ಯ ವ್ಯಾಪಾರಸ್ಥರ ಮೇಲೆ, ಸಾಮಾನ್ಯ ರೈತರ ಮೇಲೆ ಏನು ಗಲಾಟೆ ನಡೆದಿದೆ ಅನ್ನುವುದನ್ನು ನೋಡುವುದಾದರೆ ಅದನ್ನು ನೋಡಿಕೊಂಡು ಸುಮ್ಮನೆ ಕೂತುಕೊಳ್ಳುವುದಕ್ಕಾಗುತ್ತದೆಯೇ ? ಇದರಿಂದ ಎಷ್ಟೋ ರೈತರಿಗೂ ಪೆಟ್ಟು ಬಿದ್ದಿವೆ ಅಲ್ಲಿ ಪೆಟ್ರೋಲ್ ಬಂಕ್‌ಗೆ ಬೆಂಕಿ ಹಚ್ಚಿದ್ದಾರೆ, ವ್ಯಾಪಾರಸ್ಥರ ಅಂಗಡಿಗಳನ್ನು ಲೂಟಿ ಮಾಡಿದ್ದಾರೆ. ರೈತರ ಮೇಲೂ ದಬ್ಬಾಳಿಕೆ ನಡೆದಿದೆ. ಹೀಗೆಲ್ಲಾ ನಡೆಯುತ್ತಾ ಇರುವಾಗ ಅಲ್ಲಿ ಏನಾದರೂ ಶಾಂತಿ ನೆಲಸಬೇಕಾದರೆ ಪೋಲೀಸರು ಲಾಠಿ ಛಾರ್ಜ್ ಮಾಡಿದ್ದಾರೆ ಹಾಗೆ ಲಾಠಿ ಛಾರ್ಜ್ ಮಾಡಿದಾಗ ಕೆಲವರಿಗೆ ಪೆಟ್ಟು ಬಿದ್ದಿರಬಹುದು. ಅಲ್ಲದೆ ಬರೆ ಗಂಗಾವತಿಯಲ್ಲೇ ಅಲ್ಲ ಬೇರೆ ಕಡೆಯೂ ಕೂಡ ಎರಡು ಕಡೆ ಬೆಂಕಿ ಹಚ್ಚಿದ್ದಾರೆ, ಲೂಟಿ ಮಾಡಿದ್ದಾರೆ. ಆದ್ದರಿಂದ ಅಲ್ಲೆಲ್ಲಾ ಪೋಲೀಸರು ಟಿಯರ್‌ಗ್ಯಾಸ್ ಉಪ

ಯೋಗಿಸಿದ್ದಾರೆ, ಪೂಟಿಂಗ್ ಮಾಡಿದ್ದಾರೆ ಗಲಾಟೆ ಆದಂಥಾ ಪ್ರದೇಶದಲ್ಲಿ ಅರ್ಜೆಂಟಾಗಿ ಲಾ ಅಂಡ್ ಪ್ರಾಬ್ಲಮ್ ಬಂದೇ ಬರುತ್ತದೆ. ಇಂಥಾ ಒಂದು ಪರಿಸ್ಥಿತಿ ಯಾವ ಕಾಲದಲ್ಲೂ ನಡೆದಿಲ್ಲವೇ ? ಹಿಂದೂ ನಡೆದಿದೆ, ಈಗಲೂ ನಡೆಯುತ್ತದೆ, ಮುಂದೂ ನಡೆಯುತ್ತದೆ.ಈ ಸಂದರ್ಭದಲ್ಲಿ ಲಾ ಅಂಡ್ ಆರ್ಡರ್ ಮೆಯಿಂಟೇನ್ ಮಾಡಬೇಕಾದರೆ ಕಾನೂನನ್ನು ಉಪಯೋಗಿಸಲೇ ಬೇಕಾಗುತ್ತದೆ. ಮೊದಲಿನಿಂದಲೂ ಹೀಗೇ ನಡೆದುಕೊಂಡು ಬಂದಿದೆ, ಇದೇನೂ ಅಂಥ ವಿಶೇಷವಲ್ಲಾ. ಈ ಎಲ್ಲಾ ಕಾರಣಗಳಿಂದ ಈ ಒಂದು ನಿಲುವಳಿ ಸೂಚನೆಯನ್ನು ಅಲೋ ಮಾಡಬೇಕಾಗಿಲ್ಲಾ,ಅದರಲ್ಲಿ ಏನೂ ಇಲ್ಲ ಎಂದುಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

SRI B. B SAYANAK,—Sir, I want to make a suggestion. The prices of fertilisers and essential commodities, sugar etc. are soaring. I request the Hon. Chief Minister to go to Delhi and discuss with the Prime Minister or the Minister in charge of the port-folio and take steps so that the prices are reduced. Otherwise everyday there will be Bundhs and firing.

ಶ್ರೀ ಬಾಪುರಾವ್ ದೇಶಪಾಂಡೆ.—ಈಗ ಇದರಲ್ಲಿ ಎರಡು ಅಂಶಗಳಿವೆ. ಒಂದು ಬೆಲೆ ಏರಿಕೆ ಮತ್ತು ರೈತರ ಚಳುವಳಿಯಿಂದ ಅಶಾಂತ ಪರಿಸ್ಥಿತಿ ಉಂಟಾಗಿದೆ ಇದರಿಂದ ಪೋಲೀಸರು ಕ್ರಮ ಕೈಕೊಳ್ಳುತ್ತಿದ್ದಾರೆ. ರಾಜ್ಯದಲ್ಲಿ ಶಾಂತ ಪರಿಸ್ಥಿತಿ ಉಂಟಾಗಬೇಕಾದರೆ ಪೋಲೀಸರು ಉಗ್ರ ಕ್ರಮ ಕೈಕೊಳ್ಳಬಾರದೆಂದು ಹೇಳುತ್ತೇನೆ. ಈಗ ಆಗಿರುವ ಪರಿಸ್ಥಿತಿಯು ನಿಜ ಚಿತ್ರ ಹೊರ ಬರಲು ಮತ್ತು ದುಷ್ಕರ್ಮಿಗಳು ಯಾರು ಎಂಬುದನ್ನು ಕಂಡುಹಿಡಿಯುವ ಬಗ್ಗೆ ಮುಖ್ಯಮಂತ್ರಿಗಳು ನಿಷ್ಪಕ್ಷಪಾತವಾದ ತನಿಖೆ ಮಾಡುತ್ತೇವೆಂದು ಹೇಳಿದ್ದಾರೆ. ಆದರೆ ನಾವು ನ್ಯಾಯಾಂಗ ತನಿಖೆಯಾಗಬೇಕೆಂದು ಮತ್ತೊಮ್ಮೆ ಕೇಳಿಕೊಳ್ಳುತಿದ್ದೇವೆ.

ಇನ್ನು ಗೊಬ್ಬರ ಹಾಗೂ ಇತರ ವಸ್ತುಗಳು ಎಷ್ಟೋ ಕಡೆ ಸಿಗುತ್ತಿಲ್ಲ. 20 ಅಂಶಗಳ ಕಾರ್ಯಕ್ರಮದ ಪ್ರಕಾರ ನಾನು ಒಂದು ಕಡೆ ಚೇರಮನ್ ಆಗಿದ್ದೇನೆ. ಆದರೆ ಒಂದು ಅನುಭವದಿಂದ ಹೇಳಬೇಕೆಂದರೆ ಕೋಆಪರೇಟಿವ್ ಸೊಸೈಟಿಗಳಲ್ಲಿ ಯಾವ ವಸ್ತುಗಳೂ ಸಹ ಇಲ್ಲದ ಕಾರಣ ಹೊರಗಡೆ ಬೆಲೆಗಳ ಹೆಚ್ಚಲು ಕಾರಣವಾಗಿದೆ. ಈ ದೃಷ್ಟಿಯಿಂದ ಸರ್ಕಾರ ಬೆಲೆಗಳನ್ನು ಇಳಿಸಲು ಕ್ರಮ ಕೈಕೊಳ್ಳಬೇಕು ಮತ್ತು ವಿತರಣೆ ವ್ಯವಸ್ಥೆಯನ್ನು ಸರಿಯಾಗಿ ಮಾಡಿದರೆ ಶಾಂತ ಪರಿಸ್ಥಿತಿ ಮೂಡುತ್ತದೆಂದು ನಾನು ತಿಳಿದುಕೊಂಡಿದ್ದೇನೆ.

SRI NAZIR AHMED SIDDIQUI.—Sir, the Hon. Chief Minister pleaded helplessness of the Government about containing the prices. This is to take shelter behind this international phenomenon. Even though all these countries are living within the ambit of capitalist system, there is a difference between the well-managed and the ill-managed societies *e.g.*, OPEC price rise or whatever it is. For example, in Turkey, the rate of inflation is 77% and in Japan, it is 18%. So, the question is what the Government is trying to do to contain the inflation and prevent the rise in prices. That was my point which I wanted to say. If you just say' we cannot, again the Government will be a helpless victim to that. The question is what the Government intends to do. Those who commit such things, they must be punished. Is it beyond the capacity of the Government and the Chief Minister to diffuse the situation and see that whatever the demands are there are conceded immediately ? Otherwise, it reaches its last

point. People are so much angry. There may be an instigation. There may be genuine demands. Or there may be motivation. You have to take care of that aspect. Before it reaches the flash point and if you take shelter that whenever they do, we will keep on fireing it amounts to callous attitude, though it may not be so.

SRI R. GUNDU RAO.—Sir, Sayanak has raised a matter about the raising prices of fertilisers and essential commodities and suggested that I should go to Delhi and discuss with the Prime Minister or the Minister concerned. We are doing that. Next when I go to Delhi, I will definitely meet them and discuss the problem and what best I can do in this matter, I will do it.

ಇನ್ನು ಮಾನ್ಯ ದೇಶಪಾಂಡೆಯವರ ಪ್ರಶ್ನೆಗೆ ಉತ್ತರ ಹೇಳಬೇಕೆಂದರೆ, ಈ ನರಗುಂದ ಹಾಗೂ ನವಲಗುಂದದಲ್ಲಿ ಏನು ರೈತರ ಚಳುವಳಿಯ ಮೂಲಕ ಏನು ಗಲಾಟೆಗಳು ನಡೆದಿವೆ. ಆ ಬಗ್ಗೆ impartial enquiry ಮಾಡಿಸುವುದಾಗಿ ಈಗಾಗಲೇ ಹೇಳಿದ್ದೇನೆ. ಅದನ್ನು ಯಾವ ತರಹ ಮಾಡುತ್ತೇವೆಂಬುವನ್ನು ಸಹ ಹೇಳಿದ್ದೇನೆ. ಈ ಬಗ್ಗೆ ನಾನು ಏನು ಸ್ಟೇಟ್‌ಮೆಂಟ್ ಮಾಡಿದ್ದೇನೆ, ಅದಕ್ಕೆ ನಾನು ಬದ್ಧನಾಗಿದ್ದೇನೆ. ನರಗುಂದ ಮತ್ತು ನವಲಗುಂದಕ್ಕೆ ಸಂಬಂಧಪಟ್ಟಂತೆ ಯಾವ ರೀತಿ ತನಿಖೆ ಮಾಡಿಸಲಾಗುವುದು ಎಂಬ ಬಗ್ಗೆ ನಾನು ಮಾನ್ಯ ಬೊಮ್ಮಾಯಿ ಅವರಿಗೆ ನೆನ್ನೆ ದಿವಸ ಉದಾಹರಣೆ ಕೊಟ್ಟು ಹೇಳಿದ್ದೇನೆ. I still say my mind is open and definitely an impartial enquiry which I think all the Members will have an appreciation will be held. ಎಲ್ಲರ ಮನಸ್ಸಿಗೆ ತೃಪ್ತಿಯಾಗುವ ರೀತಿಯಲ್ಲಿ ತನಿಖೆ ಮಾಡಿಸುವುದಾಗಿ ನೆನ್ನೆ ಸಹ ಹೇಳಿದ್ದೇನೆ, ಇವೊತ್ತು ಸಹ ಹೇಳುತ್ತಿದ್ದೇನೆ. ಇದನ್ನು ನಾನು ಪ್ರತಿಷ್ಠೆಯ ಪ್ರಶ್ನೆಯನ್ನಾಗಿ ಮಾಡಿಕೊಳ್ಳುವುದಿಲ್ಲವೆಂದು ನಾನು ತಮಗೆ ಪುನಃ ಸ್ಪಷ್ಟಪಡಿಸುತ್ತೇನೆ. ಕೆಲವು ಕಡೆಗಳಲ್ಲಿ ರೈತರಿಗೆ ತೊಂದರೆಯಾಗಿದೆ, ಆದಕಾರಣ ನಾನು ಖಂಡಿತವಾಗಿಯೂ ತನಿಖೆ ಮಾಡಿಸುತ್ತೇನೆ. ಪರಿಸ್ಥಿತಿ ಮಾಮೂಲು ಸ್ಥಿತಿಗೆ ಬರಬೇಕಾಗಿದೆ ; ಅದು ಬರುತ್ತದೆ. ರೈತರ ಬಗ್ಗೆ ಎಲ್ಲೂ ಹಿಂಸಾಕೃತ್ಯ ನಡೆದಿಲ್ಲ. ಏನಿದ್ದರೂ ಬೆಲೆ ಏರಿಕೆ ಬಗ್ಗೆ ಹಿಂಸಾಕೃತ್ಯಗಳು ನಡೆಯುತ್ತಿವೆ. ಕೆಲವು ಕಡೆಗಳಲ್ಲಿ ಜನರು ಬೆಲೆ ಏರಿಕೆ ಬಗ್ಗೆ ಪ್ರದರ್ಶನ ಮಾಡುವಾಗ ರೈತರನ್ನು ಸಹ ಸೇರಿಸಿಕೊಂಡು ಕೂಗಿರಬಹುದು ; ಆಗ ಅಲ್ಲಿಯ ವರದಿಗಾರರು ಜನರು ರೈತರ ಬಗ್ಗೆ ಜನರು ಚಳುವಳಿ ನಡೆಸಿದರು ಎಂದು ಬರೆದಿರಬಹುದು ; ಅದೇ ಪತ್ರಿಕೆಗಳಲ್ಲಿಯೂ ಬಂದಿರಬಹುದು ; ಆದರೆ ನಿಜವಾದ ಸಂಗತಿ ಅವಲ್ಲ. ಸರ್ಕಾರಕ್ಕೆ ಬಂದಿರುವ ಮಾಹಿತಿ ಏನೆಂದರೆ, ರೈತರ ಬಗ್ಗೆ ನರಗುಂದ ಮತ್ತು ನವಲಗುಂದದಲ್ಲಿ ಮಾತ್ರ ರೈತರ ಬಗ್ಗೆ ಚಳುವಳಿ ನಡೆದಿದೆ. ಇನ್ನು ಬೇರೆ ಕಡೆಗಳಲ್ಲಿ ಬೆಲೆ ಏರಿಕೆ ಬಗ್ಗೆ ಮಾತ್ರ ಚಳುವಳಿ ನಡೆಯುತ್ತಿದೆ. ಈ ಚಳುವಳಿಗಳಿಗೂ ಮತ್ತು ರೈತರಿಗೂ ಯಾವ ಸಂಬಂಧವೂ ಇಲ್ಲ. ಆದಕಾರಣ ನಾವು ನರಗುಂದ ಮತ್ತು ನವಲಗುಂದಕ್ಕೆ ಸಂಬಂಧಪಟ್ಟಂತೆ ತನಿಖೆ ಯಾವ ರೀತಿ ಮಾಡಿಸಬೇಕೆಂದು ತೀವ್ರವಾಗಿ ಆಲೋಚನೆ ಮಾಡುತ್ತಿದ್ದೇವೆ. Please do not club these two cases. This is of a different ntaure. In a different manner we have to handle that. ನಾಳೆ ದಿವಸ ಹೆಚ್ಚಿನ ಸಾಮಾನುಗಳು ಬಂದರೆ ಇಲ್ಲವೇ ನಾಲ್ಕು ಜನ ಕಾಳಸಂತೆಕೋರರನ್ನು ಬಂಧನದಲ್ಲಿಟ್ಟರೆ ಬೆಲೆಗಳೆಲ್ಲಾ ಕಡಿಮೆಯಾಗಬಹುದು. ಆದರೆ ಹೆಚ್ಚಿನ ಸಾಮಾನುಗಳು ಬಾರದಿದ್ದರೆ ಏನು ಮಾಡಬೇಕು ಎಂಬುದರ ಬಗ್ಗೆ ನಾವು ನೀವು ಕುಳಿತು ಯೋಚನೆ ಮಾಡಬೇಕಾಗುತ್ತದೆ. ಆದಕಾರಣ ರೈತರ ಚಳುವಳಿಗೂ ಮತ್ತು ಈ ಬೆಲೆ ಏರಿಕೆ ಚಳುವಳಿಗೂ ಸಂಬಂಧ ಕಲ್ಪನೆ ಮಾಡಬೇಡಿ. As far as the ryots movement is concerned, normalcy is there. ಇನ್ನು ಬೆಲೆ ಏರಿಕೆ ಬಗ್ಗೆ ಏನು ಚಳುವಳಿ ನಡೆಯುತ್ತಿದೆ, ಈ ವಿಚಾರದಲ್ಲಿ anti-price elements ನ್ನು ಸೇರಿಸಿಕೊಂಡು ಸರ್ಕಾರವನ್ನು ಹೆದರಿಸುತ್ತೇವೆಂದು ಯಾರಾದರು ತಿಳಿದುಕೊಂಡಿದ್ದರೆ Government is strong enough to put down this type of violence and anti-social elements.

† SRI C. M. ARUMUGHAM.—Sir, I had an occasion to v sit those areas *i.e* , Naragund and Navalgund, along with the Hon. Chie Minister. But I could not speak anything after my return because some of the hon. Members spoke and I endorsed them. Now, I only submit that let us not politicalise this issue of the Farmers as well as the general public. The general public are those who are agitating against the price rise. They are the consumers. The farmers different from the con sumers. You give concessions to farmers but at the same time pro tect the consumers also. So far as the farmers are concerned, the Hon. Chief Minister gave some concession. In addition to them, there were some suggestions from hon. Member Sri Bommai and other hon. M mbers that the Chief Minister must also consider a judicial probe so far as Nargund and Navalgund incidents are concerned. So, there must be a judicial probe so far as the Nargund and Navalgund are concerned.

4-30 P.M.

I also agree that whenever there is a firing it is not possible to order for the judicial probe. But I want the Government to consider a judicial probe with regard to the incidents of Nargund and Navalgund The agriculturists were neglected all these years. Therefore, we will have to consider that point also.

About the price rise three factors have to be considered-(1) prices which could be controlled by the State Government, (2) prices which could be controlled by the Central Government and (3) prices which are beyond their control. Petrol prices have gone up Petrol, petroleum products and diesel prices are fixed by the gulf countries. But, the price of edible oil has gone up and the price of sugar has also gone up. Today sugar is being sold at Rs. 8 and Rs. 9/- per K.g. what steps the State Government proposes to take to control prices? There is agitation. The agitation started because prices are more. As the Hon'ble Chief Minister put it the black-marketers, smugglers and the horders suck the blood of the poor people. In North Karnataka area there is a person owning 800 acres of land. Still he is the leader. Still he is the popular man and he is respected Can we allow that ? A farmer means a marginal farmer, but not big land-lords. How this person escaped from the land ceiling ? Is he so big a person ? I know some big person also is involved in it. Such persons and some big land-lords have not paid this water rate and betterment levy and they want to escape from payment. There are others who are exploiting the farmers. Some persons have not paid the betterment tax, because they are influential people. These things

came to our notice, because there was an agitation. If there was no agitation it would not have come to our notice. If the Hon'ble Chief Minister were to not mistake me. I want to mention one thing. He said because of the goondas, anti-social elements, the agitation is there. I was told that the agitation at Nargund and Navalgund was started by the farmers. I also agree that this agitation at Nargund and Navalgund was well organised because the villagers participated in it. Some people who are affected started agitation about the price rise, and others also joined in it. The other day in Dharwad when we were coming back we saw more number of people and less number of police and at some places there were more number of police and less number of people and that police were hesitant to face the mob, because those people were throwing stones. This price rise affect the members of the society, members of the general public and also the officers. But, when I heard this is all organised by the goondas I was a little upset. I do not know whether there is any organised association on the price hike. Whether there is any organised association, if there is any president, somebody could represent. Kindly send for them and have a talk with them.

Yesterday, in my place I could not get ½ Kg. of sugar. The Government have to takle this price rise. You have to think over very seriously about this and your intelligence wing must supply all the necessary information to you.

According to the Reserve Bank of India, the price rise in all essential commodities is 26%. I request you to please check up and try to bring down the prices. It is not difficult for our Chief Minister to talk to the Prime Minister and other Ministers at the Centre. I do not know how for he will be able to tackle it. This price rise is there in all other states also. I request the Chief Minister to kindly consider weather it is possible to have a judicial probe with regard to the incidents that took place at Naragund and Navalgund. It is the duty of the Opposition to point out the defects of the Government and it is also the duty of all other Members who are representatives of the people, to kindly take drastic measures against the smugglers, black-marketers and hoarders who are responsible for this and try to control prices.

SRI R. GUNDU RAO.—It is not correct. I just want to bring to your notice. The Hon'ble Member can verify the proceedings. I never said that farmers are goondas.

SRI C.M. ARUMUGHAM.—I also did not say like that.

SRI R. GUNDU RAO.—It is in the proceedings that those who organised this agitation are farmers. But farmers never indulge in this type of violence. That is my statement. In the name of farmers and in the name of this agitation, some anti social elements mix with them and create these problems and they run away and that blame will come on the farmers. That is my point. I made it very very clear on that day and even now I say that the farmers never do this type of violence. It is only the goonda elements and the anti-social elements and some politically disgruntled people who are not able to secure any confidence of the people, who are hesitating to face the people joined in the middle and created this type of violence and ran away and that blame has come on the poor farmers. That is what I said. I will clarify this point in front of them also. There is no worry. Second thing is my hon. friends have expressed their concern about the price rise. The Government will look into that aspect. The price rise is a continuous process and it will have a cumulative effect on all the essential commodities. To say if there is price hike in diesel and other petroleum products naturally there will be rise in rates of other articles and ultimately it is a burden on the consumer. Even when the Octroi was in vogue it was not the business-man who suffered or has paid the Octroi. It was the consumers who have paid the Octroi. The business men never paid the octroi or the higher rate of taxes imposed on the articles from time to time. I was a Municipal President for nearly 10 years and I know how the consumers were burdened with taxes and how the were made to pay the Octroi through the businessman who are called as middlemen in the trade. It is a known principle that whenever there is price hike the ultimate suffer will be the consumers. Therefore, I say that we should take action and we have taken action to punish the smugglers and black-marketers. But sometimes it is beyond our control to put them in jail because of legal lacuna and reliefs provided under the Criminal Procedure Code. If a blackmarketer is arrested to-day he will immediately approach the Court with a bail application and the Court will release him taking some bond as prescribed in the Criminal Procedure Code. This is the situation.

SRI B.B. SAYANAK.—Sir, the traders are selling the articles at a higher price with the connivance of police officers. These police officers are not apprehending the blackmarketers. That is our charge.

SRI R. GUNDU RAO.—We have already taken action to book the smugglers and black marketers and we will continue to take action against these anti social elements. This I have already informed this House when I gave the statistical figures in respect of

persons arrested. To-day also I repeat that Government will take action against the black-marketers and hoarders. I also agree that we should take stringement measure to put down the hoarders.

ಶ್ರೀ ಎಸ್. ಆರ್. ಬೊಮ್ಮಾಯಿ.—ಒಂದು ವಿಚಾರದ ಬಗ್ಗೆ ಹೇಳುತ್ತೇನೆ. ತಾವು ರೈತರ ಚಳುವಳಿಯ ಬಗ್ಗೆ ಹೇಳಿರತಕ್ಕದ್ದು ಪತ್ರಿಕೆಯಲ್ಲಿ ಬಂದಿದೆ. ಆದರೆ ತಾವು ಏನು ಅದರ ಬಗ್ಗೆ ಹೇಳಿದ್ದೀರೋ ಅದೆಲ್ಲಾ ಪ್ರೊಸೀಡಿಂಗ್ಸ್‌ನಲ್ಲಿ ಹೋಗಿದೆ. ಆದರೆ ಪತ್ರಿಕೆಯಲ್ಲಿ ಬಂದಿರುವುದನ್ನು ಓದುತ್ತೇನೆ.

> "ಉತ್ತರ ಕರ್ನಾಟಕದಲ್ಲಿ, ಧಾರವಾಡ ಮತ್ತಿತರ ಜಿಲ್ಲೆಗಳಲ್ಲಿ ನಡೆಯುತ್ತಿರುವ ಚಳುವಳಿಯನ್ನು ಮುಖ್ಯಮಂತ್ರಿಗಳಾದ ಶ್ರೀ ಗುಂಡೂರಾವ್ ರವರು ಇಂದು "ಪೂರ್ವಯೋಜನೆ ಗುಂಡಾ ಚಳುವಳಿ" ಎಂದು ವಿಧಾನ ಸಭೆಯಲ್ಲಿ ವರ್ಣಿಸಿದರು. ಅಲ್ಲಿ ನಡೆಯುತ್ತಿರುವುದು ರೈತರ ಚಳುವಳಿಯಲ್ಲ, ರೈತರ ಹೆಸರಿನಲ್ಲಿ ಸಮಾಜ ಘಾತುಕ ಶಕ್ತಿಗಳು, ಗಲಾಟೆ ದೊಂಬಿ ನಡೆಸುತ್ತಿದ್ದಾರೆಂದು ಆಪಾದಿಸಿದರು"

ಗುಂಡಾಗಳ ಚಳುವಳಿ, ಹೊರಗಿನ ಶಕ್ತಿಗಳು ಬಂದಿವೆ ಎನ್ನುವ ಮಾತುಗಳು ಹೆಡ್‌ಲೈನ್ಸ್‌ನಲ್ಲಿ ಬಂದಿವೆ. ಅದಕ್ಕಾಗಿ ರೈತರು ನಮಗೆ ಟೆಲಿಗ್ರಾಂಗಳನ್ನು ಕಳುಹಿಸಿದ್ದಾರೆ. ಫೋನ್‌ನಲ್ಲಿ ಹೇಳುತ್ತಿದ್ದಾರೆ, ಮುಖ್ಯ ಮಂತ್ರಿಗಳವರು ನಮ್ಮ ಚಳುವಳಿಯನ್ನು ಗುಂಡಾಗಳ ಚಳುವಳಿ ಎಂದು ಕರೆದಿದ್ದಾರೆಯೇ ಎಂದು ನಮ್ಮನ್ನು ಪ್ರಶ್ನಿಸುತ್ತಿದ್ದಾರೆ. ಇದನ್ನು ರೆಫರ್ ಮಾಡಿಯೇ ಮಾನ್ಯ ಶ್ರೀ ಆರ್ಮುಗಂ ರವರು ಹೇಳಿದ್ದೆಂದು ಕಾಣುತ್ತದೆ.

ಶ್ರೀ ಆರ್. ಗುಂಡೂರಾವ್.—ಕೆಲವಾರು ಘಟನೆಗಳ ಬಗ್ಗೆ ತಪ್ಪು ಕಲ್ಪನೆ ಕೊಡುವಂಥ ಪ್ರಕೃತಿ ಕೆಲವು ಪತ್ರಿಕೆಗಳಲ್ಲಿ ಬಂದಿವೆ. ಅದಕ್ಕೆ ಏನು ಮಾಡುವುದಕ್ಕಾಗುತ್ತದೆ? ನಾನು ಇದರ ಬಗ್ಗೆ ಕ್ಲಿಯರ್ ಆಗಿ ಹೇಳಿದ್ದೇನೆ. ರೈತರ ಹೆಸರಿನಲ್ಲಿ ಕೆಲವು ಆಂಟಿ ಸೋಶಿಯಲ್ ಎಲಿಮೆಂಟ್ಸ್ ಸೇರಿಕೊಂಡು ಈ ರೀತಿ ಗಲಾಟೆಗಳನ್ನು ಮಾಡುತ್ತಿದ್ದಾರೆಂದು ಹೇಳಿರುವುದನ್ನು, ಬರೆಯುವುದನ್ನೇ ಬಿಟ್ಟು ಬಿಟ್ಟರು, ಯಾರೋ ನಮಗೆ ಆಗದೇ ಇರುವವರು ಬರೆದಿದ್ದಾರೆ ಬಿಡಿ ನಮಗೇನೂ ಆಗುವುದಿಲ್ಲ. ಕೆಲವು ಪತ್ರಿಕೆಗಳವರು ಸಹ ರಾಜಕೀಯ ಮಾಡುವುದಕ್ಕೆ ಶುರು ಮಾಡಿದ್ದಾರೆ. ತಪ್ಪೇನಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಸಹ ಹೇಳಿದ ಹಾಗೆ ನಾವು ಹೇಳುವುದೇ ಒಂದು ಪತ್ರಿಕೆಗಳಲ್ಲಿ ಬರುವುದೇ ಒಂದು. ಆದರೆ ನಾನು ಹೇಳಿರತಕ್ಕದ್ದು ಬೇರೆ ಪತ್ರಿಕೆಗಳಲ್ಲಿ ಸರಿಯಾಗಿಯೇ ಬಂದಿದೆ. ಅದು ಕೆಲವು ಪತ್ರಿಕೆಗಳ ಜಾಡ್ಯ. ರೈತರು ದೇಶದಲ್ಲಿ ಶಾಂತಿ ಸ್ಥಾಪನೆ ಮಾಡುವ ವಿಷಯವನ್ನು ಹೇಳಿದ್ದನ್ನು ಹಾಕುವುದನ್ನು ಬಿಟ್ಟರು, ಅವರನ್ನು ಇನ್ನು ರೇಗಿಸುವುದಕ್ಕೆ ಏನು ಬೇಕೋ ಅದನ್ನು ಬರೆದರು. ಹೆಡ್ ಲೈನ್ಸ್‌ನಲ್ಲಿ ಆಂಟಿ ಸೋಶಿಯಲ್ ಎಲಿಮೆಂಟ್ಸ್ ಎಂದು ಬರೆದಿದ್ದಾರೆ, ಅಡಿಯಲ್ಲಿ ಅದರ ಪೂರ್ಣ ವಿವರ ಕೊಟ್ಟಿದ್ದಾರೆ, ಹೀಗೆ ಮಾಡುವುದಾದರೆ ಅಂಥವರನ್ನು. I do not know what I should call them. I am very sorry to say this. If they want to report wrong things let them hang themselves by reporting false information.

SRI B. BASAVALINGAPPA.—I expected the Hon'ble Chief Minister would reply to certain issues raised by the hon. Members. Now, again I would like to bring to the notice of the Hon'ble Chief Minister the issues raised by the Members of this side.

1. Judicial Probe headed by a High Court Judge to enquire into the incidents of police firing at Nargund and Navalgund.

2. To release all the Leaders of Farmers Association and Farmers community and also release of innocent persons.

3. To Invite all the Leaders of Farmers Association for discussion to Bangalore regarding their demands

4. Invite all the leaders of the Anti-price rise agitation for discussion regarding their demands.

5. To announce relief to the farmers on their demand.
These were some of the points raised by the hon. Members. Now, I would like to have a reply on these points from the Hon'ble Chief Minister.

ಶ್ರೀ ಆರ್. ಗುಂಡೂರಾವ್.--ನೀವು ಕೇಳಿದ ಎಲ್ಲಾ ವಿಷಯಗಳಿಗೆ ನಾನು ಆಗಲೇ ಒಪ್ಪಿಕೊಂಡಿದ್ದೇನೆ. ಹೊಸದಾಗಿ ಯಾವುದೋ ಒಂದು ಪಾಯಿಂಟ್‌ನ್ನು ಬಿಟ್ಟು ಬಿಟ್ಟು ಬಾಕಿ ಎಲ್ಲಾ ಒಪ್ಪಿಕೊಂಡಿದ್ದೇನೆ. ಗಂಗಾವತಿಯು ರೈತರ ಸಮಸ್ಯೆಯೊಳಗೆ ಬರುವುದಿಲ್ಲ, ಬಾಕಿದು ನವಲಗುಂದ, ನರಗುಂದ ಬಗ್ಗೆ I have stated that I will announce within 31st of this month what type of enquiry it will be. On this point a gentlemen's agreement was reached. When I had discussions with the party leaders I said an impartial enquiry will be held by the Government and I will announce what type of enquiry it will be on 31st of this month. According to that agreement I am going to announce in this House the mode of enquiry and all that. So far I have not said whether it will be a Magisterial enquiry or it will be a three Members Committee to be constituted by the Government. I never said anything about this. What I said was that I will announce on 31st of this month the type and mode of enquiry.

SRI J. H. PATEL.- Was the Leader of Opposition also a party to that ?

SRI R. GUNDU RAO.—Yes. I said I am going to announce the type of enquiry on 31st. That was the understanding we arrived at when I met the Leader of Opposition During that discussion Sri Sayank, Sri Arumugham and other Cabinet collegues were also present. In that meeting we have discussed this issue and we have decided this point. At this juncture I did not want to spell out all those things Because you have forced me I have to say all these things. As already stated when we arrived at an agreement I do not know why the leaders of other side and the hon. Members have been raising the same point again and again.

Then, regarding inviting the leaders of Farmers Association and giving compensation to the affected persons I said day before yesterday that Government has got open mind on this issue. I will repeat the same to-day also and I will say the samething tomorrow.

As regards inviting the leaders of Anti-price rise agitation I would like to say that, that point was not there. ಯಾರನ್ನು ಕರೆಸಬೇಕು ? ಬಳಕೆದಾರರಲ್ಲಿ ಯಾರನ್ನು ಕರೆಸಬೇಕು ? ಒಂದೊಂದು ಊರಿನಿಂದ ಒಬ್ಬೊಬ್ಬರನ್ನು

ಪರಿಸಬೇಕಾಗುತ್ತದೆ. So, I will definitely go into the details of all these things and I will also call the M.L.As. of the concerned constitutencies where the incidents have taken place and discuss with them the steps to be taken in this behalf. I will meet them after the session I do not want to make this as a prestige issue or a party issue. It is an issue concerning every body. As rightly pointed out by Sri Lakshmi Sagar and Sri Arumugham we have not come multi-millionaire's family. I have not come from multi-millionaire family. I have come from a poor family and I am a son of middle school teacher. I know what is poverty. I know the problems of poor people. Therefore, let me assure that I will stick to what I have said. Hence, there is no need to accord permission to move this adjournment motion and I request my friends not to press for this adjournment motion.

SRI K. BHASKAR NAIDU. — Mr. Arumugham had made very good case of price increase. I was thinking whether there will be any increase in the emoluments of MLAs.

ಶ್ರೀ ಎಂ. ಚಂದ್ರಶೇಖರ್ .— ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುತ್ತಾ, ವಿರೋಧ ಪಕ್ಷದವರಿಗೆ ಸಮಾಧಾನವಾಗುವ ರೀತಿಯಲ್ಲಿ ನ್ಯಾಯಾಂಗ ತನಿಖೆಯನ್ನು ಏರ್ಪಾಡು ಮಾಡುತ್ತೇವೆಂದು ಹೇಳಿದರು. ಆದುದರಿಂದ, ಅದನ್ನು ಯಾವ ರೀತಿ ಎಲ್ಲರಿಗೂ ಸಮಾಧಾನವಾಗುವ ರೀತಿಯಲ್ಲಿ ಮಾಡುತ್ತೀರೆಂಬುದನ್ನು ಈಗಲೇ ಹೇಳಬಹುದಲ್ಲ. ಈಗಲೇ ಹೇಳಿಬಿಟ್ಟರೆ ನಮಗೂ ಅನುಕೂಲ.

ಶ್ರೀ ಎಸ್. ಆರ್. ಬೊಮ್ಮಾಯಿ .— ಮಾನ್ಯ ಮುಖ್ಯ ಮಂತ್ರಿಗಳು ವಿರೋಧ ಪಕ್ಷದ ನಾಯಕರನ್ನು ಕರೆದು ಮಾತನಾಡಿದ್ದು ನಿಜ. ಆದರ ಜೊತೆಗೆ ಯಾವ ರೀತಿ ತನಿಖೆ ಮಾಡುತ್ತೇವೆಂಬುದನ್ನು ೩೧ನೇ ತಾರೀಖು ಹೇಳುತ್ತೇವೆಂದು ಕೂಡ ಹೇಳಿದ್ದಾರೆ ಆ ದಿವಸ ನಾನು ಎದ್ದು ಬರುವಾಗ ಪುನಃ ನಾನು ಈ ಬಗ್ಗೆ ಮಾತನಾಡಲು ಬರುವುದಿಲ್ಲವೆಂದು ಸಹ ಹೇಳಿ ಬಂದಿದ್ದೇನೆ. ಅಲ್ಲದೆ, ಇದರ ಬಗ್ಗೆ ಸಮಿತಿ ಮಾಡುವ ಬಗ್ಗೆ ನಾಳೆ ವಿಚಾರವನ್ನು ತಿಳಿಸಿ ತಿಳಿಸುತ್ತೇನೆಂದು ಹೇಳಿದ್ದಾರೆ. ತಾವು ಕೊಟ್ಟಿರುವ ಮಾತು ಒಂದು ರೀತಿಯಲ್ಲಿ ಒಪ್ಪಿಗೆಯಾಗಿದೆ, ಇಲ್ಲವೆಂದು ಹೇಳುವುದಿಲ್ಲ. ಆದರೆ ಆ ಮಾತು ಆದಮೇಲೆ ಅನೇಕ ಘಟನೆಗಳಿಂದ ಪರಿಸ್ಥಿತಿ ಬದಲಾಗಿದೆ. ಇದರಿಂದ ತಾವು ಏನು ಘೋಷಣೆ ಮಾಡಬೇಕೆಂಬುದು ಇದೆ ಅದನ್ನು ಇವತ್ತೇ ಮಾಡಿದರೆ ಅದರಿಂದ ಹೆಚ್ಚು ಶಾಂತಿ ಪರಿಪಾಲನೆಗೆ ಅನುಕೂಲವಾಗುತ್ತದೆಂಬ ಸಂಪೂರ್ಣ ನಂಬಿಕೆಯಿಂದ ತಮ್ಮನ್ನು ಈ ಮೂಲಕ ಒತ್ತಾಯ ಮಾಡುತ್ತಿದ್ದೇನೆ.

ಮಾನ್ಯ ಸದಸ್ಯರುಗಳು ಪರಿಸ್ಥಿತಿಯ ಗಂಭೀರತೆಯನ್ನು ಅರ್ಥ ಮಾಡಿಕೊಳ್ಳಬೇಕು. ನಮ್ಮ ಒಂದು ಸ್ಪಷ್ಟವಾದ ಅಭಿಪ್ರಾಯವನ್ನು ಮಾನ್ಯ ಮುಖ್ಯ ಮಂತ್ರಿಗಳಿಗೆ ಹೇಳುತ್ತಿದ್ದೇವೆ. ಮಾತು ಆದದ್ದು ನಿಜ, ಅನಂತರ ಅನೇಕ ಕಡೆಗಳಲ್ಲಿ ಅನೇಕ ಘಟನೆಗಳು ನಡೆದಿವೆ. ಆದುದರಿಂದ ೩೧ಕ್ಕೆ ಪ್ರಕಟ ಮಾಡುವುದನ್ನು ಇವತ್ತೇ ಮಾಡಿದರೆ ಅದರಿಂದ ಶಾಂತಿ ಉಂಟಾಗುವುದಕ್ಕೆ ಕಾನೂನು ವ್ಯವಸ್ಥೆಯನ್ನು ಸರಿಪಡಿಸುವುದಕ್ಕೆ ಜನತೆಗೆ ಮತ್ತು ಸರ್ಕಾರಕ್ಕೆ ಅನುಕೂಲವಾಗುತ್ತದೆಂದು ಹೇಳುತ್ತಿದ್ದೇನೆ. ಯಾರು ರೈತರ ನಾಯಕರು ಇದ್ದಾರೆ, ಯಾರು ಮುಗ್ದ ಜೀವಿಗಳು ಇದ್ದಾರೆ ಅವರನ್ನೆಲ್ಲ ಬಿಡುಗಡೆ ಮಾಡುವುದಾಗಿ ಹೇಳಿದ್ದರು. ಆದರೆ ಹೇಳಿ ೨-೩ ದಿವಸಗಳಾದರೂ ಇನ್ನೂ ಅವರನ್ನು ಬಿಡುಗಡೆ ಮಾಡಿಲ್ಲ. ಬಿಡುಗಡೆಯಾಗುವುದರ ಬದಲು ಇನ್ನೂ ಅನೇಕರು ಒಳಗಡೆ ಹೋಗುತ್ತಿದ್ದಾರೆ. ನರಗುಂದದಲ್ಲಿ ೨೭ ಜನರು ಮತ್ತು ನವಲಗುಂದದಲ್ಲಿ ೧೯ ಜನರು ಜೈಲಿಗೆ ಹೋಗಿದ್ದರೆ ಇವತ್ತು ಅವರೆಲ್ಲರ ಸಂಖ್ಯೆ ೩೦೦ಕ್ಕೆ ಏರಿದೆ. ತಾವು ಆಶ್ವಾಸನೆ ಕೊಟ್ಟ ದಿವಸ ನಮ್ಮ ಜವಾಬ್ದಾರಿಯನ್ನು ಅರಿತು ಒಪ್ಪಿಕೊಂಡಿದ್ದೇವೆ. ತಾವು ಚರ್ಚೆಗೆ ಕರೆದಾಗ ನಾವು ಏತಕ್ಕೆ ಬಂದೆವು ಎಂದರೆ ನಮ್ಮದೂ ಜವಾಬ್ದಾರಿ ಇದೆ ಎಂದು. ತಾವು ಅಂದು ಹೇಳಿದ ಮಾತನ್ನು

ನಂಬಿದೆವು. ಆದರೆ ಇದುವರೆಗೆ ಅಲ್ಲಿ ಒಬ್ಬರೂ ಬಿಡುಗಡೆಯಾಗದೆ ಇವತ್ತಿನ ದಿವಸ ೩೦೦ ಜನ ಜೈಲಿನಲ್ಲಿದ್ದಾರೆ. ಅವರುಗಳಿಗೆ ಯಾವ ರೀತಿ ಹೊಡೆಯುತ್ತಿದ್ದಾರೆ ಅವರ ಆರ್ತನಾದ ಏನು ಎಂಬುದನ್ನು ಅಲ್ಲಿಯ ಮುಖಂಡರು ತಿಳಿಸುತ್ತಿದ್ದಾರೆ. ಅದು ನಿಲ್ಲಬೇಕಾದರೆ ತಾವು ನ್ಯಾಯಾಂಗ ವಿಚಾರಣೆಯನ್ನು ಯಾವ ರೀತಿ ಮಾಡುತ್ತೀರೆಂಬುದನ್ನು ಇವತ್ತೇ ಪ್ರಕಟ ಮಾಡಬೇಕು. ಅದರಿಂದ ಸಾಕಷ್ಟು ಪರಿಣಾಮವಾಗುತ್ತದೆ. ಆ ರೈತ ಮುಂಖಡರನ್ನು ಬಿಡುಗಡೆ ಮಾಡದೆ ಇದ್ದರೆ ಶಾಂತಿ ವಾತಾವರಣ ಉಂಟಾಗುವುದಿಲ್ಲ. ಆ ಮುಂಖಂಡರನ್ನು ಮಾತುಕತೆಗೆ ಕರೆಸಬೇಕು, ಮತ್ತು ನಿಜವಾದ ಸಮಸ್ಯೆ ಏನಿದೆ ಎಂಬುದನ್ನು ತಿಳಿದುಕೊಂಡು ಅದರ ಬಗ್ಗೆ ದೀರ್ಘವಾಗಿ ಚರ್ಚೆ ನಡೆಸಿ ಅದಕ್ಕೆ ಸರ್ಕಾರದಿಂದ ಯಾವ ರೀತಿ ಪರಿಹಾರ ಕೊಡಬಹುದೆಂಬುದನ್ನು ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ತೀರ್ಮಾನ ಮಾಡಬೇಕಾಗುತ್ತದೆ. ಬೆಲೆ ಏರಿಕೆಯ ಸಮಸ್ಯೆಯೇ ಬೇರೆ, ರೈತರ ಸಮಸ್ಯೆಯೇ ಬೇರೆ. ಅದನ್ನು ಹಾಗೆ ಬಿಡುವುದಕ್ಕಾಗುವುದಿಲ್ಲ ಸಮಾಜ ಘಾತುಕ ವ್ಯಕ್ತಿಗಳು ಯಾರು ಲೂಟಿ ಮಾಡಿದ್ದಾರೆ ಅವರನ್ನು ಕೂಡ ಹಾಗೆ ಬಿಡುವುದಕ್ಕಾಗುವುದಿಲ್ಲ. ಅದಕ್ಕೆ ಬೇಕಾದರೆ, ಸದನದ ಸಲಹಾ ಸಮಿತಿಯ ಅಥವಾ ನಿಮ್ಮ ಅಧಿಕಾರಿಗಳ ಸಲಹೆಗಳನ್ನು ತೆಗೆದುಕೊಳ್ಳಿ, ಈ ಒಂದು ಕೆಲಸವನ್ನು ತೀವ್ರಗತಿಯಿಂದ ಮಾಡಬೇಕಾಗುತ್ತದೆ. ಒಟ್ಟಿನಲ್ಲಿ, ನ್ಯಾಯಾಂಗ ವಿಚಾರಣೆಯನ್ನು ಯಾವ ರೀತಿ ಮಾಡುತ್ತೀರೆಂಬುದನ್ನು ಇವತ್ತೇ ಪ್ರಕಟ ಮಾಡಿದರೆ ಬಹಳ ಅನುಕೂಲವಾಗುತ್ತದೆಂದು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಆರ್. ಗುಂಡೂರಾವ್ .— ನಾನು ಈಗಾಗಲೇ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆ. ಮುಗ್ಧ ಜೀವಿಗಳು ಯಾರಿದ್ದಾರೆ ಅವರನ್ನು ದೊಂಬಿಯಲ್ಲಿ ಅರೆಸ್ಟ್ ಮಾಡಿರಬಹುದು, ಯಾರ್ಯಾರು ಈ ವಿಚಾರದಲ್ಲಿ ಕೈಹಾಕಿಲ್ಲ ಅವರನ್ನು ಬಿಡುಗಡೆ ಮಾಡಬೇಕೆಂದು ಆದೇಶ ಕೊಟ್ಟಿದ್ದೇನೆ. ರೈತ ಮುಖಂಡರನ್ನು ಸಭೆಗೆ ಕರೆಯುವಾಗ ಅವರನ್ನು ಬಿಡುಗಡೆ ಮಾಡಲೇಬೇಕಾಗುತ್ತದೆ. ಎರಡನೆಯದಾಗಿ ಬೆಲೆ ಏರಿಕೆಯ ಬಗ್ಗೆ ಹೇಳುವುದಾದರೆ. I will agree with you. We will have a discussion on it. As suggested by the hon. member, if there is any lacuna in the Act or if there are any lapses on the part of the officers in implementing the provisions we will take your valuable suggestions on that and they will be viewed very seriously. We will also check price rise within our limits. This assurance I can give you.

About the probe why I am announcing it on 31st today you have discussed something about Gangavathi and tomorrow some other thing may come up. So it will be helpful to the Government, to the members of the opposition and to all of us to highlight any issues that may come up in the interval and I will announce the decision on the 31st. In the meanwhile if anything else turns up. we can solve it with mutual understanding. I am not sticking to prestige. I will defintely do it.

ಶ್ರೀ ಡಿ. ದೇವರಾಜ್ ಅರಸ್ .— ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದನ್ನೆಲ್ಲಾ ನಾನು ಸಾವಧಾನದಿಂದ ಕೇಳಿದ್ದೇನೆ. ಇಂದಿನ ಚರ್ಚೆ ನಮ್ಮ ಈ ಪಕ್ಷದಿಂದ ಕಳುಹಿಸಿದಂತಹ ಒಂದು ನಿರ್ಣಯದ ಮೇಲೆ ನಡೆದಿದೆ. ಅದೂ ಮುಖ್ಯವಾಗಿ ಗಂಗಾವತಿಯಲ್ಲಿ ನಡೆದಂತಹ ಪ್ರಕರಣದ ಬಗ್ಗೆ ನಡೆದಿದೆ. ಆ ಪ್ರಕರಣ ಹೆಚ್ಚಾಗಿ ಅಂದರೆ ಕೇವಲ ಬೆಲೆಗಳ ಏರಿಕೆ ಬಗ್ಗೆ ನಡೆದಿದೆ ಎಂಬುದು ವರದಿಯಾಗಿರುವುದು ನಿಜ. ಅದು ರೈತರಿಗೆ ಸಂಬಂಧಪಟ್ಟ ಸಮಸ್ಯೆ ಅಲ್ಲವೆಂದು ಬಹಳ ಜನರು ವಾದ ಮಾಡಿದ ಹಾಗೆ ಆಯಿತು,

೫-೦೦ ಪಿ. ಎಂ.

ಇದು ರೈತರಿಗೆ ಸಂಬಂದಪಟ್ಟಿದ್ದಲ್ಲ ಎಂದು ಏನು ಹೇಳುತ್ತಾರೆ, ಅದು ಸರಿಯಲ್ಲ. ಅವರಿಗೆ ಎಲ್ಲೆಲ್ಲಿ ಏನಾಗಿದೆ, ಎಲ್ಲೆಲ್ಲಿ ಯಾರು ಯಾರು ಸತ್ತಿದ್ದಾರೆ ಎಂಬ ಪರಿಸ್ಥಿತಿಯ ಪೂರ್ಣ ಚಿತ್ರ ಅರ್ಥವಾಗಿಲ್ಲ ಎಂದು

ಬಹಳ ವಿಷಾದದಿಂದ ನಾನು ಹೇಳಬೇಕಾಗಿದೆ. ಬೆಲೆ ಏರಿಕೆ ಎಂದರೆ ಕೇವಲ ಬೆಂಗಳೂರು ಅಥವಾ ಬೇರೆ ಪಟ್ಟಣಗಳಲ್ಲಿ ಜನರು ಕೊಳ್ಳತಕ್ಕ ಬೆಲೆಗಳು ಏರಿವೆ ಎಂದು ಮಾತ್ರ ಅರ್ಥವಲ್ಲ. ಬೆಲೆ ಏರಿಕೆ ಎಂದರೆ ನಗರದಲ್ಲಿ ಜನರು ಕೊಳ್ಳತಕ್ಕ ಪದಾರ್ಥಗಳ ಬೆಲೆ ಮಾತ್ರ ಜಾಸ್ತಿಯಾಗಿದೆ ಎಂದು ಅರ್ಥ ಮಾಡಿಕೊಳ್ಳುವುದಾದರೆ ನಿಮಗೆ ಪೂರ್ಣ ಚಿತ್ರ ದೊರಕುವುದಿಲ್ಲ. ರೈತರು ಕೊಳ್ಳತಕ್ಕ ಪದಾರ್ಥಗಳ ಬೆಲೆಗಳೂ ಏರಿವೆ. ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳೂ ಏರಿವೆ. ಅದನ್ನು ಬೇಕಾದರೆ ಬಿಟ್ಟು ಬಿಡೋಣ. ಏಕೆಂದರೆ ನಮ್ಮ ದೇಶದಲ್ಲಿ ೩೦ ಲಕ್ಷ ಅಥವಾ ೪೦ ಲಕ್ಷ ರೈತ ಸಂಸಾರಗಳಿದ್ದರೆ ಅವರಲ್ಲಿ ೪೦ ಸಾವಿರ ಜನರು ಮಾತ್ರ ಕಾರುಗಳನ್ನು ಇಟ್ಟುಕೊಂಡಿರಬಹುದು. ಅವರಲ್ಲೂ ಮುಖ್ಯವಾಗಿ ಪ್ಲಾಂಟರ್ಸ್ ಮುಂತಾದವರು. ಕೆಲವರು ಡೀಸೆಲ್ ಪಂಪ್ ಹಾಕಿಕೊಂಡಿರುತ್ತಾರೆ. ಅವರಿಗೆ ತೊಂದರೆಯಾಗಿದೆ. ಹಾಸ್ಯಾಸ್ಪದ ಏನಿದೆಯೆಂದರೆ ಅದು ಬೇರೆ ದೇಶಗಳಿಂದ ಬರಬೇಕಾಗಿದೆ, ಸಾಕಷ್ಟು ಉತ್ಪಾದನೆ ಇಲ್ಲ. ಆದರಿಂದ ಅದರ ಬೆಲೆ ಏರಿದೆ. ಅದನ್ನು ಇಳಿಸುವುದು ನಮ್ಮ ರಾಜ್ಯದ ಕೈಯಲ್ಲಿಲ್ಲ. ಆದ್ದರಿಂದ ಅದನ್ನು ಪ್ರಸ್ತಾಪ ಮಾಡಬೇಕಾದ ಅಗತ್ಯವಿಲ್ಲ. ಈ ವಿಷಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದನ್ನು ಒಪ್ಪಿಕೊಳ್ಳೋಣ. ಆದರೆ ಕಬ್ಬಿಣದ ಬೆಲೆ ಜಾಸ್ತಿಯಾಗಿದೆ. ಒಂದು ಗುಳ ತರಬೇಕಾದರೆ ೬–೭ ರೂಪಾಯಿ ಕೊಡಬೇಕಾಗುತ್ತದೆ. ಸಾಧಾರಣ ನೇಗಿಲಿಗೆ ಗುಳ ಹಾಕಬೇಕಾದರೂ ೬–೭ ರೂಪಾಯಿ ಕೊಡಬೇಕಾಗುತ್ತದೆ. ಅದೇ ರೀತಿ ಬಟ್ಟೆ, ಎಣ್ಣೆ, ಬೆಲ್ಲ, ಸಕ್ಕರೆ, ಮಾರವುಟ್ಟುಗಳು, ಇವೆಲ್ಲಾ ರೈತನಿಗೆ ಬೇಕಾದ ಪದಾರ್ಥಗಳಲ್ಲವೆ? ಗೊಬ್ಬರದ ಬೆಲೆ ಬಗ್ಗೆ ನಾನು ಉದ್ದೇಶಪೂರ್ವಕವಾಗಿಯೇ ಮಾತನಾಡುತ್ತಿಲ್ಲ ಏಕೆಂದರೆ ಏನಾದರೂ ನಮ್ಮ ಸರ್ಕಾರದವರು ಕಡಿಮೆ ಮಾಡುವುದಕ್ಕೆ ಅವಕಾಶವಿದ್ದರೆ ಮಾತನಾಡ ಬಹುದಿತ್ತು. ಆದರೆ ಇದು ಇವರ ಕೈಯಲ್ಲಿಲ್ಲ. ಆದ್ದರಿಂದ ಈ ವಿಷಯ ನನಗೆ ಗೊತ್ತಿರುವಾಗ ಅದನ್ನು ನಾನು ಏತಕ್ಕೆ ಮಾತನಾಡಲಿ? ಅದು ಕೇಂದ್ರಸರ್ಕಾರದ ಸುಪ್ಪರ್ದಿನಲ್ಲಿ ತೀರ್ಮಾನವಾಗತಕ್ಕದ್ದು ಆದ್ದರಿಂದ ಅಲ್ಲಿ ಇದನ್ನು ನಾವು ಹೇಳಬೇಕಾಗುತ್ತದೆ. ಆದರೂ ಅದನ್ನು ಹೇಗೆ ಕಡಿಮೆ ಮಾಡಬಹುದು ಬಿಡಬಹುದು ಎಂಬ ಬಗ್ಗೆ ವ್ಯಾಖ್ಯಾನ ಮಾಡುವುದಕ್ಕೆ ಸಾಧ್ಯವಿದೆ ಆದರೆ ಅದು ಈಗ ಬೇಕಾಗಿಲ್ಲ. ಒಟ್ಟಿನಲ್ಲಿ ಬೆಲೆ ಏರಿಕೆ ಎಂದರೆ ಕೇವಲ ಪಟ್ಟಣಗಳಿಗೆ ಮಾತ್ರ ಇದು ಸೀಮಿತವಾಗಿಲ್ಲ, ಗ್ರಾಮಾಂತರ ಪ್ರದೇಶದಲ್ಲಿರತಕ್ಕ ರೈತನಿಗೂ ಇದರ ಬಿಸಿ ತಟ್ಟಿದೆ ಎಂಬುದನ್ನು ಮಾನ್ಯ ಸಭೆಯ ಸದಸ್ಯರು ಮನದಟ್ಟು ತಿಳಿದುಕೊಳ್ಳಬೇಕು. ಆದ್ದರಿಂದ ಬೆಲೆ ಏರಿಕೆ ಎಂದರೆ ಅದು ಕೇವಲ ಪಟ್ಟಣದವರಿಗೆ ಮಾತ್ರ ಸಂಬಂಧಪಟ್ಟಿದ್ದು, ಹಳ್ಳಿಯವರಿಗೆ ಸಂಬಂಧಪಟ್ಟಿದ್ದಲ್ಲ, ಏನೋ ಪಟ್ಟಣದಲ್ಲಿರುವ ಕೆಲವರು ಗ್ರಾಹಕರು ಮಾತ್ರ ಮೆರವಣಿಗೆ ಮಾಡಿದರು. ಆಗ ಗೂಂಡಾಗಳು ಬಂದರು. ಆದ್ದರಿಂದ ಹೀಗಾಯಿತು ಎಂದು ಹೇಳುವುದು ಸರಿಯಲ್ಲ. ಮೂಲತಃ ರೈತರಿಗೆ ಅಫೆಕ್ಟ್ ಆಗಿಲ್ಲ ಎಂದು ತಿಳಿದುಕೊಂಡಿದ್ದರೆ ಅದು ಸರಿಯಾದುದಲ್ಲ ಎಂದು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ನನ್ನ ಮಾತು ಸರಿಯೋ ತಪ್ಪೋ ಎಂಬುದನ್ನು ತಾವೇ ಹೇಳಿ. ತಾವೇ ವಿಚಾರ ಮಾಡಿಕೊಳ್ಳಿ. ರೈತರಿಗೂ ಬೆಲೆ ಏರಿಕೆಯಿಂದ ಪೆಟ್ಟುಬಿದ್ದಿದೆ ಮತ್ತು ಅವರು ಮಾರಾಟ ಮಾಡುವ ಪದಾರ್ಥಗಳ ಬೆಲೆ ಕಡಿಮೆಯಾಗುತ್ತಿದೆ. ಒಂದು ಚೀಲ ರಾಗಿ ಮಾರಿದರೆ ಒಂದು ಮೂಟೆ ಗೊಬ್ಬರ ಸಿಗುವುದಿಲ್ಲ. ತಾವು (ಮಾನ್ಯ ಅಧ್ಯಕ್ಷರು) ರೈತರಿರ ಬಹುದು ನಿಮ್ಮ ಮನೆಯಿಂದ ನಿಮ್ಮ ಅಗ್ರಿಕಲ್ಚರಲ್ ಕಛೇರಿಯಿಂದ ಬರೆದು ತರಿಸಿ. ಬೆಲೆಗಳು ಯಾವ ರೀತಿ ಇವೆ ಎಂಬುದನ್ನು ನೋಡಿ.

ಅಧ್ಯಕ್ಷರು.— ೧೨೫ ರೂಪಾಯಿ ಗೊಬ್ಬರಕ್ಕೆ, ೧೨೭ ರೂಪಾಯಿ ರಾಗಿಗೆ

ಶ್ರೀ ಡಿ. ದೇವರಾಜ್ ಅರಸ್.— ೧೨೫ ರೂಪಾಯಿ ಎಲ್ಲಿ ಇದೆ. ನಮ್ಮ ಊರಿನಲ್ಲಿ ಯಾರೂ ಬಂದು ತೆಗೆದುಕೊಳ್ಳುವುದಿಲ್ಲ. ೧೦೦ ರೂಪಾಯಿ ಅಷ್ಟೆ. ಅದು ಪಟ್ಟಣಕ್ಕೆ ಬಂದಮೇಲೆ ೧೨೫ ರೂಪಾಯಿ ೧೪೦ ರೂಪಾಯಿ ಆಗುತ್ತದೆ. ಇಡೀ ಆರ್ಥಿಕ ರಚನೆಯೇ ಆ ರೀತಿ ಬಂದಿದೆ. ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದು ಕಟು ಸತ್ಯ. ೩೦ ವರ್ಷಗಳಿಂದಲೂ ಇದು ಬಂದಿದೆ. ಹಿಂದಿನ ಸರ್ಕಾರ ಇದ್ದಾಗಲೂ ಹೀಗೆ ಇತ್ತು. ಅದಕ್ಕೆ ನಾವೇನು ಮಾಡೋಣ? ೩೦ ವರ್ಷದಿಂದ ಯಾರುಯಾರು ಆಳುತ್ತಿದ್ದರು, ಏನೇನಾಗಿದೆ, ಎಲ್ಲ ವಿಷಯಕ್ಕೂ ಈಗ ಹೋಗುವುದಕ್ಕಾಗುತ್ತದೆಯೇ? ಅದಕ್ಕೆ ಹೋಗುವುದಾದರೆ ಅವರ ಮನಸ್ಸಿಗೂ ಸ್ವಲ್ಪ ನೋವಾಗುತ್ತದೆ.

ಶ್ರೀ ಆರ್. ಗುಂಡೂರಾವ್.— ಇಲ್ಲವೇ ಇಲ್ಲ.

ಶ್ರೀ ಡಿ. ದೇವರಾಜ್ ಅರಸ್.— ಇಲ್ಲವೇ ಇಲ್ಲ ಎಂದು ಹೇಳಬೇಡಿ.

ಶ್ರೀ ಆರ್. ಗುಂಡೂರಾವ್ .— ನೀವು ಹೇಳುವುದನ್ನೆಲ್ಲಾ ಹೇಳಿ. ನಾನು ಪುನಃ ಮಾತನಾಡುತ್ತೇನೆ ತಾವು ತಡವಾಗಿ ಬಂದಿರಿ. ನಿಮಗೆ ಏನೂ ಗೊತ್ತಿಲ್ಲ. ಮತ್ತೆ ಎಲ್ಲಾ ವಿಚಾರವನ್ನು ಪ್ರಸ್ತಾಪ ಮಾಡಬೇಕು ಎಂದರೆ ಮಾಡುತ್ತೇನೆ, ನನಗೇನೂ ತೊಂದರೆಯಿಲ್ಲ. ನೀವು ಹೊಸದಾಗಿ ಹೇಳಿ, ನಾನು ಅದಕ್ಕೆ ಉತ್ತರ ಕೊಡುತ್ತೇನೆ. ನನಗೇನೂ ತೊಂದರೆಯಿಲ್ಲ.

ಶ್ರೀ ಡಿ. ದೇವರಾಜ ಅರಸ್ .— ನೀವು ಹೇಳಿದಕ್ಕೆ ನಾನು ಹೇಳಿದೆ.

SRI R. GUNDU RAO .— When I sp ke, you were not here.

SRI D. DEVARAJ URS .— I was here, that is why I am talking.

SRI R. GUNDU RAO .— You spoke and went away, you were not here.

SRI D. DEVARAJ URS . – According to the Business Advisory Committee it was proposed to sit only upto the afternoon.

Now, you took a decision to sit even in the evening. Because I had other work I could not attend. That is all the point. Not that I simply speak and walk away. ೩೦ ವರ್ಷದಿಂದ ಎಲ್ಲಾ ನಡೆದುಕೊಂಡು ಬಂದಿದೆ, ನಿಜ ಆದರೆ ಹೋದ ಚುನಾವಣೆ ನಡೆದು ೩೦ ವರ್ಷ ಆಗಿಲ್ಲ. ೧೯೮೦ನೇ ಇಸವಿ ಹೊತ್ತಿನಲ್ಲಿ ಅಂದರೆ ೧೯೭೯ನೇ ಡಿಸೆಂಬರ್‌ನಲ್ಲಿ ಆಯಿತು. ಚುನಾವಣಾ ಪ್ರಚಾರ ನಡೆದಾಗ ದೇಶದ ಮುಂದೆ ಇದ್ದಂಥ ಚಿತ್ರ ಯಾವುದು ? ಶ್ರೀಮತಿ ಇಂದಿರಾಗಾಂಧಿಯವರು ಅಧ್ಯಕ್ಷರಾಗಿರತಕ್ಕ ನಿಮ್ಮ ಪಕ್ಷದಿಂದಲೇ ತಾವೂ ಸೇರಿ ದೇಶದ ಮುಂದೆ ಇಟ್ಟಂಥ ಚಿತ್ರ ಯಾವುದು ? ಬೆಲೆಗಳು ಜಾಸ್ತಿಯಾಗಿವೆ. ಈರುಳ್ಳಿ ಬೆಲೆ ಜಾಸ್ತಿಯಾಗಿ ಹೋಯಿತು, ಸಕ್ಕರೆ ಬೆಲೆ ಜಾಸ್ತಿಯಾಯಿತು, ಎಣ್ಣೆ ಬೆಲೆ ಜಾಸ್ತಿಯಾಯಿತು, ಅಮೇಲೆ ಕಾನೂನು ಮತ್ತು ಶಿಸ್ತುಪಾಲನೆ ಕೆಟ್ಟುಹೋಗಿತ್ತು. ಈ ರೀತಿ ಅನೇಕ ವಿಷಯಗಳನ್ನು ಹೇಳಿ ಜನತೆಯ ಮುಂದೆ ಇಟ್ಟಿರಿ. ಸರಿಯಾದ ಭದ್ರವಾದ ಸರ್ಕಾರ ಇಲ್ಲ ಎಂದೂ ಹೇಳಿದ್ದಿರಿ ಭದ್ರವಾದ ಸರ್ಕಾರ ಏತಕ್ಕಿಲ್ಲ ? ಜನತಾ ಪಕ್ಷದವರು ಜಗಳ ಆಡಿಕೊಂಡರು ಛಿದ್ರ ಛಿದ್ರ ಆದರು. ಅವರಿಗೆ ಸುಭದ್ರವಾದ ಸರ್ಕಾರ ಕೊಡುವುದಕ್ಕಾಗಲಿಲ್ಲ.

ಅಧ್ಯಕ್ಷರು.—ರೂಲ್ ೩೧೫ರ ಪ್ರಕಾರ ಈ ನಿಲುವಳಿ ಸೂಚನೆಯನ್ನು ಕೊಟ್ಟಿದ್ದಾರೆ. ನಿಲುವಳಿ ಸೂಚನೆಗೆ ಅವಕಾಶ ಕೊಡದಿದ್ದರೂ ಇಂಡೈರಕ್ಟಾಗಿ ಎಲ್ಲಾ ಚರ್ಚೆಯಾಗುತ್ತಿದೆ. ಅನೇಕ ಜನ ಸದಸ್ಯರು ಮಾತನಾಡಿದ್ದಾರೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಆದ್ದರಿಂದ ಬೇರೆ ಬೇರೆ ವಿಚಾರಕ್ಕೆ ಈಗ ಹೋದರೆ......

ಶ್ರೀ ಡಿ. ದೇವರಾಜ ಅರಸ್.— ಆ ಕಡೆ ಬೇಕಾದರೂ ಮಾತನಾಡಲಿ. ಈ ಕಡೆಯಿಂದ ಬೇರ ಯಾರೂ ಇಲ್ಲ.

SRI R. GUNDU RAO.—I have no objection for discussion. The discussion went on from 12 Noon to 6-00 P. M. I took about one hour to reply. Members belonging to your side spoke about 4 hours and not even a single Member spoke from our side. If you want to sit for another two hours, I have no objection. ಚುನಾವಣೆಗೆ ಮೊದಲು ಬೆಲೆ ಏನಿತ್ತು ಚುನಾವಣೆ ಸಮಯದಲ್ಲಿ ಏನು ಸಮಸ್ಯೆಗಳಿತ್ತು ಆ ಅಭಿಪ್ರಾಯಗಳನ್ನೆಲ್ಲಾ ನೀವು ಹೇಳುತ್ತಿದ್ದೀರಿ. ಈಗ ಸಭೆಯ ಮುಂದಿರುವುದು ಆ ವಿಷಯವಲ್ಲ. ಆ ವಿಷಯಬಂದಾಗ ಮಾತನಾಡೋಣ.

ಶ್ರೀ ಡಿ. ದೇವರಾಜ ಅರಸ್.—ಬೆಲೆ ಏರಿಕೆ ಮೊದಲಿನಿಂದಲೂ ಇತ್ತು ಎಂದು ಹೇಳಿದ್ದಕ್ಕೆ ನಾನು ಹೇಳಿದೆ. ಬೆಲೆ ಏರಿಕೆಯನ್ನು ತಡೆಗಟ್ಟುತ್ತೇವೆ ಎಂದು ಚುನಾವಣೆ ಸಮಯದಲ್ಲಿ ಆಶ್ವಾಸನೆ ಕೊಟ್ಟಿದ್ದೀರಿ ಆದರೆ ಈಗ ಪದಾರ್ಥಗಳ ಬೆಲೆ ಕಡಿಮೆಯಾಗಿದೆಯೋ ಎಂದು ಕೇಳಿದೆ. ಸಕ್ಕರೆ ಮೊದಲು ಏಪನು

ಮಾರ್ಕೆಟ್ಟಿನಲ್ಲಿ ಸಿಗುತ್ತಿತ್ತು. ಈಗ ೯ ರೂಪಾಯಿ ಆಗಿದೆಯಲ್ಲ ? ಎರಡನೆಯದಾಗಿ ಬಟ್ಟೆ ಬೆಲೆ ಕಡಿಮೆಯಾಗಿದೆಯೇ ? ಅಡಿಗೆಗೆ ಉಪಯೋಗಿಸುವ ಅಡಿಗೆ ಎಣ್ಣೆ ಬೆಲೆ ಕಡಿಮೆಯಾಗಿದೆಯೇ ? ೧೩-೧೪ ರೂಪಾಯಿ ಆಗಿದೆಯಲ್ಲ ಹಿಂದೆ ೭-೮ ರೂಪಾಯಿಗೆಲ್ಲಾ ಸಿಗುತ್ತಿತ್ತು. ಒಂದು ತಿಂಗಳಿನಿಂದ ೧.೬ ಪರ್ಸೆಂಟಿನಷ್ಟು ಬೆಲೆ ಏರಿಕೆಯಾಗಿದೆ. ಹೋದ ವರ್ಷ ಜೂನ್ ತಿಂಗಳಿಗೂ ಈ ವರ್ಷಕ್ಕೂ ಲೆಕ್ಕ ಹಾಕಿದರೆ ಮಾನ್ಯ ಅಮೀನ್‌ರವರು ಅವರು ಹೇಳಿದಂತೆ ೧೬ ಪರ್ಸೆಂಟ್ ಆವಶ್ಯಕ ವಸ್ತುಗಳ ಬೆಲೆ ಜಾಸ್ತಿಯಾಗಿದೆ. ಎನ್ನುವುದು ಒಂದು ಕಡೆ. ಇದು ಇಡೀ ದೇಶದಲ್ಲೆಲ್ಲ ಇದೆ ಇದನ್ನು ಹಿಡಿತದಲ್ಲಿಡುವುದು ನಮ್ಮ ಕೈಯಲ್ಲಿಲ್ಲವೆಂದು ಹೇಳುವುದನ್ನು ಒಪ್ಪಿಕೊಂಡರೆ, ನಾನು ಒಂದು ಮಾತನ್ನು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರಬೇಕಾಗಿದೆ. ಅದೇನೆಂದರೆ, ಸ್ಥಾನಬದ್ಧತಾ ಕಾಯಿದೆ ನಮ್ಮಲ್ಲಿದೆ ಶ್ರೀ ಚರಣ್ ಸಿಂಗ್ ಅವರು ಪ್ರಧಾನ ಮಂತ್ರಿಯಾಗಿದ್ದಾಗ ಈ ಕಾನೂನಿನ ಬಗ್ಗೆ ಸುಗ್ರೀವಾಜ್ಞೆ ಹೊರಡಿಸಿದರು. ಈಗಿನ ಪ್ರಧಾನ ಮಂತ್ರಿಗಳು ಬಂದಮೇಲೆ ಲೋಕಸಭೆಯಲ್ಲಿ ಚರ್ಚೆ ನಡೆದು, ಬೆಲೆ ಏರಿಕೆಯನ್ನು ಹತೋಟಿಯಲ್ಲಿಡುವ ದೃಷ್ಟಿಯಿಂದ ಸ್ಥಾನಬದ್ಧತಾ ಕಾನೂನನ್ನು ಜಾರಿಗೆ ತಂದರು. ಇದನ್ನು ರಾಜ್ಯ ಸರ್ಕಾರದವರೂ ಚಲಾವಣೆ ಮಾಡುವುದಕ್ಕೆ ಸಾಧ್ಯವಿದೆ. ಏನು ಮಾಡೋಣ ಪೋಲಿಸರು ಹಿಡಿದುಕೊಂಡು ಹೋದರೂ ನ್ಯಾಯಾಲಯದಲ್ಲಿ ಬಿಟ್ಟುಬಿಡುತ್ತಾರೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ಅದು ಸರಿಯಲ್ಲ. ಅವರು ಮತ್ತೊಮ್ಮೆ ಕೇಳಿ ತಿಳಿದುಕೊಳ್ಳಬಹುದು. Preventive Detention Act is particularly meant to control the prices and to book the economic offenders, blackmarketeers as well as the smugglers. ಅದಕ್ಕೋಸ್ಕರ ಮಾಡಿರತಕ್ಕ ಕಾನೂನಿದು. ನಮ್ಮ ಸರ್ಕಾರ ಈ ರಾಜ್ಯದಲ್ಲೂ ಕೂಡ ಈ ಕಾನೂನನ್ನು ಚಲಾವಣೆಗೆ ಕೊಡುವ ಹಕ್ಕನ್ನು ಪಡೆದಿದೆ ಎಂದು ನಾನು ತಿಳಿದಿದ್ದೇನೆ. ಇದನ್ನು ಮಾನ್ಯ ಮುಖ್ಯ ಮಂತ್ರಿಗಳು ಒಪ್ಪುತ್ತಾರೆಂದು ಕಾಣುತ್ತದೆ. ಅವತ್ತು ನಮ್ಮ ಮಾನ್ಯ ಆಹಾರ ಮಂತ್ರಿಗಳು ಮಾತನಾಡುವಾಗ ಒಂದು ಪಟ್ಟಿ ಓದಿದರು. ಆ ಪಟ್ಟಿಯನ್ನು ನನಗೆ ಸ್ವಲ್ಪ ಕೊಡಿ ಆ ಊರಿನಲ್ಲಿ ಇಷ್ಟು ಈ ಊರಿನಲ್ಲಿ ಇಷ್ಟು ಎಂದು ಓದಿದರು. ಅವರು ಯಾರು ಎನ್ನುವುದನ್ನು ನೋಡೋಣ. ಸಣ್ಣ ಪಟ್ಟಿ ಚಿಲ್ಲರೆ ವ್ಯಾಪಾರ ಮಾಡುವವರನ್ನು ಹಿಡಿದುಕೊಂಡು ಬಂದು ಮೊಕದ್ದಮೆ ಹಾಕುವ ಪದ್ಧತಿ ಇದೆ. ತಮಗೂ ಅದು ಗೊತ್ತಿದೆ. ಸಗಟು ವ್ಯಾಪಾರಿಗಳನ್ನು ಹಿಡಿಯುವುದಕ್ಕೆ ನಮ್ಮ ಸರ್ಕಾರಕ್ಕೆ ಸಾಧ್ಯವಿದೆ. ಎಲ್ಲ ಪದಾರ್ಥಗಳ ಬೆಲೆ ಏರಿಕೆಯಲ್ಲೂ, ಸಗಟು, ಚಿಲ್ಲರೆ ವ್ಯಾಪಾರಿಗಳ ಮತ್ತು ದಳ್ಳಾಳಿಗಳ ಕೈವಾಡ ಇರುತ್ತದೆ. ಈ ಕಾನೂನನ್ನು ಬಳಸಿ ಅಂತಹವರನ್ನಾರಾದರೂ ಹಿಡಿದಿದ್ದೀರಾ ? ಈ ಕಾನೂನು ಪ್ರಕಾರ ನ್ಯಾಯಾಲಯದ ಮೊರೆಗೆ ಆರು ತಿಂಗಳವರೆಗೆ ಜೈಲಿಗೆ ಹಾಕಿದರೆ ಬಿಡುವ ಹಾಗಿಲ್ಲ. ಹೀಗಿರುವಾಗ ನ್ಯಾಯಾಲಯದವರು ಬಿಟ್ಟುಬಿಡುತ್ತಾರೆಂದು ಹೇಗೆ ಹೇಳುತ್ತೀರಿ ? ಈ ಕಾನೂನು ಇಲ್ಲದೆ ಹೋಗಿದ್ದರೆ ತಾವು ಹೇಳುವ ಮಾತು ಸರಿಯಾಗುತ್ತಿತ್ತು, ಯಾವ ಮೊಕದ್ದಮೆ ಹಾಕಿದರೂ ಜಾಮೀನು ಮತ್ತೊಂದರ ಮೇಲೆ ಬಿಡಿಸಿಕೊಂಡು ಬರುತ್ತಿದ್ದರು. ಅದನ್ನು ತಪ್ಪಿಸಲೆಂದೇ ಸ್ಥಾನಬದ್ಧತಾ ಕಾಯಿದೆಯನ್ನು ತಂದಿರುವುದು. ಆದರೆ, ಈಗ ಜಾರಿಗೆ ತರುವುದಿಲ್ಲವೆಂದರೆ, ಕಾನೂನನ್ನು ಏತಕ್ಕೆ ಮಾಡಬೇಕಾಗಿತ್ತು ? ಈ ಕಾಯಿದೆಯನ್ನು ಉಪಯೋಗ ಮಾಡದೆ ಹೇಗೆ ಬೆಲೆ ಏರಿಕೆಯನ್ನು ತಡೆಗಟ್ಟುತ್ತೀರಿ ? ಇದಕ್ಕಿಂತ ಇನ್ನೆಂಥಾ ಕಾನೂನು ಮಾಡಬೇಕು ನಿಮಗೆ ? There is an Act and according to which these offenders *i.e.* economic offenders, if not political offenders, have to be booked. ಈ ಪ್ರಕಾರ ಎಷ್ಟು ಜನ ಆರ್ಥಿಕ ಅಪರಾಧಿಗಳನ್ನು ನಮ್ಮ ರಾಜ್ಯದಲ್ಲಿ ಹಿಡಿದಿದ್ದೀರಿ ? ಹೆಸರನ್ನು ಈಗ ಹೇಳಿದರೆ ಪ್ರಯೋಜನವಿಲ್ಲ-ಒಂದು ಜಿಲ್ಲೆಯಲ್ಲಿ (ಬೇರೆ ರಾಜ್ಯದಲ್ಲಿ) ಒಬ್ಬ ಜಿಲ್ಲಾಧಿಕಾರಿ, ಎಂಟು ಜನ ಸಗಟು ವ್ಯಾಪಾರಿಗಳು ಸಕ್ಕರೆ ಮೂಟೆಗಳನ್ನು ದಾಸ್ತಾನು ಮಾಡಿದ್ದನ್ನು ಪತ್ತೆ ಹಚ್ಚಿ, ಅಷ್ಟು ಜನರಿಗೂ ನೋಟಿಸನ್ನು ಕಳುಹಿಸಲಿದ್ದಾಗ, ಆ ನೋಟೀಸ್‌ಗಳು ಬರುತ್ತವೆಂದು ಮೊದಲೇ ಅವರು ಪತ್ತೆಹಚ್ಚಿಬಿಟ್ಟಿದ್ದರು ? ಅದೆಲ್ಲಾ ಅವರಿಗೆ ಗೊತ್ತಿದೆ. ಸೆಕ್ರೆಟರಿಯೇಟ್‌ನಲ್ಲಿ ಏನೇನಾಗುತ್ತದೆಂದು ತಿಳಿಯಲು ಹಣವಂತ ಮತ್ತು ಬುದ್ಧಿವಂತ ಜನರಾದ ಅವರು ಏಜನ್ಸಿಗಳನ್ನಿಟ್ಟಿರುತ್ತಾರೆ ಮತ್ತು ಅದರ ಮೂಲಕ ಪತ್ತೆಹಚ್ಚಿಬಿಡುತ್ತಾರೆ. ಇಂತಹುದೇ ಆಜ್ಞೆ ಬರುತ್ತದೆಂದು ಅವರಿಗೆ ಮೊದಲೇ ಗೊತ್ತಾಗಿಬಿಡುತ್ತದೆ. ಆಜ್ಞೆ ಕಳುಹಿಸಿದ ತಕ್ಷಣ ಅವರು ದೆಹಲಿಗೆ ಹೋಗಿ ಯಾರು ಯಾರಿಗೆ ಏನೇನು ಕೊಡಬೇಕೋ ಅದನ್ನೆಲ್ಲ ಕೊಟ್ಟು ಜಿಲ್ಲಾಧಿಕಾರಿ ಆಜ್ಞೆ ಹೊರಡಿಸಿದ್ದನ್ನು ರದ್ದು ಮಾಡಿಸಿ ಮನೆಗೆ ಬಂದರೆ, ಸಕ್ಕರೆ ಬೆಲೆ ಕಡಿಮೆಯಾಗುತ್ತದೆಯೆ ? ಅವರನ್ನು ಹಿಡಿಯುತಕ್ಕ ಕಾನೂನು ನಿಮ್ಮ ಕೈಯಲ್ಲಿರುವಾಗ, ಅದನ್ನು ಉಪಯೋಗ ಮಾಡಿ ಬೆಲೆ ಏರಿಕೆಯನ್ನು ಹತೋಟಿಗೆ ತರುವುದಕ್ಕೆ

ಸಾಧ್ಯವಿದೆ. ಇಲ್ಲದಿದ್ದರೆ, ಕಾನೂನನ್ನು ಏತಕ್ಕೆ ಮಾಡಿದಿರಿ ? ಈ ಕಾನೂನನ್ನು ಮಾಡುವಾಗ ವಿರೋಧ ಕೂಡ ಬಂದಿತು. ಯಾರು ಸರ್ಕಾರ ನಡೆಸಿದರೂ ಇಂತಹ ಕಾನೂನು ಬೇಕು. ಇಂತಹ ಜನರನ್ನು ಶಿಕ್ಷಿಸಲು ಇದು ಬೇಕೇ ಬೇಕು. ಇಂತಹ ಕಾನೂನು ಇದ್ದರೂ ಕೂಡ ಅದನ್ನು ಬಳಸಲು ಸಾಧ್ಯವಿಲ್ಲ ವೆಂದರೆ ಹೇಗೆ ತಾವು ಹೇಳಿದ್ದಕ್ಕೆ ನಾನಿದನ್ನೆಲ್ಲ ಹೇಳಬೇಕಾಯಿತು, ಇಂತಹದೆಲ್ಲ ಹಿಂದೆ ನಡೆದಿಲ್ಲವೆಂದು ಯಾರು ಹೇಳುತ್ತಿದ್ದಾರೆ ? ನಡೆಯಬೇಕಾದ ಸಂದರ್ಭ ಇತ್ತು. ಮತ್ತೆ, ಮತ್ತೆ ಅದನ್ನೇ ನೀವೇತಕ್ಕೆ ಉಚ್ಚಾರಣೆ ಮಾಡಬೇಕು ? "ಇಂಡಿಯನ್ ಎಕ್ಸ್‌ಪ್ರೆಸ್" ಪತ್ರಿಕೆಯಲ್ಲಿ ವಿವರವಾಗಿ ಬಂದಿರುವುದನ್ನು ನಾನು ಓದಿದೆ. ನಾನು ಮುಖ್ಯಮಂತ್ರಿಯಾಗಿ ಮಾಡಿದ ರೀತಿಯಲ್ಲೇ ಮಾಡಿದ್ದಾರೆಂದು ಹೇಳಿದ್ದಾರೆ. ಹೌದೋ ? ಇಲ್ಲವೋ ?

ಶ್ರೀ ಆರ್. ಗುಂಡೂರಾವ್.—ನಾನು ಹೋಗಿದ್ದೆ. For the first time I went There as Chief Minister No body visited immediately after the incident.

SRI D. DEVARAJ URS.—To that extent he has been the first Chief Minister to do it. ನಾನೂ ಕೂಡ ತಮ್ಮ ಮಾತಿಗೆ ತಲೆಬಾಗುತ್ತೇನೆ.

ಅಧ್ಯಕ್ಷರು.—ನಿಲುವಳಿ ಸೂಚನೆ ಮೇಲೆ ಇಷ್ಟು ಹೊತ್ತು ಮಾತನಾಡುತ್ತಾ ಹೋದರೆ......

ಶ್ರೀ ಡಿ. ದೇವರಾಜ ಅರಸ್.—ಈ ಮಾತನ್ನು ಯಾರಾದರೂ ಹೇಳಿದ್ದರೇ I want to know whether anybody has pointed out this ? ಇನ್ನು, ಬೆಲೆ ಏರಿಕೆ ವಿಚಾರ. ಇದರ ಬಗ್ಗೆ ಸರ್ಕಾರ ಬಹಳ ತೀವ್ರವಾಗಿ ಗಮನ ಕೊಡಬೇಕು. ಗುಂಡು ಹೊಡೆದು ಪರಿಸ್ಥಿತಿಯನ್ನು ಸಮಾಧಾನ ಮಾಡುತ್ತೇವೆ ಎಂದು ಹೊರಟರೆ ಅದು ನಮ್ಮ ದುರಾದೃಷ್ಟ. ಇದಕ್ಕಿಂತ ಹೆಚ್ಚಿಗೆ ಹೇಳುವುದಕ್ಕೆ ನಾನು ಇಷ್ಟಪಡುವುದಿಲ್ಲ. ನಮಗೆ ಪೊಲಿಟಿಕಲ್ ವಿಲ್ ಇಲ್ಲವೆಂದು ಹೇಳಿದ್ದಾರೆ. ಅದು ನಮಗೆ ಇದೆಯೋ. ಇಲ್ಲವೋ ಎನ್ನುವ ಪ್ರಶ್ನೆ ಇಲ್ಲಿಲ್ಲ. ಈಗ ಮುಖ್ಯಮಂತ್ರಿಯಾಗಿದ್ದೀರಿ. ನಿಮಗೆ ಅಂತಹ ವಿಲ್ ಇದೆಯೋ ಅಥವಾ ಇಲ್ಲವೋ ಎನ್ನುವ ಪ್ರಶ್ನೆ ಇಲ್ಲಿದೆ. ತಮಗೆ ಭರ್ಜರಿ ಪೊಲಿಟಿಕಲ್ ವಿಲ್ ಇದೆ ಎಂತಲೇ ತಿಳಿದುಕೊಳ್ಳೋಣ. ಇದೆಯೋ ? Will should be translated into action. What is the action ? Everyday prices are going up. ಹೀಗಿರಬೇಕಾದರೆ ಪರಿಸ್ಥಿತಿಯನ್ನು ಕೇವಲ ಗುಂಡು ಹೊಡೆದು ಮತ್ತು ಲಾಠಿ ಚಾರ್ಜ್ ಮಾಡಿ ನಿಲ್ಲಿಸುತ್ತೇನೆ, ತಾವು ಮನಸ್ಸು ಮಾಡಿದ್ದರೆ, ಅದು ಅತ್ಯಂತ ದುರಾದೃಷ್ಟ ಸಂಗತಿ.

ಮಿಲಿಟರಿ ತರಬಹುದು, ಮಾತೆತ್ತಿದರೆ ತಮಿಳುನಾಡಿನಲ್ಲಿ ೫೦ ಜನ ಸತ್ತು ಹೋದರು ಅಂತ ಹೇಳು ತ್ತೀರಿ, ಅದು ಸರಿ ಅನ್ನುವುದಾದರೆ ನಾವು ಅಡ್ಡಿ ಬರುವುದಿಲ್ಲ ಕಾನೂನು ಪಾಲನೆ ಮಾಡುವ ದೃಷ್ಟಿ ಯಿಂದ ಕೆಲವು ಕ್ರಮ ತೆಗೆದುಕೊಳ್ಳುವುದು ನ್ಯಾಯ, ಆದರೆ, ಯಾವ ಯಾವುದು ತಮ್ಮ ಕೈಯಲ್ಲಿದೆ. The price rise is due to the rise in prices of oil. I do not think that any economist in the country will be able to justify the price rise only on that ground. ಪೆಟ್ರೋಲ್ ಜಾಸ್ತಿ ಆದರೆ, ಟ್ರಾನ್ಸ್‌ಪೋರ್ಟ್ ಕೂಡ ಜಾಸ್ತಿಯಾ ಗುತ್ತೆ. ಎನ್‌ಕ್ವೈರಿ ಬಗ್ಗೆ ಒಂದು ಮಾತು ಹೇಳಿದ್ದೀರಿ. ವಿರೋಧ ಪಕ್ಷದ ನಾಯಕರ ಜೊತೆ ಮಾತನಾಡಿ ದ್ದೇನೆ ಎಂದು ಹೇಳಿದ್ದೀರಿ. 'ಸಭ್ಯ ಒಪ್ಪಂದದ' ಬಗ್ಗೆ ಹೇಳಿ, ಮೂರು ದಿವಸ ಆಯಿತು. ನಿಷ್ಪಕ್ಷಪಾತ ವಾದ ತನಿಖೆ ಮಾಡಿಸುತ್ತೇನೆಂದು ಹೇಳಿದ್ದೀರಿ......

ಶ್ರೀ ಆರ್. ಗುಂಡೂರಾವ್.— ನಾನು ಜಂಟಲ್‌ಮೆನ್ ಅಗ್ರಿಮೆಂಟ್ ಬಗ್ಗೆ ಹೇಳಿದ್ದು ನಿಜ. ಟೈಂ ಕೊಡಿ ಯೋಚನೆ ಮಾಡಿ ಹೇಳುತ್ತೇನೆಂದು ಹೇಳಿದ್ದು ನಿಜ.

ಶ್ರೀ ಡಿ. ದೇವರಾಜ ಅರಸ್ — ತಾವು ನ್ಯಾಯಾಂಗ ತನಿಖೆಗೆ ಒಪ್ಪಿಕೊಂಡರೆ, ಡೀಮಾರಲೈಸ್ ಎಫೆಕ್ಟ್ ಆಗುತ್ತೆ ಎಂದು ತಾವೇ ಹೇಳಿದ್ದೀರಿ. ನಾವು ಹೇಳಿದ್ದು ತಮ್ಮ ಮನಸ್ಸಿಗೆ ಸರಿಯಿಲ್ಲವೆಂದು ಕಾಣಬಹುದು. ನನಗೆ ಕಾಣುವುದು, ತಾವು ಆದಷ್ಟು ಜಾಗ್ರತೆ ನ್ಯಾಯಾಂಗ ತನಿಖೆಯನ್ನು ಅನೌನ್ಸ್ ಮಾಡಿದರೆ ಬಹಳ ಮಟ್ಟಿಗೆ ಈ ಚಳುವಳಿ ಮುಂದುವರೆಯುತ್ತಿರಲಿಲ್ಲ, ಜನತೆಯಲ್ಲಿ ಒಂದು ರೀತಿಯ ಸಮಾಧಾನ ಬಂದು ಬಿಡುತ್ತಿತ್ತು, ನನ್ನ ಪ್ರಾಮಾಣಿಕ ಅಭಿಪ್ರಾಯವನ್ನು ಹೇಳಿದ್ದೆ ನೀವು ಹೇಳಿದ್ದು

ನಿಮ್ಮ ಪ್ರಾಮಾಣಿಕ ಅಭಿಪ್ರಾಯ. ನಾನು ಹೇಳಿದ್ದು ನನ್ನ ಪ್ರಾಮಾಣಿಕ ಅಭಿಪ್ರಾಯ, ಇವತ್ತಿಗೂ ಕೂಡ ಚಳುವಳಿ ನಿಂತಿಲ್ಲ, ಸರ್ಕಾರದವರು ನಿಮ್ಮ ಅಭಿಪ್ರಾಯದ ಪ್ರಕಾರ ಸಮಾಧಾನಗೊಂಡಿದೆ ಎಂದು ಹೇಳಿದರೆ ನಾವು ಕೇಳಬೇಕಾಗಿಲ್ಲ. ನಮ್ಮ ಕರ್ತವ್ಯವನ್ನು ನಾವು ಮಾಡಿದ್ದೇವೆ. What is the use of beating about the bush again and again. Today is 28th. ಇನ್ನೇನು ೩೦ನೇ ತಾರೀಖು ಬಂತು. ಇನ್ನೆರಡು ದಿವಸದಲ್ಲಿ ಸರ್ಕಾರಕ್ಕೆ ಏನು ಸ್ವಾಮಿ ಅವಮಾನಕರವಾದ ವಿಚಾರವಾಗುತ್ತದೆ? ೩೦ನೇ ತಾರೀಖು ಅನೌನ್ಸ್ ಮಾಡಿದರೆ ಏನು? ಇವತ್ತು ಮಾಡಿದರೆ ಏನು? ದಯುವಿಟ್ಟು ನ್ಯಾಯಾಂಗ ತನಿಖೆಯನ್ನು ಅನೌನ್ಸ್ ಮಾಡಿ. ಟರ್ಮ್ಸ್ ಆಫ್ ರೆಫರೆನ್ಸ್ ಮತ್ತೊಂದು ಮಗದೊಂದು ಯಾರು ಕೇಳುವುದಕ್ಕೆ ಸಾಧ್ಯವಿಲ್ಲ, ನವಲಗುಂದ ಮತ್ತು ನರಗುಂದಕ್ಕೆ ಸಂಬಂಧಪಟ್ಟಂತೆ ಹೇಳುತ್ತಿದ್ದೇನೆ. ಗಂಗಾವತಿಗೆ ಸಂಬಂಧಪಟ್ಟಂತೆ ಹೇಳುತ್ತಿಲ್ಲ. ನ್ಯಾಯಾಂಗ ತನಿಖೆಗೆ ಒಪ್ಪಿಕೊಳ್ಳುವುದಕ್ಕೆ ನಿಮಗೆ ಇರತಕ್ಕ ವಿಷಮ ಪರಿಸ್ಥಿತಿ ಏನು ? ಇನ್ನು ಎರಡು ದಿವಸ ಬಿಟ್ಟು ಹೇಳುವ ಬದಲು ಇಂದೇ ಸರ್ಕಾರದ ಅಭಿಪ್ರಾಯವನ್ನು ತಿಳಿಸಿದರೆ, ಸರ್ಕಾರದ ಘನತೆ ಗೌರವಕ್ಕೆ ಕುಂದು ಏನಾದರೂ ಬರುತ್ತದೆಯೋ? ಸ್ವಾಮಿ, ಇದು ಸರ್ಕಾರದ ಘನತೆ ಗೌರವದ ಪ್ರಶ್ನೆಯಲ್ಲ, ಇವತ್ತು ಜನತೆಗೆ ಯಾವ ರೀತಿ ಸಮಾಧಾನ ಮಾಡಬೇಕು ಎಂಬುದು ಇರತಕ್ಕ ಪ್ರಶ್ನೆ ? ನ್ಯಾಯಾಂಗ ತನಿಖೆಗೆ ಒಪ್ಪಿಕೊಳ್ಳಿ, ನಿಮ್ಮ ಬೇಡಿಕೆಗಳನ್ನು ಸಭೆಯ ಮುಂದೆ ಇಡಿ, ಒಪ್ಪಿಗೆ ಕೊಡೋಣ. ಕಾರಣ ಇಲ್ಲದೆ ಹಿಡಿದುಕೊಂಡು ಹೋಗಿರುವಂತ ಜನಕ್ಕೆ ಹೇಗೆ ಸಮಾಧಾನ ಉಂಟು ಮಾಡಬೇಕೆಂಬ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ಕೆಲವು ಸಲಹೆಗಳನ್ನು ಮಾನ್ಯ ಬಸವಲಿಂಗಪ್ಪನವರು ಕೊಟ್ಟಿದ್ದಾರೆ. ಮಾನ್ಯ ಬೊಮ್ಮಾಯಿಯವರು ಕೊಟ್ಟಿದ್ದಾರೆ. ಆ ದೃಷ್ಟಿಯಿಂದ ತಾವು ನ್ಯಾಯಾಂಗ ತನಿಖೆಗೆ ಒಪ್ಪಿಕೊಳ್ಳಿ ನ್ಯಾಯ ಸಮ್ಮತವಾಗಿರುತ್ತದೆ, ಜನತೆಗೂ ಕೂಡ ಸಮಾಧಾನ ತರುತ್ತದೆಂದು ಈ ಸಂದರ್ಭದಲ್ಲಿ ತಮಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಆರ್. ಗುಂಡೂರಾವ್.— ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಚುನಾವಣೆ ಕಾಲದಲ್ಲಿ ಕೊಟ್ಟಂತ ಘೋಷಣೆಗಳು ಏನಾದವು ಎಂದು ಹೇಳಿದರು. ಈ ಸಂದರ್ಭದಲ್ಲಿ ಚುನಾವಣೆ ವಿಷಯವನ್ನು ಪ್ರಸ್ತಾಪ ಮಾಡುವುದು ಅಪ್ರಕೃತ ಎಂದು ತಿಳಿದುಕೊಂಡಿದ್ದೇನೆ. ಕಾರಣ, ಇಲ್ಲಿರತಕ್ಕ ವಿಷಯವೇ ಬೇರೆ. ಬೆಲೆ ಏರಿಕೆಗೆ ೧೫೦ ಕಾರಣಗಳಿವೆ. ಚುನಾವಣೆ ಸಮಯದಲ್ಲಿ ದೇಶದಲ್ಲಿ ಅಶಾಂತತೆ ತುಂಬಿತ್ತು, ಕೇಂದ್ರದಲ್ಲಿ ಬಲಿಷ್ಟವಾದ ನಾಯಕತ್ವದ ಕೊರತೆ ಇತ್ತು. ಬಲಿಷ್ಟವಾದ ಸರ್ಕಾರ ಕೇಂದ್ರದಲ್ಲಿ ಇಲ್ಲದೇ ಇದ್ದುದರಿಂದ ಅನೇಕ ರೀತಿಯಾದ ಕಾರಣಗಳು ಸಮಸ್ಯೆಗಳು ಹುಟ್ಟಿಕೊಂಡವು. ಅದರಲ್ಲಿ ಬೆಲೆ ಏರಿಕೆಯೂ ಒಂದು.

ಶ್ರೀ ಡಿ. ದೇವರಾಜ ಅರಸ್.— ತಂದೆ ಮಕ್ಕಳು ೨೮ ವರ್ಷದಿಂದ ಇದ್ದರೂ ಎನ್ನುವ ಮಾತನ್ನು ಹೇಳಬೇಕಾಗುತ್ತದೆ.

ಶ್ರೀ ಆರ್. ಗುಂಡೂರಾವ್.— ಇದಕ್ಕೆ ನಾವು ನೀವು ಎಲ್ಲರೂ ಕಾರಣರು. ಕಳೆದ ೨೭ ವರ್ಷಗಳಿಂದ ಎ.ಐ.ಸಿ.ಸಿ. ಹೋಗುತ್ತಿರಲಿಲ್ಲವೇ ? ಮುರಾರ್ಜಿ ಕೂಡ ಕಾರಣರು ಎಂದು ಹೇಳಬೇಕಾಗುತ್ತದೆ. We are all the part and parcel of the Congress. I am there for the last 10 years. You were alse there since its inception. You may not be responsible hundred per cent, but you are responsible for quarter of an inch

SRI D. DEVARAJ URS.— You are responsible. You are the Chief Minister.

ಶ್ರೀ ಆರ್. ಗುಂಡೂರಾವ್.— ತಾವು ಮುಖ್ಯಮಂತ್ರಿಗಳಾಗಿದ್ದಿರಿ? ತಾವು ಕಾರಣ, ಪರೋಕ್ಷವಾಗಿ ಪ್ರತಿಯೊಬ್ಬ ಮಂತ್ರಿಗಳೂ ಕಾರಣರಾಗಿದ್ದಾರೆಂದು ಹೇಳುತ್ತಿದ್ದೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ಗುಂಡೂರಾಯರು, ದೇವರಾಜ ಅರಸ್‌ರವರು ಜವಾಬ್ದಾರರೇ ಹೊರತು, ನಾವೇನೂ ಜವಾಬ್ದಾರರಲ್ಲ.

೫. ೩೦ ಪಿ.ಎಂ.

ಶ್ರೀ ಆರ್. ಗುಂಡೂರಾವ್.—ಸ್ವಾಮಿ, ಇವೊತ್ತು ನಮ್ಮ ಮನೆ ದೋಸೆ ತೂತು ಇಲ್ಲ ಇನ್ನೊಬ್ಬರ ಮನೆ ದೋಸೆ ತೂತು ಅಂತ ಹೇಳುವುದು ಬೇಡ. ಹಿಂದೆ ನೆಹರೂ ಆಗಲಿ, ಲಾಲ್‌ಬಹದ್ದೂರ್ ಶಾಸ್ತ್ರಿ ಅವರು ಆಗಲಿ, ಯಾರೇ ಇದ್ದಿರಲಿ, ಅವರು ಪಕ್ಷದ ನಿಯಮಾವಳಿ ಪ್ರಕಾರ ಭಾಷಣ ಮಾಡಿಲ್ಲವೇನು. ನಾನು ರಾಜಕೀಯದಲ್ಲಿ ಬಂದು ಹತ್ತು ವರ್ಷ ಆಗಿರಬಹುದು, ತಾವು ಬಂದು ಮುವತ್ತು ವರ್ಷ ಆಗಿರಬಹುದು. ಈ ದೇಶದಲ್ಲಿ ಒಳ್ಳೆಯ ಸರ್ಕಾರ ಬರಬೇಕಾದರೆ ಶ್ರೀಮತಿ ಇಂದಿರಾಗಾಂಧಿಯವರು ಬರಬೇಕು ಅಂತ ಹೇಳಿಲ್ಲವೇನು. ಇವೊತ್ತಿನ ದಿವಸ ಹಿಂದಿನದನ್ನೆಲ್ಲಾ ಹೇಳಿ ಪ್ರಯೋಜನ ಇಲ್ಲ, ಅದನ್ನು ನಾವು ನೀವು ಒಪ್ಪಿಕೊಳ್ಳೋಣ. ಚಿಕ್ಕಮಗಳೂರು ಎಲೆಕ್ಷನ್‌ನಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರನ್ನು ಏತಕ್ಕೆ ಕರೆದುಕೊಂಡು ಬಂದು ನಿಲ್ಲಿಸಬೇಕಾಗಿತ್ತು. ಚುನಾವಣೆ ಭಾಷಣದಲ್ಲಿ ನಾವು ನೀವು ಏನು ಹೇಳಿದ್ದೇವೆ. ಆ ದಿವಸ ತಾವು ಮುಖ್ಯ ಮಂತ್ರಿಯಾಗಿದ್ದಿರಿ, ಇವೊತ್ತು ನಾನು ಮುಖ್ಯ ಮಂತ್ರಿಯಾಗಿದ್ದೇನೆ. ಅದು ಬೇರೆ ಪ್ರಶ್ನೆ ಆದ್ದರಿಂದ ದಯವಿಟ್ಟು ಅದಕ್ಕೆಲ್ಲಾ ಹೋಗುವುದು ಬೇಡ. ಇವೊತ್ತು ಬೆಲೆಗಳು ಏರಿಕೆಯಾಗುತ್ತಿರುವುದಕ್ಕೆ ನಾನಾ ಕಾರಣಗಳು ಇವೆ. ಇದು ೬ ತಿಂಗಳಲ್ಲಿ ಬದಲಾವಣೆ ಆಗಬೇಕು ಅಂದರೆ ಏನು ಕಾರಣ ಇದೆ ಅದನ್ನು ನೋಡಬೇಕಾಗುತ್ತದೆ. ಈಗ ತಾವು ಏನು ಸಜೆಷನ್ ಕೊಡುತ್ತೀರಾ ಅದನ್ನು ನಾನು ಒಪ್ಪಿ ಕೊಳ್ಳುತ್ತೇನೆ. ಹಿಂದೆ ಪಾರ್ಲಿಮೆಂಟಿನಲ್ಲಿ ಪಿ-ಡಿ. ಆ್ಯಕ್ಟ್ ಪಾಸಾಗುವಾಗ ಬೇಕಾದಷ್ಟು ವಿರೋಧ ಆಯಿತು. ಅನಂತರ ಕೇರ್‌ಟೇಕರ್ ಗೌರ್ನ್‌ಮೆಂಟ್ ಆರ್ಡಿನೆನ್ಸ್ ತಂದರು. ನಿಮ್ಮ ಪಕ್ಷದವರು ಪಿ.ಡಿ. ಆ್ಯಕ್ಟ್ ಸರಿ ಅಂತ ವಾದ ಮಾಡಿದರು. ಈ ಪಿ.ಡಿ. ಆ್ಯಕ್ಟ್ ಮೇಲೂ ಕೂಡ ಅಂಡರ್ ೨೨೬ ಕಾನ್‌ಸ್ಟಿಟ್ಯೂಷನ್ ಪ್ರಕಾರ ಹೈಕೋರ್ಟಿಗೆ ರಿಟ್ ಹೋಗಿ ಬಿಡುಗಡೆಯಾಗಿ ಬಂದಿದ್ದಾರೆ.

SRI D. DEVARAJ URS.—I am sorry to intervene. This is no answer. Let the Central Government bring an amendment.

SRI R. GUNDU RAO.—I have pleaded this case in the recent Chief Minister's Conference. Whatever action we take under this Act, unfortunately in a day or two those people will be relesed on bail by the Courts. We are not here to discuss how they are released. ಚೀಫ್ ಮಿನಿಸ್ಟರ್ ಕಾನ್‌ಫರನ್ಸ್ ವರದಿ ಬರಲಿ ನಾನು ಏನು ಹೇಳಿದ್ದೇನೆ ಎನ್ನುವುದನ್ನು ತೋರಿಸುತ್ತೇವೆ. ಎರಡು ಮೂರು ಸಾರಿ ಬಿಟ್ಟುಬಿಟ್ಟರು ಅದರ ಎಫೆಕ್ಟ್ ಹೊರಟುಹೋಯಿತು. ಅದರ ಪರಿಣಾಮ ಹೋಯಿತು. ಲಕೂನ ಏನಿದೆ. ವೆಸ್ಟ್‌ಬೆಂಗಾಲ್ ಚೀಫ್ ಮಿನಿಸ್ಟರ್ ಇದು ಸಾಧ್ಯವಿಲ್ಲದ್ದು ಅಂತ ವಾದ ಮಾಡಿದರು. ಇದು ರಾಜಕೀಯ ಆಗುತ್ತದೆ ಅಂತ ಏನು ಏನೋ ಹೇಳಿದರು. ಇನ್ನು ಕೆಲವು ಮುಖ್ಯಮಂತ್ರಿಗಳು ವಿರೋದ ಮಾಡಿದರು, ಎರಡು ಜನ ಗವರ್ನರ್ ಇವನ್ನು ಮಾಡುವುದು ಸರಿ, ಆದರೆ ಇದನ್ನು ಇಂಪ್ಲಿಕೇಷನ ಮಾಡಲಿಕ್ಕೆ ಕಷ್ಟವಾಗುತ್ತದೆ ಅಂತ ಹೇಳಿದರು. I bearthe suggestion in my mind When I go to Delhi, I will definitely bring this matter to the Prime Minister and request her to bring an amendment to remove this lacuna in the PD Act.

SRI D. DEVARAJ URS.—If an amendment is brought to this Act, the same will be adopted by Parliament as the Cong-I is in majority.

SRI R. GUNDU RAO.—No doubt we have got 2/3rd majority in the Parliament but the interest of the country should be kept in mind.

SRI D. DEVARAJ URS.—When I said it, I meant it

SRI R. GUNDU RAO.—I welcome your suggestion. I hope your party will stand by that because you are the President of Cong-U. When you say I will take it. I will definitely bring to the notice of the concerned Minister and the Prime Minister and see that this lacuna is rectifi d by bringing an amendment to the P.D Act. ಅದರ ಬಗ್ಗೆ ನಾನು ಜಾಸ್ತಿ ಹೋಗುವುದಿಲ್ಲ. ಇನ್ನೊಂದು ಚಾನ್ಸ್ ಬರುವಾಗ ತಾವು ಎಲ್ಲಿ ಇರುತ್ತೀರೋ ಗೊತ್ತಿಲ್ಲ. ಈಗ ಸದ್ಯಕ್ಕೆ ಒಪ್ಪಿಕೊಂಡಿರೋಣ. ಸದ್ಯಕ್ಕೆ ಈ ಅಂಡರ್‌ಸ್ಟ್ಯಾಂಡಿಂಗ್ ಇರಲಿ.

ಶ್ರೀ ಡಿ. ದೇವರಾಜ ಅರಸ್.—ಅಧ್ಯಕ್ಷರೇ, ಇವರು ನನ್ನನ್ನು ಎಲ್ಲಿಗಾದರೂ ಕಳುಹಿಸಲಿಕ್ಕೆ ಬೇರೆ ಏನಾದರೂ ಯೋಚನೆ ಮಾಡುತ್ತಿದ್ದಾರೆಯೋ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೇ, ಅವರು ಎಲ್ಲಿ ಇರುತ್ತಾರೋ, ಇವರು ಎಲ್ಲಿ ಇರುತ್ತಾರೋ ಗೊತ್ತಿಲ್ಲ. ಈಗ ನಮ್ಮ ಜೊತೆ ಇದ್ದಾರೆ.

ಶ್ರೀ ಆರ್. ಗುಂಡೂರಾವ್.—ಅವರು ನಿಮ್ಮ ಜೊತೆ ಯಾವಾಗಲೂ ಇಲ್ಲ.

ಶ್ರೀ ಬಿ. ವಿ. ಕಕ್ಕಿಲಾಯ.—ಸ್ವಾಮಿ, ಈಗ ಪಿ. ಡಿ. ಆ್ಯಕ್ಟ್‌ನಲ್ಲಿ ; ಬ್ಲ್ಯಾಕ್‌ಮಾರ್ಕೆಟಿಯರ್ಸ್, ಸ್ಮಗಲರ್ಸ್, ಬೆಲೆ ಏರಿಸತಕ್ಕವರು ಯಾರು ಇದ್ದಾರೆ, ಇವರನ್ನು ಹತೋಟಿಗೆ ತರಲಿಕ್ಕೆ ಸಾಧ್ಯವಿಲ್ಲವೇ ? ಈಗ ಇರತಕ್ಕ ಕಾನೂನನ್ನೇ ಉಪಯೋಗ ಮಾಡಿ ಯಾವ ರೀತಿ ಬಿಗಿಯಾದ ಕ್ರಮ ತೆಗೆದುಕೊಳ್ಳುತ್ತೀರಾ ಎನ್ನುವ ಬಗ್ಗೆ ಆಶ್ವಾಸನೆ ಕೊಡಬೇಕು.

ಶ್ರೀ ಆರ್. ಗುಂಡೂರಾವ್.—ಅಧ್ಯಕ್ಷರೆ, ನಾನು ಸಂಬಂಧಪಟ್ಟ ಅಧಿಕಾರಿಗಳ ಜೊತೆ ಸಮಾಲೋಚನೆ ಮಾಡಿ ಬಿಗಿಯಾದ ಕ್ರಮ ತೆಗೆದುಕೊಳ್ಳಲಿಕ್ಕೆ ಖಂಡಿತ ಪ್ರಯತ್ನ ಮಾಡುತ್ತೇನೆ. ಮಾನ್ಯ ಸದಸ್ಯರಾದ ಬೊಮ್ಮಾಯಿ ಇವರಿಗೆ ಇವೊತ್ತು ಯಾವುದು ಅರ್ಥವಾಗುತ್ತಾ ಇಲ್ಲ. ನಿಮ್ಮ ರಾಜಕೀಯ ಪರಿಸ್ಥಿತಿ ಹೇಗೆ ಅಂತ ನಿಮಗೆ ಏನೂ ಅರ್ಥವಾಗುತ್ತಾ ಇಲ್ಲ. ಬಹಳ ಕಷ್ಟದಲ್ಲಿದ್ದೀರಿ. ರಾಜ್‌ನಾರಾಯಣ್ ಅವರು ಪುನಃ ರಾಜೀನಾಮೆ ಕೊಟ್ಟರು. ಈಗ ಏನು ಅವರು ನಮ್ಮ ಜೊತೆ ಇದ್ದಾರೆ ಅಂತ ಹೇಳಿದ್ದೀರಿ, ಅವರು ನಮ್ಮ ಜೊತೆ ಖಂಡಿತ ಇಲ್ಲ. ಅಲ್ಪಸ್ವಲ್ಪ ಇನ್‌ಡೈರೆಕ್ಟಾಗಿ ಇದ್ದರೆ ನಮ್ಮ ಜೊತೆ ಇರುತ್ತಾರೆ ಹೊರತು ನಿಮ್ಮ ಜೊತೆಯಲ್ಲಿ ಇರುವುದಿಲ್ಲ ಅಂತ ಸ್ಪಷ್ಟವಾಗಿ ಹೇಳುತ್ತೇನೆ. ನಾನು ೩೧ನೇ ತಾರೀಖಿನ ದಿವಸ ತಿಳಿಸುತ್ತೇನೆ ಅಂತ ಈಗಾಗಲೇ ಹೇಳಿದ್ದೇವೆ.

SRI D.DEVARAJ URS.–Will you order for judicial enquiry on 31st? I think this is a Gentlemen's Agreement.

SRI R. GUNDU RAO.—I had told you about the impartial enquiry, What type of impartial enquiry it is will be made known to you.

SRI D. DEVARAJ URS.—The impartial enquiry is only for the cousumption of the House.

SRI R. GUNDU RAO.—The mode of enquiry will be announced on that day,

SRI D. DEVARAJ URS.—The agreement is that you should make it a judicial enquiry.

SRI R. GUNDU RAO.—This is a breach of agreement and breach of trust, I have to say that. I never thought that you will go back upon your word.

SRI D. DEVARAJ URS.—If you want to make it, declare it now itself.

SRI R. GUNDU RAO.—I have never gone back in all my decisions so far. In my political career I never went back on the commitments I made. You must have patience till 31st. I am going to announce on 31st.

SRI D. DEVARAJ URS.—What is it you are announcing on 31st ?

SRI R. GUNDU RAO.—As per agreement I shall announce it. I don't understand why my elder friend is so anxious or so emotional.

SRI D. DEVARAJ URS.—It is not out of emotion; you are young I am elderly. So for my age I can afford to be more patient than you. I would only suggest, let us not move in those personal level. I did say and even now I say. Two days time makes much difference. I also said that if you do it now, it will be better from the point of view of diffusing the situation. I did say and even now I may.

ಶ್ರೀ ಎಸ್. ಆರ್. ಬೊಮ್ಮಾಯಿ.— ಚರ್ಚೆ ಮಾಡಿದ್ದೇವೆ. ಎಲ್ಲ ಬಯಲಾಗಿದೆ. ನಾನು ಮುಖ್ಯ ಮಂತ್ರಿಗಳನ್ನು ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುವುದೇನೆಂದರೆ ಮುಂದಕ್ಕೆ ಹಾಕುವುದರಿಂದ ಲಾಭ ಏನೂ ಇಲ್ಲ. ಇಷ್ಟೆಲ್ಲಾ ಚರ್ಚೆಯಾಗಿದೆ. ನಾಳೆ ಜನಗಳಿಗೆ ಗೊತ್ತಾಗುತ್ತದೆ. ದಯಮಾಡಿ ಹೇಳಿಬಿಡಿ ನ್ಯಾಯಾಂಗ ವಿಚಾರಣೆಯನ್ನು ಮಾಡಿಸುತ್ತೇನೆಂದು ಇವತ್ತೇ ಅನೌನ್ಸ್ ಮಾಡಿ. ಇದನ್ನು ಪ್ರತಿಷ್ಠೆ ಎಂಬುದಾಗಿ ಭಾವಿಸಬೇಡಿ. ಸಾರ್ವಜನಿಕರ ಹಿತದೃಷ್ಟಿಯಿಂದ ಇವತ್ತೇ ಅನೌನ್ಸ್ ಮಾಡಿಬಿಡಿ.

ಶ್ರೀ ಆರ್. ಗುಂಡೂರಾವ್.—ನಾನು ಈಗಾಗಲೇ ಹೇಳಿದ್ದೇನೆ. ಆವತ್ತೇ ಈ ಒಂದು ವಿಚಾರದಲ್ಲಿ ನಾವೂ ನೀವೂ ಒಪ್ಪಿದ್ದೇವೆ. ನಾರ್ಮ್ಸ್ ವಿಚಾರದಲ್ಲಿ ನಂತರ ವಿಚಾರಮಾಡುವುದು ಅಂತ, ಈ ಬಗ್ಗೆ ನಾನು ಗುರುವಾರ ಸ್ಟೇಟ್‌ಮೆಂಟ್ ಮಾಡುತ್ತೇವೆಂದೂ ಹೇಳಿದ್ದೇನೆ. I think Sri S. R. Bommai has given on that day and I expect the same thing from all the opposition party. Because ಅಂದು ಎಲ್ಲಾ ರಾಜಕೀಯ ಪಕ್ಷದವರೂ ಸೇರಿ ಮಾತನಾಡಿದ್ದೇವೆ. ಒಂದು ತೀರ್ಮಾನಕ್ಕೆ ಬಂದಿದ್ದೇವೆ. ಸಾಮಾಧಾನಕರವಾದ ವಾತಾವರಣ ಅಲ್ಲಿ ಬರುವುದಕ್ಕೆ ನಾವುಗಳೆಲ್ಲರೂ ಒಪ್ಪಿಕೊಂಡಿದ್ದೇವೆ.

ಶ್ರೀ ಡಿ. ದೇವರಾಜ ಅರಸ್.—ಚರ್ಚೆ ನಡೆದದ್ದು ನಿಜ. ಇದುವರೆಗೂ ಏನೂ ಹೇಳಿಲ್ಲ. ಚಳುವಳಿಯನ್ನು ನಿಲ್ಲಿಸಿ ಅಂತಲೂ ಹೇಳಿಲ್ಲ. ನಿಲ್ಲಿಸಬೇಡಿ ಅಂತಲೂ ಹೇಳಿಲ್ಲ. To that extent we have honoured and committed. But I have also stated if you want our co-operation or any statement, you please do this much ಅಂತ ಹೇಳಿದ್ದೇವೆ. ಕರ್ಫ್ಯೂ ತೆಗೆಯಿರಿ ಅಂತ ಹೇಳಿದ್ದೇವೆ. ಆದರೆ ನೀವು ಇದುವರೆಗೂ ತೆಗೆದಿಲ್ಲ. ಮತ್ತೇ innocent ಜನಗಳನ್ನು ಬಿಟ್ಟು ಬಿಡಿ ಎಂಬುದಾಗಿ ಹೇಳಿದೆವು. ಇದನ್ನೂ ತಾವು ಇನ್ನೂ ಮಾಡಿಲ್ಲ. ಅಷ್ಟೆಲ್ಲಾ ಇದ್ದರೂ How do you expect us to give a statement ? Please tell us.

ಶ್ರೀ ಆರ್. ಗುಂಡೂರಾವ್.—ಎಲ್ಲರೂ ಹೇಳುತ್ತೀರಿ. ಅಲ್ಲಿ ಸಮಾಧಾನಕರವಾದ ವಾತಾವರಣ ಇರಬೇಕೆಂದು ಇವತ್ತಿನವರೆಗೂ ಅಲ್ಲಿ ಯಾವುದೇ ರೀತಿಯಾದ ಸಮಾಧಾನಕರವಾದ ವಾತಾವರಣ ಬಂದಿಲ್ಲ. ಸಮಾಧಾನಕರವಾದ ವಾತಾವರಣ ಬಂದಮೇಲೆ ಕರ್ಫ್ಯೂವನ್ನು ಇಟ್ಟುಕೊಂಡು ಯಾರು ಹೆಮ್ಮೆ ಪಟ್ಟುಕೊಳ್ಳಬೇಕಾಗಿದೆ, ಯಾರಿಗೂ ಇಲ್ಲ. ಗೋಲಿ ಬಾರ್ ಮಾಡುವುದಕ್ಕೆ ಯಾರಿಗೆ ಹೆಮ್ಮೆ

ಯಾಗುತ್ತದೆ ? ಸಮಾಧಾನಕರವಾದ ವಾತಾವರಣ ಬಾರದೆ ಕರ್ಫ್ಯೂವನ್ನು ತೆಗೆದುಬಿಟ್ಟರೆ ಹೇಗೆ ? ಇದನ್ನೂ ತಾವು ಯೋಚನೆ ಮಾಡಿನೋಡಿ.

ಶ್ರೀ ಡಿ. ದೇವರಾಜ ಅರಸ್.—ಕಳೆದ ಮೂರು ದಿನಗಳಿಂದ ಆ ಏರಿಯಾದಲ್ಲಿ ಬಹಳಷ್ಟು ಅರೆಸ್ಟ್‌ಗಳು ಜಾಸ್ತಿಯಾಗಿದೆ, ಎಂಬ ದೂರು ಇದೆ.

ಶ್ರೀ ಆರ್. ಗುಂಡೂರಾವ್.—ಅರೆಸ್ಟ್ ಜಾಸ್ತಿಯಾಗಿದ್ದರೆ ವಿಚಾರಮಾಡುತ್ತೇವೆಂದು ಆಗಲೇ ಹೇಳಿದ್ದೇನೆ. ರೈತರ ಜೊತೆಯಲ್ಲಿ ಸಮಾಲೋಚನೆ ಮಾಡುವುದಕ್ಕೆ ತಯಾರಾಗಿದ್ದೇನೆ. ಅವರು ಯಾರ್‍ಯಾರು ಎಂಬುದನ್ನು ಹೇಳಬೇಕಲ್ಲ......

ಶ್ರೀ ಎಸ್. ಆರ್. ಬೊಮ್ಮಾಯಿ.—ಅವರು ತಮ್ಮ ಪ್ರತಿಭಟನೆಯನ್ನು ಶಾಂತ ರೀತಿಯಿಂದ ಮುಂದುವರಿಸುತ್ತಾರೆ. ಅಲ್ಲಿಯ ವಾತಾವರಣ ತಿಳಿಯಾಗಬೇಕಾದರೆ ನ್ಯಾಯಾಂಗ ವಿಚಾರಣೆಯನ್ನು ಮಾಡುತ್ತೇವೆಂದು ಇವತ್ತೇ ಅನೌನ್ಸ್ ಮಾಡಿಬಿಡಿ.

ಶ್ರೀ ಆರ್. ಗುಂಡೂರಾವ್. — ಒಪ್ಪಿಕೊಂಡಿದ್ದೇನಲ್ಲಾ. ತಾವು ಒಂದೊಂದು ಗಳಿಗೆಗೂ ಬದಲಾವಣೆಯಾಗಬೇಡಿ. That will help you always in politics. Be firm on certain issues. The Leader of the Opposition has not issued any press statement to stop the strike so far. ಅವರೂ ಇನ್ನೂ ಮಾಡಿಲ್ಲ. ಬಹುಶಃ ಮಾಡಬಹುದು. ಚಳುವಳಿ ನಿಲ್ಲುವುದಿಲ್ಲ, ಮುಂದುವರಿಯುತ್ತದೆಂದು ಧಾರವಾಡದಲ್ಲಿ ಪಾಂಪ್ಲೆಂಟ್ ಹಂಚಿದ್ದಾರೆ. ಅದರಲ್ಲಿ ಕಾಂಗ್ರೆಸ್(ಯು) ಅಂತ ಇದೆ. ಇದು ಸಾಮಾನ್ಯವಾಗಿ ಆ ಪಕ್ಷದ ಅಧ್ಯಕ್ಷರಿಗೆ ಗೊತ್ತಿಲ್ಲದೇ ಇರಬಹುದು. ಅದನ್ನು ಅವರೇ ಮಾಡಿದ್ದಾರೆಂದು ನಾನು ಹೇಳುವುದಿಲ್ಲ. ಏಕೆಂದರೆ ಕಾಂಗ್ರೆಸ್‌ನಲ್ಲಿ ಇವೆಲ್ಲಾ ಅಲ್ಲಿಯ ಲೋಕಲ್‌ನವರು ಮಾಡುವುದೂ ಉಂಟು. ನಿಮ್ಮ ಪಕ್ಷದ ಬಗೆ ಎಲ್ಲೂ ಇನ್ನೂ ನಮ್ಮ ಗಮನಕ್ಕೆ ಬಂದಿಲ್ಲ.

ಶ್ರೀ ಕೆ. ಎಚ್. ಶ್ರೀನಿವಾಸ್. — ನನಗೆ ಅನುಮಾನ ಬಂದಿರುವುದು ನೀವೇ ನಮ್ಮ ಕಡೆ ಬರಬಹುದು.

ಶ್ರೀ ಡಿ. ದೇವರಾಜ ಅರಸ್.—ಈ ಮಾತನ್ನು ಒತ್ತಟ್ಟಿಗೆ ಇಡಿ.

ಅಧ್ಯಕ್ಷರು.— ಪರ್ಸನಲ್ ಆಗಿ ಮನೆಯಲ್ಲಿ ಮಾತನಾಡಬಹುದು. ಆದರೆ ಇಲ್ಲಿ ಹೇಳಿ ಸ್ವಾಮಿ. ವಿಷಯದ ಬಗ್ಗೆ ಮಾತನಾಡಿ.

(ನಗು)

ಶ್ರೀ ಆರ್. ಗುಂಡೂರಾವ್.—ಆಮೇಲೆ ಯೋಚನೆ ಮಾಡೋಣ.

ಅಧ್ಯಕ್ಷರು.—ಕಾರ್ಯಕ್ರಮದ ಪಟ್ಟಿಯಲ್ಲಿ ಇರತಕ್ಕಂತಹ ವಿಷಯಗಳನ್ನು ಮುಂದಿಟ್ಟು, ನಿಲುವಳಿ ಸೂಚನೆಯನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ಶ್ರೀಮಾನ್ ಎಸ್. ಆರ್. ಬೊಮ್ಮಾಯಿ ಅವರು ಮತ್ತು ಇತರೇ ಮಾನ್ಯ ಸದಸ್ಯರು ಕೊಟ್ಟಿರತಕ್ಕಂತಹ ನಿಲುವಳಿ ಸೂಚನೆಯ ಬಗ್ಗೆ ಸಾಕಷ್ಟು ಚರ್ಚೆ ನಡೆದಿದೆ. ಆ ಪ್ರಕರಣಗಳ ವಿಷಯಗಳನ್ನು ಹೇಳುವಾಗ ಹೇಳುವಂತಹ ವಿಷಯಗಳನ್ನೆಲ್ಲಾ ಹೇಳಿಂದತಾಗಿದೆ. ಮತ್ತು ಸಾಕಷ್ಟು ಸಲಹೆಗಳನೂ ಸರ್ಕಾರಕ್ಕೆ ಹೇಳಿದ್ದಾರೆ. ನನಗೆ ಇದು ಒಂದು ನಿರ್ಧಿಷ್ಟವಾದ ವಿಚಾರ ಅಂತ ಹೇಳಿ ನಿಯಮ ೫೦ರ ಕೆಳಗೆ ಏನು ತಂದಿದ್ದಾರೆ, ಅದಕ್ಕೆ ನಾನು ಒಪ್ಪಿಗೆ ಕೊಡುವುದಕ್ಕೆ ಸಾಕಷ್ಟು ಕಾರಣಗಳನ್ನೂ ಮತ್ತು ಆಧಾರ ಸಹಿತವಾಗಿ ಇರತಕ್ಕಂತಹ ಅಂಶಗಳನ್ನು ಕೊಟ್ಟಿಲ್ಲದೆ ಇರುವುದರಿಂದ ನನ್ನ ಅಪ್ಪಣೆಯನ್ನು ತಡೆಹಿಡಿದಿದ್ದೇನೆ. ಮಾನ್ಯ ಸದಸ್ಯರು ಅಕಸ್ಮಾತ್ ಆ ವಿಷಯಗಳ ಬಗ್ಗೆ ಚರ್ಚೆ ಮಾಡತಕ್ಕಂತಹದ್ದು ಅತ್ಯಂತ ಅವಶ್ಯಕ ಅಂತ ಕಂಡರೆ ಅದನ್ನು ಮುಖ್ಯ ಮಂತ್ರಿಗಳಿಗೆ ಸಂಬಂಧಪಟ್ಟಂತಹ ಬೇಡಿಕೆಗಳ ಮೇಲೆ ಮಾತನಾಡುವಾಗ ಈ ಎಲ್ಲ ವಿಷಯಗಳನ್ನೂ ಪ್ರಸ್ತಾಪ ಮಾಡಿ ಸರ್ಕಾರಕ್ಕೆ ಸಲಹೆಗಳನ್ನು ಸೂಚಿಸಬಹುದೆಂದು ನಾನು ಸಲಹೆ ಮಾಡುತ್ತೇನೆ.

ಶ್ರೀ ಆರ್. ಗುಂಡೂರಾವ್.—ತಮಗೆ ಗೊತ್ತಿದ್ದ ಹಾಗೆ ಸಭಾ ಸಲಹಾ ಸಮಿತಿಯಲ್ಲಿ ತೀರ್ಮಾನ ಮಾಡಿದ್ದೇವೆ. ಈಗ ಒಟ್ಟು ೩೪ ಡಿಮ್ಯಾಂಡ್‌ಗಳು ಇವೆ ಅಂತ ಕಾಣುತ್ತದೆ. ಇನ್ನು ಎರಡು ದಿವಸ ಮಾತ್ರ ಸದನ ಕೊಡುತ್ತದೆ. ನಾವು ತೀರ್ಮಾನ ಮಾಡಿದಂತೆ ೩೦ನೇ ತಾರೀಖು ಬೆಳಿಗ್ಗೆ ೯ ಗಂಟೆಗೆ ನನ್ನ

ಉತ್ತರ ಅಂತ ತೀರ್ಮಾನವಾಗಿತ್ತು. ಮತ್ತೆ ನಾಳೆ ಬೆಳಿಗ್ಗೆ ಇನ್ನೊಂದು ನಿರ್ಣಯ ಇದೆ ಅಂತ ಕೇಳಿದ್ದೇನೆ. ಅದು ಸಾಧಾರಣ ೨ ಗಂಟೆಯವರೆಗೂ ಹೋಗಬಹುದು. ಇದನ್ನೆಲ್ಲಾ ನೋಡಿದರೆ ಯಾವ ರೀತಿ ಈ ಎಲ್ಲ ಬೇಡಿಕೆಗಳ ಮೇಲೆ ಮಾನ್ಯ ಸದಸ್ಯರು ಚರ್ಚೆ ಮಾಡುತ್ತಾರೆಂದು ನನಗೆ ತಿಳಿಯದು. ಮತ್ತೆ ಇದನ್ನೆಲ್ಲಾ ನೋಡಿದರೆ ಬಹುಶಃ ಗಿಲ್ಲೆಟಿನ್ ಮಾಡುವುದು ಒಂದೇ ದಾರಿ ಅಂತ ಕಾಣುತ್ತದೆ.

ಅಧ್ಯಕ್ಷರು.—೩೧ನೇ ತಾರೀಖು ಬಿಲ್ಲುಗಳು ಇವೆ. ನಾಳೆನೇ ಮುಗಿಯಬೇಕು.

ಶ್ರೀ ಆರ್. ಗುಂಡೂರಾವ್.—ನಮ್ಮ ಸರ್ಕಾರ ಬಂದು ೬ ತಿಂಗಳಾಯಿತು. ಮಾನ್ಯ ಸದಸ್ಯರು ಕೆಲವು ಮಹತ್ವವಾದ ಸಲಹೆಗಳನ್ನು ಕೊಡಬಹುದು. ಮಹತ್ವವಾದ ಇಲಾಖೆಗಳು ಇವೆ. ಅವುಗಳಲ್ಲಿ ಮುಖ್ಯವಾದವುಗಳು ಯಾವುವೆಂದರೆ, ಬಿಡಿಎ ಗೃಹ ಇಲಾಖೆ, ನೀರಾವರಿ ಇಲಾಖೆ, ಕೈಗಾರಿಕಾ, ಲೋಕೋಪಯೋಗಿ ಮತ್ತು ಅರಣ್ಯ ಇಲಾಖೆಗಳು ಇವುಗಳೆಲ್ಲವುಗಳ ಬಗ್ಗೆ ಒಳ್ಳೆಯ ಸಲಹೆಗಳನ್ನು ಮಾನ್ಯ ಸದಸ್ಯರು ಕೊಡುತ್ತಾರೆಂದು ನಾನು ಅಪೇಕ್ಷೆಪಟ್ಟಿದೆ. ಆದರೆ ಕಾಲ ಬಹಳ ಕಡಿಮೆ ಇದೆ. ಯಾವ ರೀತಿ ಮಾಡಿಕೊಳ್ಳುತ್ತಾರೋ ಅದು ಅವರಿಗೆ ಬಿಟ್ಟದ್ದು. ೩೦ನೇ ತಾರೀಖು ಬೆಳಗ್ಗೆ ೯ ಗಂಟೆಗೆ ನಾನು ಉತ್ತರ ಕೊಡಬೇಕಾಗುತ್ತದೆ and 31st it has to be passed in the Council.

MR. SPEAKER.—The House now stands adjourned to meet again at 9-00 A. M. tomorrow.

The House adjourned at Fifty Minutes past Five of the Clock to meet at Nine of the Clock on Tuesday, the 29th July 1980.

WD 2829